ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ನವೆಂಬರ್ 18 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 211 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಸಹಕಾರಕ್ಕೆ ಸದಾ ಸಹಕಾರಿ

ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಪದವೀಧರರಿಗೆ ಉದ್ಯೋಗದಲ್ಲಿ ಮೀಸಲಾತಿ ಚಿಂತನೆ: ಜಿಟಿಡಿ ಪ್ರಸ್ತಾಪಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಕಾರಾತ್ಮಕ ಸ್ಪಂದನೆ



ಬಾಗಲಕೋಟೆಯಲ್ಲಿ ಭಾನುವಾರ ನಡೆದ ಅಖಿಲ ಭಾರತ ಸಹಕಾರಿ ಸಪ್ತಾಹದಲ್ಲಿ ಹಿರಿಯ ಸಹಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ ಮಾಡಿದರು. ಸಹಕಾರ ಸಚಿವ ಕೆ.ಎನ್. ರಾಜಣ್ಣ, ಶಾಸಕ ಜಿ.ಟಿ. ದೇವೇಗೌಡ, ಸಹಕಾರ ಮಹಾಮಂಡಳದ ಅಧ್ಯಕ್ಷ ಹೆಚ್.ವಿ. ರಾಜೀವ್ ಇನ್ನಿತರರು ಉಪಸ್ಥಿತರಿದ್ದರು.

ಬಾಗಲಕೋಟೆ, ನ.17– ಕೋ ಆಪರೇಟಿವ್ ಮ್ಯಾನೇಜ್‌ಮೆಂಟ್ ಪದವೀಧರರಿಗೆ ಉದ್ಯೋಗದಲ್ಲಿ ಮೀಸಲಾತಿ ತರುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಘೋಷಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಅಪೆಕ್ಸ್ ಬ್ಯಾಂಕ್ ಆಯೋಜಿಸಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟಿಸಿ, 2024ನೇ ಸಾಲಿನ ಸಹಕಾರ ರತ್ನ ಪ್ರಶಸ್ತಿ ವಿತರಿಸಿ ಮಾತನಾಡಿದರು. ನಾನು ಯಾವತ್ತೂ ಸಹಕಾರಿ ಚಳವಳಿ ಮತ್ತು ಸಹಕಾರಿ ತತ್ವದ ಪರವಾಗಿ ಇರುವವನು. ಈ ಕಾರಣಕ್ಕೆ ಸಹಕಾರ ಇಲಾಖೆಯ ನೇಮಕಾತಿಗಳಲ್ಲಿ ಕೋ ಆಪರೇಟೀವ್ ಮ್ಯಾನೇಜ್‌ಮೆಂಟ್ ಪದವಿ, ಡಿಪ್ಲೋಮಾ ಪಡೆದವರಿಗೆ ಮೀಸಲಾತಿ ನೀಡುವ ಪರವಾಗಿದ್ದೀನಿ ಎಂದರು.

ರಾಜ್ಯದಲ್ಲಿ ಸಹಕಾರಿ ಚಳವಳಿ 1904ರ ಸ್ವಾತಂತ್ರ್ಯ ಪೂರ್ವದಲ್ಲೇ ಆರಂಭವಾಗಿತ್ತು. 1905ರಲ್ಲಿ ಸಹಕಾರಿ ನಿಯಮಗಳು ಜಾರಿಗೆ ಬಂದವು. ಸ್ವಾತಂತ್ರ್ಯನಂತರ ನೆಹರೂ ಅವರು ದೇಶದ ಪ್ರಧಾನಿಯಾಗಿ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಬೆಂಬಲ ಮತ್ತು ಪ್ರೋತ್ಸಾಹ ಕೊಟ್ಟಿದ್ದರಿಂದ ಸಹಕಾರಿ ಚಳವಳಿ ದೇಶವ್ಯಾಪಿ ವ್ಯಾಪಿಸಲು ಸಹಕಾರಿಯಾಯಿತು ಎಂದರು. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು ಹೆಚ್ಚೆಚ್ಚು ಸಹಕಾರಿ ಚಳವಳಿಯಲ್ಲಿ ತೊಡಗಿಸಿಕೊಳ್ಳಬೇಕು. ನಾನು ಮುಖ್ಯಮಂತ್ರಿಯಾಗಿದ್ದಾಗ ಸಹಕಾರ ಸಂಘಗಳಿಗೆ ಈ ಸಮುದಾಯದ ಯುವಕ/ ಯುವತಿಯರನ್ನು ಉಚಿತವಾಗಿ ಸದಸ್ಯರನ್ನಾಗಿ ಮಾಡಿದ್ದೆ. ಈಗಲೂ ಇದು ಮುಂದುವರೆಯಬೇಕು ಎಂದು ಕರೆ ನೀಡಿದರು.

ಹಾಲು ಉತ್ಪಾದಕ ಸಹಕಾರ ಸಂಘಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು ಮತ್ತು ಇವರಿಂದ ಹೆಚ್ಚೆಚ್ಚು ಹಾಲನ್ನು ಖರೀದಿಸಬೇಕು. ಸಹಕಾರ ಸಂಘಗಳ ಹಾಲಿಗೆ ಮಾರುಕಟ್ಟೆ ವಿಸ್ತರಿಸಬೇಕು. ಚನ್ನಪಟ್ಟಣ ತಾಲೂಕೊಂದರಲ್ಲೇ 3 ಲಕ್ಷ ಲೀಟರ್ ಹಾಲು ಉತ್ಪಾದನೆ ಆಗುತ್ತಿದೆ. ಒಂದು ಲೀಟರ್ ಹಾಲಿಗೆ 31 ರೂ ಅಂದರೆ 3 ಲಕ್ಷ ಲೀಟರ್‌ಗೆ ಕೋಟಿ ರೂಪಾಯಿ ಆಗುತ್ತದೆ. ಇದು ಆರ್ಥಿಕತೆಗೂ ಹೆಚ್ಚಿನ ಕೊಡುಗೆ ನೀಡಿದಂತಾಗುತ್ತದೆ. ಹಾಲು ಉತ್ಪಾದಕರಿಗೆ ಅನುಕೂಲ ಆಗುವ ಉದ್ದೇಶದಿಂದಲೇ ನಮ್ಮ ಸರ್ಕಾರ ಕ್ಷೀರಭಾಗ್ಯ ಆರಂಭಿಸಿತು. ಲೀಟರ್ ಹಾಲಿಗೆ 5 ರೂ. ಪ್ರೋತ್ಸಾಹ ಧನ ನೀಡುವುದನ್ನು ನಮ್ಮ ಅವಧಿಯಲ್ಲಿ ಆರಂಭಿಸಲಾಯಿತು. ರೈತರ ಕೈಯಲ್ಲೇ ಹಾಲು ಉತ್ಪಾದಕ ಸಂಘಗಳು ಇರಬೇಕು ಎನ್ನುವ ಉದ್ದೇಶದಿಂದ ಡೈರಿಗಳನ್ನು ರೈತರಿಗೇ ನೀಡುವ ತೀರ್ಮಾನ ಮಾಡಿದೆವು. ● 9ನೇ ಪುಟಕ್ಕೆ

ಮೈಸೂರಿನ ಮೂವರು ವಿದ್ಯಾರ್ಥಿನಿಯರು ಮಂಗಳೂರು ಬಳಿ ರೆಸಾರ್ಟ್ ಸ್ವಿಮ್ಮಿಂಗ್‌ಪೂಲ್‌ನಲ್ಲಿ ಜಲಸಮಾಧಿ

- ವಾರಾಂತ್ಯದ ರಜೆ ಕಳೆಯಲು ಹೋಗಿದ್ದ ಬಾಲ್ಯದ ಗೆಳತಿಯರು
- ರೆಸಾರ್ಟ್‌ನಲ್ಲಿ ಲೈಫ್ ಗಾರ್ಡ್ ಯಾರೂ ಇರಲಿಲ್ಲ
- ಕೊನೇ ಕ್ಷಣದಲ್ಲಿ ವಿದ್ಯಾರ್ಥಿನಿಯರು ಕೂಗಾಡಿದರೂ ಯಾರೂ ರಕ್ಷಣೆಗೆ ಬರಲಿಲ್ಲ



ಪಾರ್ವತಿ



ನಿಶಿತಾ



ಕೀರ್ತನಾ

ಮಂಗಳೂರು(ಉಲ್ಲಾಳ), ನ.17 (ಎಂಟಿವೈ)– ಪರೀಕ್ಷೆ ಮುಗಿದ ಖುಷಿಗೆ ವಾರಾಂತ್ಯ ರಜೆ ಕಳೆಯಲು ತೆರಳಿದ್ದ ಮೈಸೂರಿನ ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿನಿಯರು ಈಜುಕೊಳದಲ್ಲಿ ಮುಳುಗಿ ಮೃತಪಟ್ಟ ದಾರುಣ ಘಟನೆ ಮಂಗಳೂರಿನ ಉಲ್ಲಾಳ ಪೊಲೀಸ್ ಠಾಣಾ ವ್ಯಾಪ್ತಿಯ ಉಚ್ಚಿಲ ಸಮುದ್ರ ತೀರದ ವಾಸ್ಕೊಸ್ ರೆಸಾರ್ಟ್‌ನಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜಿನ ಅಂತಿಮ ವರ್ಷದ ಬಿಇ ವಿದ್ಯಾರ್ಥಿನಿಯರಾದ ಕುರುಬಾರಹಳ್ಳಿಯ ನಿವಾಸಿ ಮಲ್ಲೇಶ್ ಎಂಬುವರ ಪುತ್ರಿ ಎಂ.ಡಿ.ನಿಶಿತಾ ಅಲಿಯಾಸ್ ನಿಶ್ಚಿತಾ (21), ಅಗ್ರಹಾರದ ರಾಮಾನುಜ ರಸ್ತೆಯ ನಿವಾಸಿ ಎಂ.ಎನ್.ಶ್ರೀನಿವಾಸ್ ಪುತ್ರಿ ಎಸ್.ಪಾರ್ವತಿ(20), ಹೆಬ್ಬಾಳು 2ನೇ ಹಂತದ ನಿವಾಸಿ ನವೀನ್‌ಕುಮಾರ್ ಪುತ್ರಿ ಎನ್.ಕೀರ್ತನಾ(21) ● 9ನೇ ಪುಟಕ್ಕೆ



ಮಂಗಳೂರಿನ ಉಲ್ಲಾಳ ಸಮೀಪದ ಉಚ್ಚಿಲ ಬಳಿ ರೆಸಾರ್ಟ್‌ನ ಈಜುಕೊಳದಲ್ಲಿ ಮುಳುಗುವ ಮುನ್ನ ಮೈಸೂರಿನ ಮೂವರು ಯುವತಿಯರು ಆಟವಾಡುತ್ತಿರುವುದು.

ರೆಸಾರ್ಟ್ ಸೀಲ್, ಮಾಲೀಕ ಪೊಲೀಸರ ವಶದಲ್ಲಿ

ಪ್ರಾಥಮಿಕ ತನಿಖೆಯಲ್ಲಿ ರೆಸಾರ್ಟ್‌ನ ಈಜುಕೊಳದಲ್ಲಿ ನಿಯಮ ಪಾಲಿಸದಿರುವುದು ಕಂಡುಬಂದಿದ್ದು, ರೆಸಾರ್ಟ್ ಮಾಲೀಕ ಮನೋಹರ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ರೆಸಾರ್ಟ್ ತಾತ್ಕಾಲಿಕವಾಗಿ ಸೀಲ್ ಮಾಡಿದ್ದಾರೆ. ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗರ್‌ವಾಲ್ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಬಳಿಕ ಮಾತನಾಡಿದ ಅವರು, ಇವತ್ತು ಹತ್ತು ಗಂಟೆಗೆ ಮೂವರು ಈಜುಕೊಳಕ್ಕೆ ಇಳಿದಿದ್ದಾರೆ. ಈಜು ಬಾರದ ಯುವತಿ ಆಳ ಇದ್ದ ಕಡೆ ಹೋಗಿ ಸಿಲುಕಿಕೊಂಡಿದ್ದಳು, ಅವಳ ರಕ್ಷಣೆಗೆ ಇನ್ನಿಬ್ಬರು ಆಳ ಇರುವ ಕಡೆ ತೆರಳಿದ್ದರು, ಆದರೆ ಮೂವರಿಗೂ ಈಜು ಬರುತ್ತಿರಲಿಲ್ಲ, ಹೀಗಾಗಿ ಸಾವು ಸಂಭವಿಸಿದೆ. ಈ ಮೂವರು ಮೈಸೂರು ಮೂಲದವರಾಗಿದ್ದು, ಇಂಜಿನಿಯರಿಂಗ್ ಫೈನಲ್ ಇಯರ್ ಸ್ಟೂಡೆಂಟ್‌ಗಳಾಗಿದ್ದರು. ಇತ್ತ ರೆಸಾರ್ಟ್‌ನಲ್ಲಿ ಲೈಫ್ ಗಾರ್ಡ್ ಯಾರೂ ಇರಲಿಲ್ಲ, ಈಜುಕೊಳದ ಆಳದ ಬಗ್ಗೆಯೂ ಮಾಹಿತಿ ಫಲಕ ಅಳವಡಿಸಿರಲಿಲ್ಲ, ಬೊಬ್ಬೆ ಹೊಡೆದು ಕೂಗಾಡಿದರು ಯಾರೂ ರಕ್ಷಣೆಗೆ ಬರಲಿಲ್ಲ ಎಂಬ ವಿಚಾರ ತಿಳಿದಿದ್ದು, ಈ ಬಗ್ಗೆಯೂ ಪರಿಶೀಲನೆ ನಡೆಸುತ್ತಿದ್ದೇವೆ ಎಂದು ಮಂಗಳೂರು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್‌ವಾಲ್ ಹೇಳಿದ್ದಾರೆ.

ಮೈಸೂರಲ್ಲಿ ಬೆಮೆಲ್ ಡಿಜಿಎಂ ಅನುಮಾನಾಸ್ಪದ ಸಾವು

ನಿರ್ಮಾಣ ಹಂತದ ಕಟ್ಟಡದ ವಾಚ್‌ಮನ್ ಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆ

ಮೈಸೂರು, ನ.17(ಎಸ್‌ಬಿಡಿ)– ಮೈಸೂರಿನ ಬೆಮೆಲ್(BEML)ನ ಹಿರಿಯ ಅಧಿಕಾರಿಯೊಬ್ಬರು, ದಟ್ಟಗಳ್ಳಿ ರಿಂಗ್‌ರಸ್ತೆ ಬಳಿಯ ನಿರ್ಮಾಣ ಹಂತ ಕಟ್ಟಡದ ಆವರಣದಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಅವರ ದೇಹ ಪತ್ತೆಯಾಗಿದೆ.

ಬೋಗಾದಿಯ ಗದ್ದಿಗೆ ರಸ್ತೆ ನಿವಾಸಿ, ಬೆಮೆಲ್‌ನ ಡಿಜಿಎಂ ಮೋಹನ್ ರಾವ್(56) ಅವರ ಮೃತದೇಹ, ದಟ್ಟಗಳ್ಳಿ ರಿಂಗ್‌ರಸ್ತೆಯ ನಿರ್ಮಾಣ ಹಂತದ ಕೆಇಬಿ ಸಮುದಾಯ ಭವನದ ವಾಚ್‌ಮನ್ ಶೆಡ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಭಾನುವಾರ ಸಂಜೆ ಪತ್ತೆಯಾಗಿದೆ.




ಮೋಹನ್ ರಾವ್ ಅವರು ಪತ್ನಿಯೊಂದಿಗೆ ಬೋಗಾದಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಿದ್ದರು. ಬೆಂಗಳೂರಿನಲ್ಲಿ ಉದ್ಯೋಗದಲ್ಲಿರುವ ಪುತ್ರಿ ಆಗಾಗ್ಗೆ ಮೈಸೂರಿಗೆ ಬಂದು ಹೋಗುತ್ತಿದ್ದರು. ರಜೆ ಹಿನ್ನೆಲೆಯಲ್ಲಿ ಪುತ್ರಿ ಮನೆಗೆ ಬಂದಿದ್ದರು. ಭಾನುವಾರ ಬೆಳಗ್ಗೆ 7.45ಕ್ಕೆ ಮೋಹನ್ ರಾವ್ ಕೆಲಸಕ್ಕೆ ಹೋಗುವುದಾಗಿ ತಿಳಿಸಿ ಮನೆಯಿಂದ ಹೊರ ಹೋಗಿದ್ದಾರೆ. ಬೆಳಗ್ಗೆ 11.52ಕ್ಕೆ ಪುತ್ರಿ ಕರೆ ಮಾಡಿದಾಗ, ತುಂಬಾ ಕೆಲಸ ಇದೆ, ನಿನಗೆ ಆಮೇಲೆ ವಾಪಸ್ ಕರೆ ಮಾಡುತ್ತೇನೆ. ನಾನು ಮನೆಗೆ ಬರುವುದು ತಡವಾಗುತ್ತದೆ ಎಂದು ಅವರು ಪುತ್ರಿಗೆ ಹೇಳಿದ್ದಾರೆ.

ಮಧ್ಯಾಹ್ನ 2.25ಕ್ಕೆ ಮತ್ತೆ ಕರೆ ಮಾಡಿದಾಗ ಮೋಹನ್ ರಾವ್ ಅವರ ಮೊಬೈಲ್ ಸ್ವಿಚ್ಡ್‌ಆಫ್ ಆಗಿದ್ದರಿಂದ ಅವರ ● 6ನೇ ಪುಟಕ್ಕೆ

ಸರ್ಕಾರದ ಮೇಲಿನ ಹೊರೆ ತಪ್ಪಿಸಲು 11 ಲಕ್ಷ ಬಿಪಿಎಲ್ ಕಾರ್ಡ್‌ಗಳು ಎಪಿಎಲ್‌ಗೆ ಶಿಫ್ಟ್

ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪ

ಕೋಲಾರ, ನ.17– ಸರ್ಕಾರದ ಮೇಲಿನ ಹೊರೆ ತಪ್ಪಿಸಲು 11 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ಎಪಿಎಲ್‌ಗೆ ಬದಲಾವಣೆ ಮಾಡಲಾಗುತ್ತಿದೆ ಎಂದು ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ಆರೋಪಿಸಿದ್ದಾರೆ.



ಕೋಲಾರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 11 ಲಕ್ಷ ಬಿಪಿಎಲ್ ಕಾರ್ಡ್‌ಗಳು ಎಪಿಎಲ್‌ಗೆ ಬದಲಾವಣೆ ಆಗುತ್ತದೆ. ಬದಲಾವಣೆಗೆ ಕೈ ಹಾಕಿರುವ ಸರ್ಕಾರದ ಬಗ್ಗೆ ಜನರು ಪ್ರಶ್ನೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಎಲ್ಲೂ ಅಕ್ಕಿ ಕಡಿತ ಮಾಡುತ್ತಿಲ್ಲ. ಬಿಪಿಎಲ್‌ನಿಂದ ಎಪಿಎಲ್‌ಗೆ ಬದಲಾವಣೆ ಬಗ್ಗೆ ಯೋಚನೆ ಮಾಡಿದ್ದಿರಾ? ಎಪಿಎಲ್ ಕಾರ್ಡ್‌ನವರು ದುಡ್ಡು ಕೊಡಬೇಕಲ್ಲವೇ ಹೀಗಾಗಿ ಸರ್ಕಾರದ ಮೇಲೆ ಹೊರೆ ತಪ್ಪಿಸಲು ಈ ರೀತಿ ಮಾಡುತ್ತಿದ್ದಾರೆ. ಗ್ಯಾರಂಟಿ ಯೋಜನೆಗೆ 52 ಸಾವಿರ ಕೋಟಿ ರೂ. ಕೊಡುತ್ತಿದ್ದಾರೆ. ಅದನ್ನು ಗ್ಯಾರಂಟಿ ಕಾರ್ಯಕ್ರಮಕ್ಕೆ ಉಪಯೋಗ ಮಾಡುವುದು ಬೇರೆ. ಗ್ಯಾರಂಟಿ ಸ್ಕೀಮ್‌ನಿಂದ ಸರ್ಕಾರಕ್ಕೆ ಏನೂ ಹೊರೆ ಇಲ್ಲ. ಹಾಗಾದರೆ ತೆರಿಗೆ ಹೆಚ್ಚಿಗೆ ಮಾಡಿ ಸಂಗ್ರಹ ಮಾಡಿರುವ ಹಣ ಏನಾಯ್ತು? ಎಂದು ಪ್ರಶ್ನೆ ಮಾಡಿದ್ದಾರೆ.

ಗ್ಯಾರಂಟಿ ಸ್ಕೀಮ್ ಪರಿಶೀಲನೆ ಮಾಡಲು ಮೋದಿ ಅವರಿಗೆ ಫ್ಲೈಟ್ ಮಾಡಿಕೊಡುತ್ತೇವೆ ಎಂದು ಸಿಎಂ ಹಾಗೂ ಡಿಸಿಎಂ ಹೇಳಿಕೆಗೆ ಪ್ರತಿಕ್ರಿಯಿಸಿ, ಈಗ ರಾಜ್ಯ ಸರ್ಕಾರ 1.5 ಲಕ್ಷ ಕೋಟಿ ರೂ. ಸಾಲ ಮಾಡಿದೆ. ಗ್ಯಾರಂಟಿ ಸ್ಕೀಮ್‌ನಿಂದ ಖಜಾನೆ ಏನೂ ಖಾಲಿ ಆಗಿಲ್ಲ. ಮೋದಿ ಅವರು ಬಂದು ನೋಡಬೇಕಿಲ್ಲ, ನಾವೇ ಇಲ್ಲಿ ನೋಡುತ್ತಿದ್ದೇವೆ. ಸಿಎಂ ಹೇಳಿದಂತೆ ಕೇಸ್ ಹಾಕಲಿ ಬಿಡಿ ನೋಡೋಣ ಎಂದಿದ್ದಾರೆ. ವಕ್ಫ್ ಆಸ್ತಿ ವಿವಾದ ಕುರಿತು ಮಾತನಾಡಿದ ಹೆಚ್‌ಡಿಕೆ, ● 6ನೇ ಪುಟಕ್ಕೆ

ಅಬಕಾರಿ ಇಲಾಖೆಯ 700 ಕೋಟಿ ಭ್ರಷ್ಟಾಚಾರಕ್ಕೆ ಸಾಕ್ಷಿ ಬೇಕಿದ್ದರೆ ತನಿಖೆ ನಡೆಸಿ

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ವಿಪಕ್ಷ ನಾಯಕ ಆರ್. ಅಶೋಕ್ ಸವಾಲು

ಬೆಂಗಳೂರು, ನ.17– ಅಬಕಾರಿ ಇಲಾಖೆಯಲ್ಲಿನ 700 ಕೋಟಿ ಭ್ರಷ್ಟಾಚಾರ ಆರೋಪಕ್ಕೆ ಸಾಕ್ಷಿ ಬೇಕಾದರೆ ಎಸ್‌ಐಟಿ ರಚನೆ ಮಾಡಿ ತನಿಖೆ ನಡೆಸಲಿ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಸವಾಲು ಹಾಕಿದ್ದಾರೆ.



ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಜನರಿಗೆ ಶೇ.40 ಪರ್ಸೆಂಟ್ ಸುಳ್ಳು ಹೇಳಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ 100 ಪರ್ಸೆಂಟ್ ಭ್ರಷ್ಟರಾಗಿದ್ದಾರೆ ಎಂದು ಕಿಡಿಕಾರಿದರು. ಕಳೆದ 18 ತಿಂಗಳ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ದಿನನಿತ್ಯ ಒಬ್ಬರಲ್ಲ ಒಬ್ಬ ಮಂತ್ರಿ ಲೂಟಿ ಹೊಡೆಯುತ್ತಿದ್ದಾರೆ. ಸಿದ್ದರಾಮಯ್ಯ ತಮ್ಮ 40 ವರ್ಷದ ಜೀವನ ತೆರೆದ ಪುಸ್ತಕ ಅಂದವರು. ಇವತ್ತು ಅವರ ತೆರೆದ ಪುಸ್ತಕ ಪುಟಗಳು ತಿರುವಿದರೆ ಲೂಟಿಯ ಕಪ್ಪು ಚುಕ್ಕೆಗಳೇ ಕಾಣುತ್ತಿವೆ ತಿಳಿಸಿದರು.

ಅಬಕಾರಿ ಇಲಾಖೆಯಲ್ಲಿ ನಡೆದಿರುವ 700 ಕೋಟಿ ಭ್ರಷ್ಟಾಚಾರದ ಬಗ್ಗೆ ಮಹಾರಾಷ್ಟ್ರದ ಚುನಾವಣಾ ಪ್ರಚಾರದ ವೇಳೆ ಪ್ರಧಾನಮಂತ್ರಿ ಮೋದಿ ಪ್ರಸ್ತಾಪ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ಇದಕ್ಕೆ ಸಾಕ್ಷಿ ಕೊಡಿ ಎಂದು ಕೇಳಿದ್ದಾರೆ. ಅದು ಪ್ರಧಾನಿ ಮೋದಿ ಅವರು ಮಾಡಿರುವ ಆರೋಪವಲ್ಲ. ಕರ್ನಾಟಕ ರಾಜ್ಯ ಮದ್ಯ ಮಾರಾಟಗಾರರ ಸಂಘ ಮಾಡಿರುವ ಆರೋಪ. ಮದ್ಯ ಮಾರಾಟಗಾರರ ಸಂಘ ಬರೆದಿರುವ ಪತ್ರವನ್ನು ಒಮ್ಮೆ ಮುಖ್ಯಮಂತ್ರಿಗಳು ತರಿಸಿಕೊಂಡು ಓದಬೇಕು ಎಂದು ಹೇಳಿದರು.

ಲೈಸೆನ್ಸ್ ನವೀಕರಣಕ್ಕೆ ದರ ನಿಗದಿ, ತಿಂಗಳ ವಸೂಲಿ ಹೆಸರಿನಲ್ಲಿ ಪ್ರತಿ ಮದ್ಯದ ಅಂಗಡಿಯಿಂದ ಎಷ್ಟು ವಸೂಲಿ ಆಗುತ್ತಿದೆ. ಅಬಕಾರಿ ಇಲಾಖೆಯ ವರ್ಗಾವಣೆ ದಂಧೆಯಲ್ಲಿ ಯಾವ ಮಟ್ಟದ ಅಧಿಕಾರಿಗೆ ಎಷ್ಟು ಲಂಚ ಎಂದು ಎಳೆ ಎಳೆಯಾಗಿ ಬಿಚ್ಚಿಟ್ಟಿದ್ದಾರೆ. ● 6ನೇ ಪುಟಕ್ಕೆ

ಮೈಸೂರು ಮಿತ್ರ

ಶುಚಿತ್ವ, ನೈರ್ಮಲ್ಯ ಕಾಪಾಡದ ಮೈಸೂರಿನ ಐದು ಇಂದಿರಾ ಕ್ಯಾಂಟೀನ್‌ಗಳಿಗೆ ನೋಟಿಸ್ ಜಾರಿ



ಮೈಸೂರು, ನ.17(ಬಿಎಲ್‌ಯು)– ಶುಚಿತ್ವ ಮತ್ತು ನೈರ್ಮಲ್ಯ ಕಾಪಾಡದ ಹಾಗೂ ಇತರೆ ಲೋಪಗಳಿದ್ದ ಮೈಸೂರಿನ 5 ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನೋಟಿಸ್ ಜಾರಿ ಮಾಡಿದೆ.


ಮೈಸೂರು ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಶುಚಿತ್ವ ಹಾಗೂ ನೈರ್ಮಲ್ಯ ಕಾಪಾಡುತ್ತಿಲ್ಲವೆಂದು ಮಾಧ್ಯಮಗಳಲ್ಲಿ ವರದಿ ಪ್ರಕಟವಾಗಿತ್ತು.

ಇದರ ಆಧಾರದ ಮೇಲೆ ಮೈಸೂರು ಸೇರಿದಂತೆ ಕರ್ನಾಟಕದಲ್ಲಿರುವ ಎಲ್ಲಾ ಇಂದಿರಾ ಕ್ಯಾಂಟೀನ್‌ಗಳನ್ನು ಪರಿಶೀಲನೆ ನಡೆಸಲು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಆಯುಕ್ತ ಶ್ರೀನಿವಾಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಈ ಹಿನ್ನೆಲೆ ಮೈಸೂರಿನ 12 ಇಂದಿರಾ ಕ್ಯಾಂಟಿನ್‌ಗಳಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಅಧಿಕಾರಿಗಳು ದಿಢೀರ್ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಇಂದಿರಾ ಕ್ಯಾಂಟೀನ್‌ಗಳಲ್ಲಿ ನೀಡುವ ಆಹಾರದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಜೊತೆಗೆ ಶುಚಿತ್ವ ಮತ್ತು ನೈರ್ಮಲ್ಯ ಕಾಪಾಡದ ಹಾಗೂ ಇತರೆ ಲೋಪ ಕಂಡು ಬಂದ 5 ಇಂದಿರಾ ಕ್ಯಾಂಟೀನ್‌ಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಮೈಸೂರು ಸೇರಿದಂತೆ ಕರ್ನಾಟಕದ 125 ಇಂದಿರಾ ಕ್ಯಾಂಟೀನ್‌ಗಳಿಗೆ ಭೇಟಿ ನೀಡಿ 190 ಆಹಾರ ಪದಾರ್ಥಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಶುಚಿತ್ವ ಹಾಗೂ ನೈರ್ಮಲ್ಯ ಕಾಪಾಡದ ಕೆಲವು ಇಂದಿರಾ ಕ್ಯಾಂಟೀನ್‌ಗಳಿಗೆ ನೋಟಿಸ್ ಜಾರಿ ಮಾಡಲಾಗಿದೆ. ಪ್ರಯೋಗಾಲಯದ ವರದಿ ಆಧರಿಸಿ ಆಹಾರ ಪದಾರ್ಥಗಳ ಗುಣಮಟ್ಟದಲ್ಲಿ ಲೋಪ ಕಂಡಬಂದರೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಶ್ರೀನಿವಾಸ್ ತಿಳಿಸಿದ್ದಾರೆ.

ಇಂದು ಮೈಸೂರಲ್ಲಿ ಸಂತಕವಿ ಶ್ರೀ ಕನಕದಾಸರ ಜಯಂತಿ



ಮೈಸೂರು, ನ17(ಪಿಎಂ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಂತ ಶ್ರೀ ಕನಕದಾಸರ ಜಯಂತ್ಯೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ನ18ರಂದು ಮೈಸೂರಿನ ಕಲಾಮಂದಿರದಲ್ಲಿ ದಾಸಶ್ರೇಷ್ಠ–ಸಂತಕವಿ ಶ್ರೀ ಕನಕದಾಸರ 537ನೇ ಜಯಂತಿ ಆಯೋಜಿಸಲಾಗಿದೆ.

ಅಂದು ಮಧ್ಯಾಹ್ನ 12.30ಕ್ಕೆ ಮೈಸೂರಿನ ಶ್ರೀ ಕಾಗಿನೆಲೆ ಕನಕ ಗುರು ಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಅವರ ಸಾನಿಧ್ಯ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜಯಂತಿ ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಉಪನ್ಯಾಸ ನೀಡಲಿದ್ದಾರೆ.

ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರು, ನಿಗಮ–ಮಂಡಳಿ ಅಧ್ಯಕ್ಷರು, ಜಯಂತ್ಯೋತ್ಸವ ಸಮಿತಿ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಇದಕ್ಕೂ ಮುನ್ನ ಬೆಳಗ್ಗೆ 9.30ಕ್ಕೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕಲಾಮಂದಿರದವರೆಗೆ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ. ಜೊತೆಗೆ ಕಲಾಮಂದಿರದಲ್ಲಿ ಬೆಳಗ್ಗೆ 10.30ಕ್ಕೆ ರಶ್ಮಿ ಮತ್ತು ತಂಡದಿಂದ 'ಕನಕ ಸಂಗೀತ ಸುಧೆ' ಸಂಗೀತ ಕಾರ್ಯಕ್ರಮ ಆಯೋಜಿಸಲಾಗಿದೆ.

ನಾಳೆಯಿಂದ ಮತ್ತೆ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಪ್ರದರ್ಶನ



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಇತ್ತೀಚೆಗೆ ನಡೆದ ಪ್ರದರ್ಶನದ ಒಂದು ದೃಶ್ಯ

ಮೈಸೂರು, ನ.17(ಪಿಎಂ)– ಸಾರ್ವಜನಿಕರ ಬೇಡಿಕೆ ಮೇರೆಗೆ ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ 'ಸತ್ಯವನ್ನೇ ಹೇಳುತ್ತೇನೆ' ಕನ್ನಡ ನಾಟಕದ ಪ್ರದರ್ಶನವನ್ನು ಮತ್ತೆ ನ.19 ಮತ್ತು 20ರಂದು ಆಯೋಜಿಸಲಾಗಿದೆ.

ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ರಚಿಸಿ, ನಿರ್ದೇಶಿಸಿರುವ ನಾಟಕ ಇದಾಗಿದ್ದು, ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ನ.19 ಮತ್ತು 20ರ ಸಂಜೆ 6.30ಕ್ಕೆ ಪ್ರದರ್ಶನಗಳು ನಡೆಯಲಿವೆ. ಟಿಕೆಟ್ ದರ 200 ರೂ. ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 94484 22343 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಅನರ್ಹರ ಬಿಪಿಎಲ್ ಕಾರ್ಡ್ ಮಾತ್ರ ವಾಪಸ್ ಪಡೆಯಲಾಗುತ್ತಿದೆ

ಸಿಎಂ ಸಿದ್ದರಾಮಯ್ಯ ಸ್ಪಷ್ಟನೆ



ಬಾಗಲಕೋಟೆ, ನ.17– ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ರದ್ದುಪಡಿಸುತ್ತಿರುವ ಬಗ್ಗೆ ವ್ಯಾಪಕ ಚರ್ಚೆಗಳು ನಡೆಯುತ್ತಿವೆ ಈ ಬಗ್ಗೆ ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ, ಅನರ್ಹರ ಬಿಪಿಎಲ್ ಕಾರ್ಡ್‌ಗಳನ್ನು ಮಾತ್ರ ವಾಪಾಸ್ ಪಡೆಯಲಾಗುತ್ತದೆ. ಅರ್ಹರಿಗೆ ಯಾವುದೇ ತೊಂದರೆ ಇಲ್ಲ ಎಂದಿದ್ದಾರೆ. ಇಂದು ಭಾನುವಾರ ಬಾಗಲಕೋಟೆಯಲ್ಲಿ ಬಿಪಿಎಲ್ ಕಾರ್ಡ್‌ಗಳ ರದ್ದತಿ ಬಗ್ಗೆ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಬಿಪಿಎಲ್ ಕಾರ್ಡ್‌ಗಳು ರದ್ದಾಗುತ್ತಿವೆ ಎನ್ನುವ ಪ್ರಶ್ನೆಯೇ ಪೂರ್ತಿ ತಪ್ಪು. ಅನರ್ಹರ ಕಾರ್ಡ್‌ಗಳನ್ನು ವಾಪಾಸ್ ಪಡೆಯಬಹುದು ಎಂಬ ಆಲೋಚನೆ ಮಾತ್ರ ನಮ್ಮದಾಗಿದೆ. ಇದಿನ್ನೂ ಆಹಾರ ಇಲಾಖೆಯ ಪರಿಶೀಲನೆ ಹಂತದಲ್ಲಿದೆ. ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ, ಅರ್ಹರಿಗೆ ಯಾವುದೇ ರೀತಿಯ ತೊಂದರೆಯಿಲ್ಲ ಎಂದರು.

ಆದಾಯ ತೆರಿಗೆ ಪಾವತಿಸುವವರು, ಸರ್ಕಾರಿ ನೌಕರರ ಬಳಿ ಬಿಪಿಎಲ್ ಕಾರ್ಡು ಗಳಿದ್ದರೆ ಅವು ರದ್ದಾಗುತ್ತವೆ. ಅನರ್ಹರಿಂದ ವಾಪಾಸ್ ಪಡೆಯಬಹುದು. ಅರ್ಹರು ವಂಚಿತರಾಗಬಾರದು ಎಂದರು.

ಬಿಪಿಎಲ್ ಕಾರ್ಡ್ ಯಾರೆಲ್ಲಾ ಅನರ್ಹರು?: ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸಕಾರದಿಂದ ಅನುದಾನವನ್ನು ಪಡೆ ಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿ ಗಳು/ನಿಗಮಗಳು/ಸ್ವಾಯತ್ತ ಸಂಸ್ಥೆ ಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.

ಗ್ರಾಮೀಣ ಪ್ರದೇಶಗಳಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು.

ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.

ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು. ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು ಎಂದು ಸಿಎಂ ಸ್ಪಷ್ಟಪಡಿಸಿದರು.

ಭಾಷೆಯನ್ನು ಪ್ರೀತಿಸಿದರೆ ಅದರ ನೋವು, ಯಾತನೆ ಕವಿಗಳಿಗೆ ತಿಳಿಯುತ್ತದೆ

ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ಅಭಿಮತ



ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಶ್ರೀ ಮಹಾಲಕ್ಷ್ಮೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಚೆಕ್ ವಿತರಿಸಲಾಯಿತು.

ಮೈಸೂರು,ನ.17(ಜಿಎ)–ಕವಿಗಳು ಭಾಷೆಯನ್ನು ಪ್ರೀತಿಸಿದರೆ ಭಾಷೆಯ ನೋವು, ಯಾತನೆ ತಿಳಿಯುತ್ತದೆ ಎಂದು ಹಿರಿಯ ಸಾಹಿತಿ ಲಕ್ಷ್ಮೀಶ ತೋಳ್ಪಾಡಿ ತಿಳಿಸಿದರು.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಶ್ರೀ ಮಹಾಲಕ್ಷ್ಮೀ ಚಾರಿಟಬಲ್ ಟ್ರಸ್ಟ್ ವತಿಯಿಂದ ಭಾನುವಾರ ಆಯೋಜಿಸಿದ್ದ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪುರಂದರದಾಸ, ಕನಕದಾಸರ ಕೀರ್ತನೆಗಳಿಂದ ಭಾಷೆಯು ಹೊಸ ಹೊಳಪು, ಕಾಂತಿ ಪಡೆದುಕೊಂಡಿತು. ಆದ್ದರಿಂದ ಭಾಷೆಯು ಮನುಷ್ಯರ ಮೂಲಕವೇ ಪ್ರಕಟವಾಗಬೇಕು. ಈ ರೀತಿ ಪ್ರಕಟವಾಗಲು ಭಾಷೆಯು ಕಾದು ಕುಳಿತಿರುತ್ತದೆ ಎಂದರು.

12ನೇ ಶತಮಾನದಲ್ಲಿ ಬಸವಣ್ಣ, ಅಲ್ಲಮ್ಮ, ಅಕ್ಕಮಹಾದೇವಿ ಮುಂತಾದವರ ನೇತೃತ್ವದಲ್ಲಿ ನಡೆದ ವಚನ ಚಳವಳಿಯಲ್ಲಿ ಕನ್ನಡ ಭಾಷೆಯೂ ಹೊಸತನವನ್ನು ಪಡೆದುಕೊಂಡಿತು. ಹೀಗಾಗಿ ಕನ್ನಡ ಭಾಷೆಯು ಸುಸಂಸ್ಕೃತವನ್ನು ಪಡೆದ ಭಾಷೆಯಾಗಿದೆ ಎಂದು ತಿಳಿಸಿದರು.

ಸತ್ಯವನ್ನು ಮಾತ್ರ ನಂಬಬೇಕು ಎನ್ನುವುದು ಪ್ರಜ್ಞಾಪೂರ್ವಕವಾಗಿ ಆಗಬೇಕು. ಅದಕ್ಕೆ ಯಾವುದೇ ತಂತ್ರಗಾರಿಕೆ ಬೇಕಿಲ್ಲ. ನಮ್ಮಲ್ಲಿ ಸ್ವಾಭಾವಿಕವಾಗಿಯೇ ಆಗಬೇಕು. ಪುರಂದರದಾಸರಿಗೆ ಹೀಗೆ ಆಗಿದ್ದು, ಲೌಕಿಕ ಜೀವನವನ್ನು ಪರಿಪೂರ್ಣವಾಗಿ ಒಪ್ಪಿಕೊಂಡಿದ್ದ ಅವರು ಹುಟ್ಟು ವ್ಯಾಪಾರಿಯಾಗಿದ್ದರು. ಹಣದ ಮೋಹ ಅವರಲ್ಲಿ ಇತ್ತು. ಅದನ್ನೇ ಸತ್ಯ ಎಂದು ಅವರು ನಂಬಿದ್ದರು. ಆದರೆ ನಾವು ತಿಳಿದುಕೊಂಡಿರುವ ಸತ್ಯದ ಆಚೆಗೂ ಮತ್ತೊಂದು ಸತ್ಯವಿದೆ ಎನ್ನುವುದು ಅವರ ಅರಿವಿಗೆ ಬಂದಾಗ ಅವರ ಅಂತರಂಗದ ತಿಜೋರಿಯಲ್ಲಿದ್ದ ಹಾಡುಗಳು ಹೊರಬಂದವು. ಈ ಸತ್ಯವನ್ನು ಅರಿತುಕೊಂಡ ಕಾರಣಕ್ಕಾಗಿಯೇ ಶ್ರೀನಿವಾಸ ನಾಯಕ ಪುರಂದರದಾಸರಾಗಿ ಬದಲಾವಣೆಯಾದರು ಎಂದು ಅವರು ತಿಳಿಸಿದರು.

ಇತ್ತೀಚಿನ ಜೀವನದಲ್ಲಿ ನಾವುಗಳು ಎಲ್ಲವನ್ನು ಕಳೆದುಕೊಂಡವರಂತೆ ಬದುಕುತ್ತಿದ್ದೇವೆ. ನಮಗೆ ನಮಗಿಂತ ನಮ್ಮ ಫೋಟೊ ಮುಖ್ಯವಾಗಿದ್ದು, ಆಧುನಿಕ ಪ್ರಪಂಚದಲ್ಲಿ ನಾವು ಬದುಕಿದ್ದೇವೆ ಎಂದು ನಮಗೆ ಮತ್ತೊಬ್ಬರು ಹೇಳಬೇಕು ಎನ್ನುವ ಸ್ಥಿತಿಗೆ ನಮ್ಮನ್ನು ನಾವು ತಲುಪಿದ್ದೇವೆ. ಭಾವನೆಯು ಮನಸ್ಸಿನ ಆಳಕ್ಕಿಳಿಯದಂತೆ ನಾಗರಿಕತೆ ಎಲ್ಲವನ್ನೂ ಮಾಡಿದೆ ಎಂದರು.

ಕಾರ್ಯಕ್ರಮದಲ್ಲಿ ಮಹಾಲಕ್ಷ್ಮಿ ಸ್ವೀಟ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳ 40 ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಚೆಕ್ ವಿತರಿಸಲಾಯಿತು. ಈ ವೇಳೆ ಸಂಸ್ಕೃತಿ ಚಿಂತಕ ಶಂಕರ ದೇವನೂರು, ಟ್ರಸ್ಟ್ ಸಂಸ್ಥಾಪಕ ಶಿವಕುಮಾರ್, ಚುಟುಕು ಕವಿ ಡಾ.ಎಂಜಿಆರ್ ಅರಸ್, ಡಾ.ರತ್ನ ಹಾಲಪ್ಪ ಗೌಡ, ಡಾ.ಪಳನಿಸ್ವಾಮಿ ಮೂಡುಗೂರು ಮತ್ತಿತರರು ಉಪಸ್ಥಿತರಿದ್ದರು.

ಸೆಂಟ್ ಜೋಸೆಫ್ ಮಹಿಳಾ ಕಾಲೇಜಲ್ಲಿ ರಾಜ್ಯೋತ್ಸವ



ಮೈಸೂರು ರಮ್ಮನಹಳ್ಳಿಯ ಸೆಂಟ್ ಜೋಸೆಫ್ ಮಹಿಳಾ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಮೈಸೂರು,ನ17(ಎಸ್‌ಬಿಡಿ)– ಮೈಸೂರು ತಾಲೂಕು ರಮ್ಮನಹಳ್ಳಿಯ ಸೆಂಟ್ ಜೋಸೆಫ್ ಮಹಿಳಾ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ರೇಡಿಯೋ ಜಾಕಿ ಸುನೀಲ್ ಮಾತನಾಡಿ, ಕನ್ನಡ ನಮ್ಮೆಲ್ಲರ ತಾಯಿ. ಈ ತಾಯಿಯ ಋಣ ತೀರಿಸುವುದು ನಮ್ಮೆಲ್ಲರ ಹೊಣೆ. ನಿತ್ಯ ಬಳಕೆಯೊಂದಿಗೆ ಉಸಿರಿನ ಭಾಷೆಯನ್ನು ರಕ್ಷಿಸಿಕೊಳ್ಳಬೇಕು. ಭಾಷೆ ಮರೆಯಾದರೆ ಅದರೊಂದಿಗೆ ನಮ್ಮ ಸ್ವಂತಿಕೆ, ಸಂಸ್ಕೃತಿ, ಸಂಪ್ರದಾಯ, ಸದಭಿರುಚಿ ಎಲ್ಲವೂ ನಾಶವಾಗುತ್ತವೆ ಎಂಬ ಎಚ್ಚರಿಕೆ ಇರಬೇಕು ಎಂದು ಹೇಳಿದರು.

ಮೈಸೂರು ಡಯೋಸಿಸನ್ ಎಜುಕೇಶನಲ್ ಸೊಸೈಟಿ(ಎಂಡಿಇಎಸ್) ಕಾರ್ಯದರ್ಶಿ ರೆವರೆಂಡ್ ಫಾದರ್ ಎಡ್ವರ್ಡ್ ವಿಲಿಯಂ ಸಾಲ್ಡಾನ ಮಾತನಾಡಿ, ನಾನು ಕನ್ನಡಿಗ ಎಂಬುದರಲ್ಲಿ ನಾ ಎಂದರೆ ನಾಡು, ನು ಎಂದರೆ ನುಡಿ ಎಂದರ್ಥ. ಈ ನಾಡು ಮತ್ತು ನುಡಿ ಒಟ್ಟಿಗೆ ಸೇರಿ ನಾನು ಕನ್ನಡಿಗನಾದದ್ದು. ಹಾಗಾಗಿ ನಾನು ಎಂದರೆ ನಡೆದಾಡುವ ಕನ್ನಡ ಮತ್ತು ಕರ್ನಾಟಕ ಎಂದು ವಿಶ್ಲೇಷಿಸಿದರು.

ನಾವೇಕೆ ಕನ್ನಡವನ್ನು ಮಾತನಾಡಬೇಕು ಎನ್ನುವವರಿಗೆ ನನ್ನದೊಂದು ಕಿವಿಮಾತಿದೆ. ಈ ನೆಲದಲ್ಲಿ ಹುಟ್ಟಿರುವುದಕ್ಕಾಗಿ, ಈ ಮಣ್ಣಿನ ಅನ್ನ ತಿಂದು, ಬೆಳೆಯುತ್ತಿರುವುದಕ್ಕಾಗಿ, ಇಲ್ಲಿನ ನೆಲ, ಜಲದ ಸಂಗಡ ಬದುಕುತ್ತಿರುವುದಕ್ಕಾಗಿ ಹಾಗೂ ಇದೆಲ್ಲದರ ಋಣ ತೀರಿಸುವುದಕ್ಕಾಗಿ ಎಲ್ಲರೂ ಕನ್ನಡವನ್ನು ಮಾತನಾಡಬೇಕು. ನಮ್ಮ ಮನೆಯೊಳಗಿನ ಭಾಷೆ ಯಾವುದೇ ಇರಲಿ, ಮನದೊಳಗಿನ ಭಾಷೆ ಕನ್ನಡವಾಗಿರಬೇಕು. ಆದರೆ ನಾವಿಂದು ಭಾಷೆಯನ್ನೇ ಲಾಭ, ನಷ್ಟದ ಆಧಾರದಲ್ಲಿ ನೋಡುತ್ತಿರುವುದು ದುರದೃಷ್ಟಕರ ಸಂಗತಿ ಎಂದರು.

ಈ ವೇಳೆ ಕನ್ನಡ ಭಾಷಾ ವಿಷಯದಲ್ಲಿ ನಾಲ್ಕು ಸೆಮಿಸ್ಟರ್‌ಗಳಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಬಿಸಿಎ ವಿಭಾಗದ ಮಾನಸ, ಶ್ರೀಪ್ರಿಯ, ಸೃಷ್ಟಿ, ವಜೀಹಾ ಭಾನು, ಫರ್ಶೀನ್, ಕೀರ್ತನ, ಬಿಕಾಂ ವಿಭಾಗದ ಹರ್ಷಿತಾ ಮತ್ತು ಬಿಬಿಎ ವಿಭಾಗದ ಫೈಜಾ ಉಮ್ಮೆ ಕುಲ್ಸಮ್ ಅವರಿಗೆ ಕಿರು ಕಾಣಿಕೆ ನೀಡಿ, ಪ್ರಶಂಸಿಸಲಾಯಿತು.


ಕಾರ್ಯಕ್ರಮದಲ್ಲಿ ಎಂಡಿಇಎಸ್ ಖಜಾಂಚಿ ರೆ.ಫಾ.ನವೀನ್ ಕುಮಾರ್, ಸಾತಗಳ್ಳಿ ಸೆಂಟ್ ಜೋಸೆಫ್ ಬಾಲಕಿಯರ ಪ.ಪೂ ಕಾಲೇಜು ಪ್ರಾಂಶುಪಾಲರಾದ ಕ್ರಿಶ್ಚಿಯಾನ ಪಿ.ಫೆರೇರಾ, ರಮ್ಮನಹಳ್ಳಿ ಪ.ಪೂ.ಕಾಲೇಜಿನ ಪ್ರಾಂಶುಪಾಲರಾದ ಡಾ.ಪೃಥ್ವಿ ಎಸ್.ಶಿರಹಟ್ಟಿ, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಎ.ಎಸ್.ಮಹೇಶ್, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಪುಷ್ಪ, ಸಹಾಯಕ ಪ್ರಾಧ್ಯಾಪಕಿ ಯಶಸ್ವಿನಿ, ಹಿಂದಿ ವಿಭಾಗದ ಶೋಭಾ, ವಿದ್ಯಾರ್ಥಿ ಸಂಘದ ಉಮ್ಮೆ ಐಮಾನ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ಮಂಚೇಗೌಡನಕೊಪ್ಪಲಲ್ಲಿ ಕಂಡಾಯ ಮೆರವಣಿಗೆ, ದೀಪೋತ್ಸವ



ಮೈಸೂರು, ನ.17(ಎಸ್‌ಬಿಡಿ)– ಮೈಸೂರಿನ ಮಂಚೇಗೌಡನಕೊಪ್ಪಲು ಶ್ರೀ ಘನ ನೀಲ ಸಿದ್ದಪ್ಪಾಜಿ ಸ್ವಾಮಿ ದೇವಸ್ಥಾನದಲ್ಲಿ ಕಾರ್ತಿಕ ಸೋಮವಾರ(ನ.18) ದೀಪೋತ್ಸವ ಹಾಗೂ ಬೆಳ್ಳಿ ಕಂಡಾಯ ಮೆರವಣಿಗೆ ನೆರವೇರಲಿದೆ. ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಜೆ 5ರಿಂದ ಬೆಳ್ಳಿ ಕಂಡಾಯ ಮೆರವಣಿಗೆ ಜರುಗಿದ ಬಳಿಕ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಆವರಣದಲ್ಲಿ ದೀಪೋತ್ಸವ ಹಾಗೂ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ.

ಆರ್.ಅಶೋಕ್ ವಿಪಕ್ಷ ನಾಯಕರಾಗಿ ಒಂದು ವರ್ಷ



ಬೆಂಗಳೂರು, ನ.17–ವಿಧಾನಸಭೆಯ ವಿರೋಧ ಪಕ್ಷದ ನಾಯಕನಾಗಿ ಆರ್.ಅಶೋಕ್ ಅವರು ಅಧಿಕಾರ ವಹಿಸಿಕೊಂಡು ಇಂದಿಗೆ ಒಂದು ವರ್ಷ. ಕಳೆದ ಒಂದು ವರ್ಷದ ಅವಧಿಯಲ್ಲಿ ಅವರು ಆಡಳಿತ ಪಕ್ಷದ ವೈಫಲ್ಯದ ವಿರುದ್ಧ ಹಲವು ಹೋರಾಟಗಳನ್ನು ನಡೆಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಮುಡಾ ನಿವೇಶನ ಹಂಚಿಕೆಯಲ್ಲಿ ಭ್ರಷ್ಟಾಚಾರ, ವಕ್ಫ್ ಮಂಡಳಿ ಹೆಸರಿನಲ್ಲಿ ನಡೆಯುತ್ತಿರುವ ದಬ್ಬಾಳಿಕೆ ವಿರುದ್ಧ ಪಕ್ಷದ ವತಿಯಿಂದ ನಿರಂತರ ಹೋರಾಟ ನಡೆಸುತ್ತಾ ಬಂದಿದ್ದಾರೆ. ಇವರ ಹೋರಾಟದ ಫಲವಾಗಿ ಸಚಿವ ನಾಗೇಂದ್ರ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿದಂತಾಗಿದೆ. ಮುಡಾ ಹಗರಣವನ್ನು ಕೈಗೆತ್ತಿಕೊಂಡು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಡಗೂಡಿ ಆರ್.ಅಶೋಕ್, 'ಮೈಸೂರು ಚಲೋ' ಪಾದಯಾತ್ರೆಯನ್ನು ಯಶಸ್ವಿಯಾಗಿ ನಡೆಸುವ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಿದ್ದಾರೆ. ಇದೀಗ ವಕ್ಫ್ ವಿಚಾರದಲ್ಲಿ ಹೋರಾಟಕ್ಕಿಳಿದಿರುವ ಅಶೋಕ್, ಪಕ್ಷದ ರಾಜ್ಯ ಘಟಕ 'ನಮ್ಮ ಭೂಮಿ ನಮ್ಮ ಹಕ್ಕು' ಘೋಷ ವಾಕ್ಯದಡಿ ಹಮ್ಮಿಕೊಂಡಿರುವ ನಡೆಸಲಿರುವ ಹೋರಾಟದಲ್ಲಿ ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳಲಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಹೋರಾಟಕ್ಕೆ ಅವರು ಸಂಪೂರ್ಣವಾಗಿ ಸಜ್ಜಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.11.2024 ಸೋಮವಾರ, ಮಳೆ ನಕ್ಷತ್ರ: ವಿಶಾಖ, 06.11.2024 ರಿಂದ 18.11.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಬೆಳಗ್ಗೆ 7 ಗಂಟೆಗೆ ಶ್ರೀ ವೀರಭದ್ರೇಶ್ವರ ಹಾಗೂ ಚಾಮರಾಜೇಶ್ವರ ಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾ ರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ, ಬೆಳಗ್ಗೆ 11 ಗಂಟೆಗೆ ಪ್ರಾಕಾರದ ಸುತ್ತಲೂ ಉತ್ಸವ, ಸಂಜೆ 7.30ಕ್ಕೆ ಭದ್ರಕಾಳಿ ಸಮೇತ ಶ್ರೀ ವೀರಭದ್ರೇಶ್ವರ ಸ್ವಾಮಿಯ ಉಯ್ಯಾಲೋತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ. ಬನುಮಯ್ಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರ ಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾ ಕುಂಭಾಭಿಷೇಕ, 10ನೇ ವರ್ಷದ ಹಾಲರವಿ ಸೇವೆ, ಬೆಳಗ್ಗೆ ಶ್ರೀ ಸ್ವಾಮಿಗೆ ಅಭಿಷೇಕ ಮತ್ತು ವಿಶೇಷ ಪೂಜೆ, ಸಂಜೆ 7 ಗಂಟೆಗೆ ಶ್ರೀ ಸ್ವಾಮಿಯ ಸುವರ್ಣ ಕೊಳಗದ ಮೆರವಣಿಗೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಕನ್ನಡ ಜಾನಪದ ಪರಿಷತ್ (ಮೈಸೂರು ಜಿಲ್ಲೆ), ಎಂಎಎಸ್‌ವಿಎಸ್ ಗುರುಕುಲ ಪದವಿ ಪೂರ್ವ ಕಾಲೇಜು (ಕುವೆಂಪುನಗರ, ಮೈಸೂರು):** ಕನ್ನಡ ರಾಜ್ಯೋತ್ಸವ ಹಾಗೂ ಶ್ರೀ ಭಕ್ತ ಕನಕದಾಸರ ಜಯಂತ್ಯುತ್ಸವ, ಉದ್ಘಾಟನೆ: ನಿವೃತ್ತ ಜಂಟಿ ಆಯುಕ್ತ ಡಾ. ಬಿ.ಟಿ. ಬಾಣೇಗೌಡ, ಅಧ್ಯಕ್ಷತೆ: ಎಂಎಎಸ್‌ವಿಎಸ್ ಗುರುಕುಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಪ್ರೊ. ಡಿ. ಕನ್ನಿಕರ್, ಸ್ಥಳ: ಎಂಎಎಸ್‌ವಿಎಸ್ ಗುರುಕುಲ ಪದವಿ ಪೂರ್ವ ಕಾಲೇಜು, ಕುವೆಂಪುನಗರ, ಬೆಳಗ್ಗೆ 8.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶ್ರವಣ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.

■ **ನವ ಕರ್ನಾಟಕ ಪಬ್ಲಿಕೇಷನ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ರಿಯಾಯಿತಿ ಪುಸ್ತಕ ಮಾರಾಟ, ಸ್ಥಳ: ಚಾಮರಾಜ ಜೋಡಿ ರಸ್ತೆ, ಬೆಳಗ್ಗೆ 9.30ರಿಂದ.

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ, ದೀಪಾ ಸಂಯುಕ್ತ ಪದವಿ ಪೂರ್ವ ಕಾಲೇಜು:** ಕನ್ನಡ ರಾಜ್ಯೋತ್ಸವ, ಕನಕದಾಸ ಜಯಂತಿ, ದೀಪಾ ಸಂತೆ, ಅಧ್ಯಕ್ಷತೆ: ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆಯ ಅಧ್ಯಕ್ಷ ಎಂ.ರಾಮಪ್ಪ, ಉದ್ಘಾಟನೆ: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮಾಜಿ ಅಧ್ಯಕ್ಷ ಪ್ರೊ. ಕಾಳೇಗೌಡ ನಾಗವಾರ, ಸ್ಥಳ: ದೀಪಾ ಶಾಲಾ ಆವರಣ, ರೂಪಾನಗರ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ.

■ **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ :** ಸಂತ ಶ್ರೀ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಸ್ಥಳ: ವಿವಿ ಸಂಜೆ ಕಾಲೇಜು ಆವರಣ, ಬೆಳಗ್ಗೆ 10.20ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಹಿಂದುಳಿದ ವರ್ಗಗಳ ಘಟಕ :** ಶ್ರೀ ಕನಕದಾಸ ಜಯಂತಿ ಆಚರಣೆ, ಉದ್ಘಾಟನೆ ಮತ್ತು ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಮಾನಸ ಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಓಟಿಕೇರ್ ಆಸ್ಪತ್ರೆ :** ಉಚಿತ ಕಿವಿ ಪರೀಕ್ಷೆ, ರಿಯಾಯಿತಿ ದರದಲ್ಲಿ ಶ್ರವಣ ಯಂತ್ರ ವಿತರಣೆ, ಸ್ಥಳ: ಆಸ್ಪತ್ರೆ ಆವರಣ, ರಾಮಾನುಜ ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ಅಭಿರುಚಿ ಪ್ರಕಾಶನ :** ಪ್ರಕಾಶನದ 423ನೇ ಪ್ರಕಟಣೆ ಪ್ರೊ. ಓ.ಎಲ್.ನಾಗಭೂಷಣ ಸ್ವಾಮಿ ಅನುವಾದಿಸಿರುವ ಫ್ಯೊದೋರ್ ದಾಸ್ತೋವ್‌ಸ್ಕಿಯ ಅವರ 'ಅಪರಾಧ ಮತ್ತು ಶಿಕ್ಷೆ' ಪುಸ್ತಕ ಲೋಕಾರ್ಪಣೆ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಎಸ್‌ಪಿ ಭಟ್ ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11 ಗಂಟೆಗೆ.

■ **ಸಿಹೆಚ್ ವೈಕೆ ಸ್ಟುಡಿಯೋ :** ಕನ್ನಡ ರಾಜ್ಯೋತ್ಸವ ಅಂಗವಾಗಿ 4ನೇ ವರ್ಷದ ಸಂಗೀತ ಸಂಜೆ, ಕನ್ನಡದ ಹಳೆಯ ಸುಮಧುರ ಚಲನಚಿತ್ರ ಗೀತೆಗಳ ಲೈವ್ ಸಂಗೀತದೊಂದಿಗೆ, ಸ್ಥಳ: ಶಾರದಾ ವಿಲಾಸ್ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ಗಂಟೆಗೆ.

■ **ಜಗದ್ಗುರು ಶ್ರೀ ವೀರ ಸಿಂಹಾಸನ ಮಹಾಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ) :** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳು, ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮ, ಸ್ಥಳ: ಮಠದ ಆವರಣ, ಸಂಜೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು :** ವಸುಂಧರೋತ್ಸವ–2024, ಸಂಜೆ 6 ಗಂಟೆಗೆ ಡಾ. ವಸುಂಧರ ದೊರೆಸ್ವಾಮಿಯವರ ಶಿಷ್ಯೆ ವಿದುಷಿ ಶುಭದ ಸುಬ್ರಹ್ಮಣ್ಯಂ, ಜರ್ಮನಿ ಅವರಿಂದ ನೃತ್ಯ, 6.45ಕ್ಕೆ ವಿದುಷಿ ಸಿ.ಎನ್. ಅನಿತ ಮತ್ತು ಶಿಷ್ಯರಾದ ವಿದುಷಿ ನಿಶ್ಚಿತ ಕೃಷ್ಣ, ವಿದುಷಿ ಪಾರ್ತನ್, ಸಂಜೆ 7.30ಕ್ಕೆ ವಿದುಷಿ ರೂಪಸಿ ಬಜನೆ ಹಟ್ಟಿ, ಲಂಡನ್ (ಡಾ. ವಸುಂಧರ ದೊರೆಸ್ವಾಮಿಯವರ ಶಿಷ್ಯೆ) ಅವರಿಂದ ನೃತ್ಯ ಕಾರ್ಯಕ್ರಮ, ಗೌರವ ಅತಿಥಿ: ಇತಿಹಾಸ ತಜ್ಞರು ಮತ್ತು ಸಂಶೋಧಕರಾದ ಡಾ. ವಸುಂಧರ ಫಿಲಿಯೋಜ, ಸ್ಥಳ: ವಸುಂಧರ ಭವನ, ಕಲಾಂಧಿಕ ಅಕಾಡೆಮಿ ಆಫ್ ಆರ್ಟ್ಸ್, ಸರಸ್ವತಿಪುರಂ.

ಕಣಿಯನಹುಂಡಿಯಲ್ಲಿಂದು (ಹೆಚ್.ಡಿ.ಕೋಟೆ ತಾ॥)

■ **ಶ್ರೀ ಕಾರ್ಗಳ್ಳಿ ಬಸವೇಶ್ವರ ದೇವಸ್ಥಾನ ಸೇವಾ ಸಮಿತಿ :** ಶ್ರೀ ಕಾರ್ಗಳ್ಳಿ ಬಸವೇಶ್ವರ ದೇವಸ್ಥಾನದ 8ನೇ ವರ್ಷದ ಕಾರ್ತಿಕ ಮಾಸದ ಜಾತ್ರಾ ಮಹೋತ್ಸವ, ಬೆಳಗ್ಗೆ 5 ಗಂಟೆಯಿಂದ ಗಣಪತಿ ಹೋಮ, ಹೆಣ್ಣು ಮಕ್ಕಳಿಂದ ಕುಂಭ ಕಳಸ ತರುವ ಕಾರ್ಯಕ್ರಮ, ಅನ್ನಸಂತರ್ಪಣೆ, ಸಂಗೀತ ರಸಮಂಜರಿ (ವಿನೋದ್ ಮತ್ತು ತಂಡದವರಿಂದ), ಸ್ಥಳ: ದೇವಸ್ಥಾನದ ಆವರಣ, ಕಣಿಯನಹುಂಡಿ ಗ್ರಾಮ, ಹಂಪಾಪುರ ಹೋಬಳಿ, ಹೆಚ್.ಡಿ.ಕೋಟೆ ತಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಪ್ರೊಫೆಸರ್ ಶ್ರೀಧರ್ ಹೆಗಡೆ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಡಾ.ಪಿ.ಎಸ್.ಮುರಳೀಧರ್, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–71ನೇ ಸಹಕಾರ ಸಪ್ತಾಹದ ಅಂಗವಾಗಿ, ಪ್ರಾಯೋಜಿತ ಕಾರ್ಯಕ್ರಮ, ಕರ್ನಾಟಕ ರಾಜ್ಯ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರೊಂದಿಗಿನ ಸಂದರ್ಶನ, ನಂತರ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷ ಜಿ.ಟಿ.ದೇವೇಗೌಡ ಅವರೊಂದಿಗಿನ ಸಂದರ್ಶನ. ಸಂದರ್ಶಕರು–ಡಾ.ಎ.ಎಸ್. ಶಂಕರ ನಾರಾಯಣ, ಪ್ರಾಯೋಜಕರು– ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು. 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅವರೊಂದಿಗೆ ಡಾ.ಬಿ.ವಿ. ವಸಂತಕುಮಾರ್ ಅವರು ನಡೆಸಿದ್ದ ಸಂವಾದದ ಮೂರನೇ ಭಾಗ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಮಧು ರವಿ ಕಶ್ಯಪ್–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ : ದಿಗ್ವಿಜಯ್ ಬಿ. ಮತ್ತು ಕೀರ್ತನ. ವಿ., **ಮಧ್ಯಾಹ್ನ:** 12.05–ವನಿತಾ ವಿಹಾರ, 12.35–ದೇವರನಾಮ–ಶ್ರೀಹರ್ಷ, 12.45–ನಮ್ಮ ಆರೋಗ್ಯ: ಆಂಟಿ ಬಯಾಟಿಕ್ ಜಾಗೃತಿ ಸಪ್ತಾಹದ ಸಂದರ್ಭದಲ್ಲಿ 'ಆ್ಯಂಟಿ ಬಯಾಟಿಕ್ ಬಳಕೆ' ಕುರಿತು ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಮೈಕ್ರೋಬಯಾಲಜಿ ವಿಭಾಗದ ಪ್ರೊಫೆಸರ್ ಡಾ.ಎಂ.ಎನ್.ಸುಮನಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಭಾರ್ಗವಿ. ಕೆ–ಹಾಡುಗಾರಿಕೆ, 4.00–ಮಹಿಳಾರಂಗ–"ನಾನು ನನ್ನ ಕಂಪನಿ" ದಿನನಿತ್ಯ ಬಳಸುವ ಆಹಾರ ಪದಾರ್ಥಗಳನ್ನು ಮನೆಯಲ್ಲಿಯೇ ತಯಾರಿಸುವ ರಮಾ ಶರ್ಮ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಕಿಶೋರ್ ಎಂ.ಕಾಕಡೆ, 6.50–ಕೃಷಿರಂಗ: ಮೀನುಗಾರಿಕಾ ಇಲಾಖೆಯಿಂದ ರೈತರಿಗೆ ದೊರೆಯುವ ಸೌಲಭ್ಯಗಳು. ಈ ಕುರಿತು ಮೈಸೂರು ಜಿಲ್ಲಾ ಮೀನುಗಾರಿಕಾ ಇಲಾಖೆ ಉಪನಿರ್ದೇಶಕ ಜಿ. ಹೆಚ್.ಮಂಜುನಾಥ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ: ಚಿತ್ರ ಚಿತ್ತಾರ–ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ, ಪ್ರಸ್ತುತಪಡಿಸುತ್ತಾರೆ–ಮೈಸೂರು ವಿಶ್ವವಿದ್ಯಾಲಯದ ಕನ್ನಡ ಸ್ನಾತಕೋತ್ತರ ಅಧ್ಯಯನ ವಿಭಾಗದ ಸಂಶೋಧನಾ ವಿದ್ಯಾರ್ಥಿ ಶಭಾನಾ, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಡಾ.ಬಿ. ದೇವೇಂದ್ರಪ್ಪ– ಜಲತರಂಗ್ ವಾದನ, 10.00–ರೂಪಕ, 10.30–ಸವಿನೆನಪು.

ಮೈಸೂರು ಮಿತ್ರ

ಚಾಮುಂಡಿಬೆಟ್ಟದ ನಂದಿಗೆ ಮಹಾಭಿಷೇಕ



ಕಾರ್ತಿಕ ಮಾಸದ ಅಂಗವಾಗಿ ಚಾಮುಂಡಿಬೆಟ್ಟದ ನಂದಿ ಮೂರ್ತಿಗೆ ಭಾನುವಾರ ಬೆಟ್ಟ ಹತ್ತುವ ಬಳಗದ ವತಿಯಿಂದ ಮಹಾಭಿಷೇಕ ನೆರವೇರಿಸಲಾಯಿತು.

ಮೈಸೂರು,ನ.17(ಎಂಟಿವೈ)- ಕಾರ್ತಿಕ ಮಾಸದ ಅಂಗವಾಗಿ ಚಾಮುಂಡಿಬೆಟ್ಟದ ನಂದಿ ಮೂರ್ತಿಗೆ ಭಾನುವಾರ ಶಾಸ್ತ್ರೋಕ್ತವಾಗಿ ಹಾಲು, ಮೊಸರು ಸೇರಿದಂತೆ 32 ಬಗೆ ದ್ರವ್ಯಗಳಿಂದ ಮಹಾಭಿಷೇಕವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು.

ಚಾಮುಂಡಿಬೆಟ್ಟವನ್ನು ಮೆಟ್ಟಿಲು ಮೂಲಕ ಹತ್ತುವವರು ಸೇರಿ ರಚಿಸಿಕೊಂಡಿರುವ ಬೆಟ್ಟದ ಬಳಗ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ 19ನೇ ವರ್ಷದ ಮಹಾಭಿಷೇಕವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಹೊಸಮಠದ ಶ್ರೀ ಚಿದಾನಂದ ಸ್ವಾಮಿ ಹಾಗೂ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥನಂದ ಸ್ವಾಮೀಜಿ ನಂದಿ ಮೂರ್ತಿಗೆ ಮಹಾಭಿಷೇಕ ನೆರವೇರಿಸಿದರು.

ಬೆಳಗ್ಗೆ 8.30ಕ್ಕೆ ಸಾಂಪ್ರದಾಯಿಕ ಪೂಜಾ ಕೈಂಕರ್ಯಗಳೊಂದಿಗೆ ಆರಂಭವಾದ ಅಭಿಷೇಕದಲ್ಲಿ ನಂದಿ ಮೂರ್ತಿಗೆ 300 ಲೀಟರ್ ಹಾಲು, 250 ಲೀಟರ್ ಮೊಸರು, 30 ಕೆಜಿ ತುಪ್ಪ, 10ಕೆಜಿ ಜೇನುತುಪ್ಪ ಸೇರಿದಂತೆ ವಿವಿಧ ದ್ರವ್ಯಗಳಿಂದ ನಂದಿ ಮೂರ್ತಿಗೆ ಮಜ್ಜನ ನೆರವೇರಿಸಲಾಯಿತು.

32 ಬಗೆಯ ಅಭಿಷೇಕ: ಚಾಮುಂಡಿಬೆಟ್ಟದ ಏಕಶಿಲೆಯ ನಂದಿ ಮೂರ್ತಿಗೆ ಪಾದ್ಯ, ಅರ್ಘ್ಯ, ಅಚಮನ, ಮದುಪರ್ಕ, ಪಂಚಾಮೃತ, ಹಾಲು, ಮೊಸರು, ಜೇನುತುಪ್ಪ ಸಕ್ಕರೆ, ಬಾಳೆಹಣ್ಣು ದ್ರಾಕ್ಷಿ, ಬೇಲದಹಣ್ಣು ಖರ್ಜೂರ, ಸೌತೆಕಾಯಿ, ವಿವಿಧ ಬಗೆಯ ಹಣ್ಣುಗಳು, ಕಬ್ಬಿನ ಹಾಲು, ಎಳನೀರು, ನಿಂಬೆಹಣ್ಣಿನ ರಸ, ಎಳ್ಳೆಣ್ಣೆ, ಪಾಯಸ, ಗೋಧಿ ಹಿಟ್ಟು, ಕಡಲೆ ಹಿಟ್ಟು, ಹೆಸರುಕಾಳಿನ ಹಿಟ್ಟು, ದರ್ಬೆ, ಅರಿಶಿನ, ಕುಂಕುಮ, ಸಿಂಧೂರ, ರಕ್ತಚಂದನ, ಭಸ್ಮ, ಪುಷ್ಪ, ನಾಣ್ಯಗಳಿಂದ ಮಹಾಭಿಷೇಕ ನೆರವೇರಿಸಲಾಯಿತು.

ಅಭಿಷೇಕ ನೆರವೇರಿದ ಬಳಿಕ ನಂದಿ ಮೂರ್ತಿಗೆ ರುದ್ರಾಭಿಷೇಕ, ಸುಗಂಧ ದ್ರವ್ಯದಿಂದ ಅಭಿಷೇಕ ಮಾಡಿದ ಬಳಿಕ ಅಲಂಕಾರ ಮಾಡಲಾಯಿತು. ನಂತರ ವಿಶೇಷ ಪೂಜೆ ನೆರವೇರಿಸಲಾಯಿತು. ಪ್ರತಿವರ್ಷ ಲೋಕ ಕಲ್ಯಾಣಾರ್ಥವಾಗಿ ಕಾರ್ತಿಕ ಮಾಸದಲ್ಲಿ ನಂದಿ ಮೂರ್ತಿಗೆ ಮಹಾಭಿಷೇಕ ನೆರವೇರಿಸಲಾಗುತ್ತಿದ್ದು, ಮರು ದಿನ ಸೋಮವಾರ ನಂದಿ ಮೂರ್ತಿ ಸುತ್ತಲೂ ದೀಪ ಬೆಳಗಿ ವಿಶೇಷ ಪೂಜೆ ನೆರವೇರಿಸಲಾಗುತ್ತದೆ. ಮೆಟ್ಟಿಲು ಮೂಲಕ ಬೆಟ್ಟ ಹತ್ತುವ ಹಲವಾರು ಮಂದಿ ಹಾಗೂ ಬೆಟ್ಟದ ಬಳಗ ಚಾರಿಟೇಬಲ್ ಟ್ರಸ್ಟ್ ಸದಸ್ಯರು ಹಾಗೂ ಕುಟುಂಬದ ಸದಸ್ಯರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಬೆಟ್ಟದ ಬಳಗ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಪ್ರಕಾಶನ್, ಕಾರ್ಯದರ್ಶಿ ಗೋವಿಂದ, ಪದಾಧಿಕಾರಿಗಳಾದ ಸುಂದರ್, ಶಂಕರ, ರಮೇಶ್, ಬಸವರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ನಕ್ಕರೆ ಅದೇ ಸ್ವರ್ಗ

ಸ್ಕೂಲಿನಲ್ಲಿ ಟೀಚರ್ : ನಾವು ಗಂಡು, ಹೆಣ್ಣು ಎಂದು ಭೇದ ಭಾವ ಮಾಡಬಾರದು. ಅದು ನೀಚ ಕೆಲಸ.

ವಿದ್ಯಾರ್ಥಿ : ಮತ್ಯಾಕೆ ಕ್ಲಾಸಿನಲ್ಲಿ ಹುಡುಗ, ಹುಡುಗಿಯರ ಬೇರೆ ಬೇರೆ ಕೂರಿಸ್ತೀರಿ.

ಮೈಸೂರು ಮಿತ್ರ

ಸೋಮವಾರ, 18 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಸಂಬಂಧಗಳಲ್ಲಿ ನಂಬಿಕೆ, ಮಾತಿನಲ್ಲಿ ಮಾಧುರ್ಯ, ನಡತೆಯಲ್ಲಿ ನಮ್ರತೆ ಇವು ವ್ಯಕ್ತಿಯನ್ನು ಎತ್ತರದ ಸ್ಥಾನಗಳಿಗೆ ಕರೆದೊಯ್ಯುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಪ್ಪೆ ತಕ್ಕಡಿಲಿ ಹಾಕಿದ ಹಾಗೆ'

ನಿಮ್ಮ ಪತ್ರಗಳು

■ ವಾಹನ ನಿಲುಗಡೆ ವ್ಯವಸ್ಥೆ ತೆರವುಗೊಳಿಸಲು ಮುಂದಾಗಿ

ಮಾನ್ಯರೆ,

ಪಾದಚಾರಿಗಳಿಗೆ ಮತ್ತು ಸೈಕ್ಲಿಂಗ್ ಮಾಡುವ ಸೈಕಲ್‌ಪ್ರಿಯರಿಗೆ ಯಾವುದೇ ರೀತಿಯ ಅಡಚಣೆಗಳು ಮತ್ತು ಅಪಘಾತಗಳು ಸಂಭವಿಸದಿರುವ ನಿಟ್ಟಿನಲ್ಲಿ ಕ್ರಮ ಕೈಗೊಂಡು ಮೈಸೂರಲ್ಲಿ ಸೈಕಲ್ ಮಾರ್ಗವನ್ನು ವಿಶೇಷ ಅನುದಾನದಲ್ಲಿ ನಿರ್ಮಿಸಲಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಕುವೆಂಪುನಗರದ ವಿಶ್ವಮಾನವ ರಸ್ತೆಯಾದ ಕುವೆಂಪು ಉದ್ಯಾನವನ (ಬಾಸುದೇವ ಸೋಮಾನಿ ಕಾಲೇಜು ಹತ್ತಿರ)ದಿಂದ ಶುರುವಾಗಿ ರಾಮಕೃಷ್ಣನಗರ ಸರ್ಕಲ್ ಸೇರಿ ದಟ್ಟಗಳ್ಳಿಯ ಸಾ.ರಾ. ಕಲ್ಯಾಣ ಮಂಟಪದವರೆಗೆ ಅನೇಕ ಹೋಟೆಲ್‌ಗಳು, ಗ್ಯಾರೇಜ್‌ಗಳು, ಎಸ್‌ಬಿಐ ಬ್ಯಾಂಕ್, ಡಿಟಿಡಿಸಿ ಕೊರಿಯರ್ ಕಚೇರಿ, ಸೂಪರ್ ಮಾರ್ಕೆಟ್‌ಗಳು, ಶಾಮಿಯಾನದ ಅಂಗಡಿಗಳಿದ್ದು, ಇವರ ವ್ಯಾಪಾರ ವಹಿವಾಟುಗಳ ಸಂದರ್ಭ ಸೇರಿ ಇತರ ಸಮಯಗಳಲ್ಲೂ ದ್ವಿಚಕ್ರ ವಾಹನವನ್ನು ನಿಲುಗಡೆಯ ಸ್ಥಳಗಳಾಗಿ ಆಕ್ರಮಿಸಿಕೊಂಡು, ಕೆಲ ಕಡೆ ಕಾರು, ಟೆಂಪೋ, ನಿಲ್ಲಿಸಿಕೊಳ್ಳುವ ಸಲುವಾಗಿ ಕೇಸರಿ ಮತ್ತು ಬಿಳಿ ಬಣ್ಣದ ಪ್ಲಾಸ್ಟಿಕ್‌ನಲ್ಲಿದ್ದ ಚಿಕ್ಕ ಕಂಬಗಳನ್ನು ಮುರಿದುಹಾಕಿ, ಕಿತ್ತುಹಾಕಲಾಗಿದೆ, ಇದರಿಂದ ಸಾರ್ವಜನಿಕ ಹಣ ವ್ಯರ್ಥವಾಗಿರುವ ಹಿನ್ನೆಲೆಯಲ್ಲಿ, ಹಾಗೂ ಸೈಕಲ್‌ಪ್ರಿಯರಿಗೆ ಮತ್ತು ಪಾದಚಾರಿ ಮಾರ್ಗವಿಲ್ಲದೆ ಮುಖ್ಯ ರಸ್ತೆಗಳಲ್ಲಿ ಸವಾರಿ ಮಾಡುವಂತಾಗಿದೆ.



ಇದರಿಂದ ಮುಖ್ಯ ರಸ್ತೆಯಲ್ಲಿ ಅಪಘಾತಗಳು ಸಂಭವಿಸಬಹುದಾಗಿದೆ, ಆದ್ದರಿಂದ ಈ ವಿಷಯಕ್ಕೆ ಸಂಬಂಧಪಟ್ಟ ಜನಪ್ರತಿನಿಧಿಗಳು, ಮೈಸೂರಿನ ಜಿಲ್ಲಾಧಿಕಾರಿಗಳು, ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ಈ ರಸ್ತೆಯಲ್ಲಿ ಕೇಸರಿ ಮತ್ತು ಬಿಳಿ ಬಣ್ಣದ ಪ್ಲಾಸ್ಟಿಕ್‌ನಲ್ಲಿದ್ದ ಚಿಕ್ಕ ಕಂಬಗಳನ್ನು ಹಾಳು ಮಾಡಿರುವವರಿಗೂ ದಂಡ ವಿಧಿಸಿ, ಮತ್ತು ಪಾರ್ಕಿಂಗ್ ಸ್ಥಳಗಳಾಗಿ ಆಕ್ರಮಿಸಿಕೊಂಡು ವ್ಯಾಪಾರ ವಹಿವಾಟುಗಳು ಮಾಡುತ್ತಿರುವವರಿಗೆ, ಮುಂದಿನ ದಿನಗಳಲ್ಲಿ ಸೈಕಲ್‌ಪ್ರಿಯರಿಗೆ ಮತ್ತು ಪಾದಚಾರಿಗಳಿಗೆ ನಿರ್ಮಾಣ ಮಾಡಿರುವ ಈ ವ್ಯವಸ್ಥೆ ಬಗ್ಗೆ ತಿಳಿಸುವ ಕೆಲಸ ಕಾರ್ಯಗಳನ್ನು ಮಾಡುವುದರ ಜೊತೆಗೆ ಈ ವ್ಯವಸ್ಥೆಯ, ಮುಂದೆ ನೆಲೆಸಿರುವ ಮಳಿಗೆದಾರರಿಗೆ ಸುತ್ತೋಲೆ ಹೊರಡಿಸಲು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

■ ಹೋರಾಟಕ್ಕೆ ಸಂದ ಪುರಸ್ಕಾರ

ಮಾನ್ಯರೆ,

ಈ ಬಾರಿಯ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 100 ಜನರಿಗೆ, ಸುವರ್ಣ ಕರ್ನಾಟಕ ಪ್ರಶಸ್ತಿ ನೀಡಿ ಗೌರವಿಸಿರುವುದು ಸ್ವಾಗತಾರ್ಹ ಕ್ರಮ ಎನ್ನಬಹುದು. ಅದರಲ್ಲೂ, ವಿಶೇಷವಾಗಿ ಮೈಸೂರಿನ ಮಹಿಳಾ ಪರ ಹೋರಾಟಗಾರ್ತಿ, ಕಳೆದ 50 ವರ್ಷಗಳಿಂದಲೂ ಮಹಿಳೆಯರ ಹಕ್ಕುಗಳಿಗೆ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿರುವ ಡಾ.ಇ.ರತಿರಾವ್ ಅವರಿಗೆ ರಾಜ್ಯ ಸರ್ಕಾರ ಸುವರ್ಣ ಕರ್ನಾಟಕ ಪ್ರಶಸ್ತಿ ನೀಡಿ ಗೌರವಿಸಿರುವುದು, ಸರ್ಕಾರ ತನ್ನನ್ನು ತಾನೇ ಗೌರವಿಸಿಕೊಂಡಂತಾಗಿದೆ.

ನನಗೆ, ಸುಮಾರು 40 ವರ್ಷಗಳಿಂದಲೂ ಪರಿಚಯ ಇರುವ ಇವರು, ರಾಜ್ಯದ ಯಾವುದೇ ಮೂಲೆಯಲ್ಲೂ ಮಹಿಳೆಯರಿಗೆ ಆದ ಅಥವಾ ಆಗುತ್ತಿರುವ ಅನ್ಯಾಯಗಳ ವಿರುದ್ಧ ಹೋರಾಟ ಮಾಡಿಕೊಂಡು ಬರುತ್ತಿದ್ದಾರೆ, ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ, ಸಮತಾ, ಪಿಯುಸಿಎಲ್, ಇಂತಹ ಹತ್ತಾರು ಸಂಘಟನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಮಹಿಳಾ ಪರ ದಿಟ್ಟ ಹೋರಾಟಗಾರ್ತಿ ಎನಿಸಿಕೊಂಡವರು.


ಮೈಸೂರಿನಲ್ಲಿರುವ ಕೇಂದ್ರ ಆಹಾರ ಮತ್ತು ಸಂಶೋಧನಾ ಕೇಂದ್ರದಲ್ಲಿ ವಿಜ್ಞಾನಿಯಾಗಿ (ಸಿ.ಎಫ್.ಟಿ.ಆರ್.ಐ) ಸೇವೆ ಸಲ್ಲಿಸುತ್ತಿದ್ದಾಗಲೂ ತನ್ನ ಕರ್ತವ್ಯಕ್ಕೆ ಚ್ಯುತಿ ಬಾರದಂತೆ ಕೆಲಸ ನಿರ್ವಹಿಸಿದ್ದಾರೆ, ಈ ಇಳಿವಯಸ್ಸಿನಲ್ಲೂ ಮಹಿಳಾ ಪರ ಹೋರಾಟದ ಹಲವಾರು ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವುದನ್ನು ಮೆಚ್ಚಲೇಬೇಕು. ನನಗೆ ಪ್ರಶಸ್ತಿ ಕೊಡಿ ಎಂದು ಸರ್ಕಾರಕ್ಕೆ ಅರ್ಜಿ ಹಾಕದೇ, ಸರ್ಕಾರವೇ ಇವರನ್ನು ಗುರುತಿಸಿ ಇವರಿಗೆ ಪ್ರಶಸ್ತಿ ನೀಡಿರುವುದು ಇವರ ಹೋರಾಟಕ್ಕೆ ದೊರೆತ ಜಯವೆಂದೇ ಹೇಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

■ ಮಿತಿ ಮೀರಿದ ಬೀದಿನಾಯಿಗಳ ಹಾವಳಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ರಾವಂದೂರು ಹೋಬಳಿ ಅರೇನಹಳ್ಳಿ ಗ್ರಾಮದ ಹಿಂದೂ ಪ್ರದೇಶದಲ್ಲಿ ಇತ್ತೀಚೆಗೆ ಮಿತಿಮೀರಿದ ಬೀದಿನಾಯಿಗಳ ಕಾಟ ಹೆಚ್ಚಾಗಿದೆ. ಎಲ್ಲೆಂದರಲ್ಲಿ ತಿರುಗಾಡುವ ನಾಯಿಗಳು ಜನರು ಓಡಾಡಲು ಭಯ ತರುತ್ತಿದೆ. ರಾತ್ರಿ ವೇಳೆ ಮಕ್ಕಳು, ಮಹಿಳೆಯರು ಹಾಗೂ ವೃದ್ಧರು ಸಂಚರಿಸಲು ಭಯಪಡುತ್ತಿದ್ದಾರೆ. ಹಿಂಡುಹಿಂಡಾಗಿ ತಿರುಗುವ ಬೀದಿನಾಯಿಗಳು ಗ್ರಾಮದಲ್ಲಿ ಭಯದ ವಾತಾವರಣ ನಿರ್ಮಾಣ ಮಾಡಿವೆ. ನಾಳೆ ಜನರ ಮೇಲೆ ದಾಳಿ ನಡೆಸಿ ಅನಾಹುತ ಸಂಭವಿಸುವ ಸಾಧ್ಯತೆ ಇದೆ. ರಾತ್ರಿ ವೇಳೆ ಜೋರಾಗಿ ಕೂಗಿ, ಊರಿಗೆ ಸ್ಮಶಾನದ ಕಳೆ ತರುತ್ತಿವೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. **–ಸಂಜು ಪುಟ್ಟೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.**



ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡುಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

44. ಚಾಮರಾಜನಗರ ಶ್ರೀಕಂಠಶಾಸ್ತ್ರಿಗಳು





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮೈಸೂರು ನಗರದ ಅಭಿವೃದ್ಧಿಗೆ ತಳಪಾಯ ಹಾಕಿ, ತಾವೂ ವಿದ್ವಾಂಸರಾಗಿದ್ದುಕೊಂಡು ಸಾಂಸ್ಕೃತಿಕ ವಾತಾವರಣವನ್ನು ಉನ್ನತಮಟ್ಟಕ್ಕೆ ಏರಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರು ಮೈಸೂರು ನಂಜನಗೂಡು ನಡುವೆ ಕಪಿಲಾ ನದಿಯ ಬಳಿ 72 ಮನೆಗಳ ಒಂದು ಅಗ್ರಹಾರವನ್ನು ಕಟ್ಟಿಸಿ, ಅದಕ್ಕೆ ಕತ್ವಾಡಿಪುರ ಎಂದು ಹೆಸರಿಟ್ಟು ಅನೇಕ ಪಂಡಿತರಿಗೆ ಆಶ್ರಯ ಕಲ್ಪಿಸಿದ್ದರು. ಹಾಗೆ ಅಲ್ಲೊಂದು ಮನೆಯನ್ನು ಮಹಾರಾಜರಿಂದ ದಾನವಾಗಿ ಪಡೆದುಕೊಂಡು ವಾಸಿಸುತ್ತಿದ್ದ ಶ್ರೋತ್ರೀಯ ಬ್ರಾಹ್ಮಣರ ಪೈಕಿ ರಾಮಶೇಷಶಾಸ್ತ್ರಿಗಳು ಒಬ್ಬರು. ರಾಮಶೇಷ ಶಾಸ್ತ್ರಿಗಳು ಸ್ವಲ್ಪ ಕಾಲದ ನಂತರ ಆ ಮನೆ ಹಾಗೂ ತಮಗೆ ಕೊಟ್ಟಿದ್ದ 12 ಹಣಗಳ ವೃತ್ತಿ ಎರಡನ್ನೂ ಮತ್ತೊಬ್ಬ ನಿಷ್ಕಲ್ಮಶ ಪಂಡಿತ ವೆಂಕಟರಮಣ ಶಾಸ್ತ್ರಿ ಅವರಿಗೆ ದಾನ ಮಾಡಿಬಿಟ್ಟರು.

ಸಿಂಧುಘಟ್ಟದವರಾದ ವೆಂಕಟರಮಣ ಶಾಸ್ತ್ರಿಗಳು ಶೃಂಗೇರಿಯಲ್ಲಿ ಸಂಸ್ಕೃತ, ವೇದಾಭ್ಯಾಸಗಳನ್ನು 32ನೇ ಪೀಠಾಧಿಪತಿಗಳಾದ ಶ್ರೀವೃದ್ಧ ನರಸಿಂಹಭಾರತಿಗಳ ಸಹಪಾಠಿಯಾಗಿ ಕಲಿತು 1831ರಲ್ಲಿ ಮೈಸೂರಿಗೆ ಬಂದು ನೆಲೆಸಿದ್ದರು. ವೇದ, ಸಾಹಿತ್ಯ, ತರ್ಕ, ಜ್ಯೋತಿಷ್ಯಶಾಸ್ತ್ರ ಮತ್ತು ಧರ್ಮಾಚರಣೆಗಳಲ್ಲಿ ಪಂಡಿತರಾಗಿದ್ದ ಅವರನ್ನು ರಾಮಶೇಷಶಾಸ್ತ್ರಿಗಳು ಮುಮ್ಮಡಿಯವರ ಬಳಿ ಕರೆದುಕೊಂಡು ಹೋಗಿ ಅವರ ಅಗಾಧ ಪಾಂಡಿತ್ಯದ ಪರಿಚಯ ಮಾಡಿಕೊಟ್ಟಿದ್ದರು. ಅವರ ಪಾಂಡಿತ್ಯವನ್ನು ಮೆಚ್ಚಿದ್ದ ಮಹಾರಾಜರು ತಿಂಗಳಿಗೆ 12 ಹಣಗಳ ಸಂಬಳ ಗೊತ್ತು ಮಾಡಿದ್ದರು. ನಂಜನಗೂಡಿನ ಹತ್ತಿರದ ಕತ್ವಾಡಿಪುರದ ಅಗ್ರಹಾರ ಮತ್ತು ವೃತ್ತಿಯನ್ನು ಈ ವೆಂಕಟರಮಣ ಶಾಸ್ತ್ರಿಗಳಿಗೆ ರಾಮಶೇಷಶಾಸ್ತ್ರಿಗಳು ದಾನ ಮಾಡಿದ್ದರು. ವೆಂಕಟರಮಣ ಶಾಸ್ತ್ರಿಗಳ ಪೂರ್ವಜರು ಬಾದಾಮಿಯವರು. ಅಲ್ಲಿ ನೆಲೆಸಿದ್ದ ಗಂಗಾಧರ ವಾರಣಾಸಿ ಇವರ ಮುತ್ತಾತ. ಹಲವಾರು ಸಲ ಕಾಶಿಗೆ ಹೋಗಿದ್ದರಿಂದ ಅವರ ಹೆಸರಿಗೆ ವಾರಣಾಸಿ ಕೂಡಿಕೊಂಡಿತ್ತು. 1730ರಲ್ಲಿ ಆ ಪ್ರದೇಶದಲ್ಲಿ ಅಶಾಂತಿ ಉಂಟಾದಾಗ ಗಂಗಾಧರ ವಾರಣಾಸಿಗಳು ಸಂಸಾರ ಸಮೇತ ಸಿಂಧುಘಟ್ಟಕ್ಕೆ ಬಂದು ಅಲ್ಲಿಯ ಪಾಳೇಗಾರ ವೀರಣ್ಣನಾಯಕ ನೀಡಿದ ವೃತ್ತಿ ಅವಲಂಬಿಸಿ ಜೀವನ ಮಾಡುತ್ತಿದ್ದರು.

ವೆಂಕಟರಮಣ ಶಾಸ್ತ್ರಿಗಳನ್ನು ಅರಮನೆಯ ಪಂಡಿತರೊಬ್ಬರನ್ನಾಗಿ 12 ಹಣದ ಮೇಲೆ ನೇಮಿಸಲು ಮಹಾರಾಜರು ಅಪೇಕ್ಷಿಸಿದಾಗ ಶಾಸ್ತ್ರಿಗಳು ಅದನ್ನು ಬಯಸದೆ ವೈದಿಕನಾಗಿ ಹಳ್ಳಿ ವಾತಾವರಣದಲ್ಲಿರಲು ಕೋರಿಕೊಂಡಾಗ ಉದಾರಮನಸ್ಸಿನ ಮುಮ್ಮಡಿಯವರು ಅವರನ್ನು ತಾವು ತಮ್ಮ ತಂದೆಯವರ ಹೆಸರಿನಲ್ಲಿ ಹೊಸದಾಗಿ ಕಟ್ಟಿಸಿದ್ದ ಚಾಮರಾಜನಗರದ ಚಾಮರಾಜೇಶ್ವರ ದೇವಾಲಯದಲ್ಲಿ ಧರ್ಮಾಧ್ಯಯನ ವೃತ್ತಿಯಲ್ಲಿ ನೇಮಿಸಿದರು. ಶಾಸ್ತ್ರಿಗಳು ಮೈಸೂರಿನಿಂದ ಚಾಮರಾಜನಗರಕ್ಕೆ ಬಂದು ಸೇರಿದರು. ಅವರ ನಾಲ್ವರು ಪುತ್ರರಲ್ಲಿ ಶ್ರೀಕಂಠಶಾಸ್ತ್ರಿಗಳು ಹಿರಿಯವರಾಗಿ 1833ರ ಅಕ್ಟೋಬರ್ 15ರಂದು ಜನಿಸಿದರು.

ಚುರುಕು ಬುದ್ಧಿಯ ಶ್ರೀಕಂಠಶಾಸ್ತ್ರಿಗಳು ತಂದೆಯವರಿಂದಲೇ ಸಂಸ್ಕೃತ, ಶಾಸ್ತ್ರಗಳ ಅಭ್ಯಾಸ ಮಾಡಿದರು. 15ನೇ ವಯಸ್ಸಿಗೇ ಋಗ್ವೇದದ ಎಂಟು ಅಷ್ಟಕಗಳು, ಸಾಹಿತ್ಯ ಮತ್ತು ನಾಟಕಗಳನ್ನು ಕಲಿತರು. ಈ ವೇಳೆಗಾಗಲೇ ಅಲ್ಲಿಯವರೇ ಆದ ಸುಬ್ಬದೀಕ್ಷಿತ ಅವರ ಪುತ್ರಿ ಸುಬ್ಬಮ್ಮ ಅವರೊಂದಿಗೆ ಮದುವೆಯಾಗಿತ್ತು. ಇವರು ಇನ್ನೂ ಹೆಚ್ಚು ಕಲಿಯಲು ಅಭಿಲಾಷೆ ವ್ಯಕ್ತಪಡಿಸಿದ್ದರಿಂದ ಇವರ ತಂದೆ ತಮ್ಮ ಮಗನನ್ನು ಮೈಸೂರಿಗೆ ಕಳುಹಿಸಿದರು. ಮೈಸೂರಿನಲ್ಲಿ ವಾರಾನ್ನ ಮಾಡಿಕೊಂಡು ಶ್ರೀಕಂಠಶಾಸ್ತ್ರಿಗಳು ಕಾಶೀಶೇಷಶಾಸ್ತ್ರಿ ಮತ್ತು ಕವಿ ವರದಾಚಾರ್ಯರಲ್ಲಿ ಅಭ್ಯಾಸ ಪ್ರಾರಂಭಿಸಿದರು. ಅವರ ಸಹ ಅಭ್ಯರ್ಥಿಗಳ ಪೈಕಿ ಮುಂದೆ ಪರಕಾಲ ಮಠದ ಸ್ವಾಮಿಗಳಾದ ಶ್ರೀ ಕೃಷ್ಣ ಬ್ರಹ್ಮತಂತ್ರ ಸ್ವಾಮಿಗಳೂ ಇದ್ದರು.

ಮೈಸೂರಿನಲ್ಲಿ ಹೆಚ್ಚು ಕಲಿಯುತ್ತಿದ್ದಾಗ ಶಾಸ್ತ್ರಿಗಳು ಸಂಸಾರದ ಕಾರಣಗಳಿಂದಾಗಿ ಚಾಮರಾಜನಗರಕ್ಕೆ ಬರಬೇಕಾಯಿತು. ಚಾಮರಾಜನಗರದ ದೇವಸ್ಥಾನದಲ್ಲಿ 'ಆಶೀರ್ವಾದ' ಮಾಡುವ ಕಾರ್ಯವನ್ನು ಪ್ರಾರಂಭಿಸಿದರು. ಒಮ್ಮೆ ದೇವಸ್ಥಾನಕ್ಕೆ ಮುಮ್ಮಡಿ ಮಹಾರಾಜರು ಆಗಮಿಸಿದಾಗ, ಪೂಜಾದಿಗಳು ಮುಗಿದಮೇಲೆ ಶಾಸ್ತ್ರಿಗಳು ಅರ್ಧ ಘಂಟೆ ಸುಲಲಿತವಾಗಿ ಸಂಸ್ಕೃತದಲ್ಲಿ ರಾಜಾಶೀರ್ವಾದ ಮಾಡಿದರು. ಶಾಸ್ತ್ರಿಗಳು ಇನ್ನೂ ಚಿಕ್ಕವರಾಗಿದ್ದು ಆಗಲೇ ಹೆಚ್ಚಿನ ಪ್ರತಿಭೆ, ವಾಕ್ ಸಾಮರ್ಥ್ಯ ಸಾಧಿಸಿಕೊಂಡಿರುವುದನ್ನು ಕಂಡು ಸಂತೋಷರಾದ ಮಹಾರಾಜರು ಅವರನ್ನು ಅಲ್ಲಿನ ಅರಮನೆಗೆ ಬರಮಾಡಿಕೊಂಡು ಮೈಸೂರಿಗೆ ಬಂದು ತಮ್ಮ ಆಸ್ಥಾನದಲ್ಲಿ ಪಂಡಿತರಾಗಿರುವಂತೆ ಅಪ್ಪಣೆ ಮಾಡಿದರು.

ಅವರ ಆಹ್ವಾನವನ್ನು ಒಪ್ಪಿದ ಶಾಸ್ತ್ರಿಗಳು ಸಂಸಾರ ಸಮೇತ ಮೈಸೂರಿಗೆ ಬಂದು ಅರಮನೆಯಲ್ಲಿ ಪ್ರಮುಖ ಕೆಲಸದಲ್ಲಿದ್ದು ಪ್ರಸಿದ್ಧರೂ, ವೇದಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿದ್ದವರೂ, ಹಲವಾರು ಮಂದಿಗೆ ಆಶ್ರಯದಾತರೂ ಆಗಿದ್ದ ಭಾಗವತ ಸುಬ್ಬರಾಯರ ಮನೆಯಲ್ಲಿ ಆಶ್ರಯ ಪಡೆದುಕೊಂಡರು. ಕೆಲವು ದಿನಗಳ ನಂತರ ಮಹಾರಾಜರು ಅವರನ್ನು ಮೂರು ವರಹಗಳ (ಒಂಭತ್ತು ರೂಪಾಯಿ) ಸಂಬಳದ ಮೇಲೆ ಅರಮನೆಯಲ್ಲಿ ಪಂಡಿತರೊಬ್ಬರನ್ನಾಗಿ ನೇಮಿಸಿದರು. ಕೆಲವು ವರ್ಷಗಳ ನಂತರ ಶ್ರೀಕಂಠಶಾಸ್ತ್ರಿಗಳ ಪತ್ನಿ ಸುಬ್ಬಮ್ಮ ಕಾಲವಾದ ಕಾರಣ ಶಾಸ್ತ್ರಿಗಳು ತಮ್ಮ ಮಕ್ಕಳನ್ನು ಚಾಮರಾಜನಗರಕ್ಕೆ ಕಳುಹಿಸಿಬಿಟ್ಟರು. ಈ ಮಧ್ಯೆ 1868ರಲ್ಲಿ ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ನಿಧನರಾಗಿ ಅವರನ್ನೇ ನಂಬಿ ಆಶ್ರಯ ಪಡೆದಿದ್ದ ಪಂಡಿತರಿಗೆ ಅರಮನೆಯಲ್ಲಿ ಆಶ್ರಯ ತಪ್ಪಿಹೋಗಿ ದಿಕ್ಕಿಲ್ಲದಂತಾದರು. ಶ್ರೀಕಂಠಶಾಸ್ತ್ರಿಗಳು ಚಾಮರಾಜನಗರಕ್ಕೆ ಹಿಂತಿರುಗಿ ಬಂದ ಮೇಲೆ ಅಲ್ಲಿ ಹೊಸದಾಗಿ ಪ್ರಾರಂಭವಾಗಿದ್ದ ಶಾಲೆಯೊಂದರಲ್ಲಿ ಅಧ್ಯಾಪಕರ ಕೆಲಸ ಸಿಕ್ಕಿತು. ಈ ಮಧ್ಯೆ ಮುಮ್ಮಡಿಯವರ ಒತ್ತಾಸೆಯ ಮೇಲೆ ಶಾಸ್ತ್ರಿಗಳು ಎರಡನೆಯ ಮದುವೆ ಮಾಡಿಕೊಂಡಿದ್ದರು.

ಸಂಸಾರದ ತಾಪತ್ರಯಗಳು, ಮಕ್ಕಳ ಸಾವು ಶ್ರೀಕಂಠಶಾಸ್ತ್ರಿಗಳಿಗೆ ಚಾಮರಾಜನಗರ ಬೇಡವೆನ್ನಿಸಿತು. ಒಬ್ಬರೇ ಮೈಸೂರಿಗೆ ಹಿಂತಿರುಗಿ ಬಂದರು. ರಾಜಾಶ್ರಯ ಮುಮ್ಮಡಿಯವರ ಕಾಲದಂತೆ ಇರಲಿಲ್ಲ. ದರ್ಬಾರ್ ಭಕ್ಷಿ ಅಂಬಿಲ್ ನರಸಿಂಹ ಐಯ್ಯಂಗಾರ್ ಅವರನ್ನು ಕಂಡಾಗ ಅವರು ಶಾಸ್ತ್ರಿಗಳನ್ನು ಮಹಾರಾಣಿ ಕಾಲೇಜಿನಲ್ಲಿ ಸಂಸ್ಕೃತ ಭಾಷೆಯ ಬೋಧಕರನ್ನಾಗಿ ನೇಮಿಸಿದರು. 1883ರಲ್ಲಿ ಹಿತಬೋಧಿನಿ ಮಾಸ ಪತ್ರಿಕೆಯನ್ನು ಪ್ರಾರಂಭಿಸಿದ ಮೂವರಲ್ಲಿ ಒಬ್ಬರಾದ ಎಂ.ವೆಂಕಟಕೃಷ್ಣಯ್ಯನವರು ಶ್ರೀಕಂಠಶಾಸ್ತ್ರಿಗಳನ್ನು ಅಲ್ಲಿ ಸಹಸಂಪಾದಕರನ್ನಾಗಿ ಕೆಲಸಕ್ಕೆ ನೇಮಿಸಿದರು. ಶಾಸ್ತ್ರಿಗಳು ಸ್ವಲ್ಪ ಅವಧಿಯ ನಂತರ ಮಹಾರಾಣಿ ಕಾಲೇಜಿನ ಬೋಧಕ ವೃತ್ತಿಗೆ ರಾಜೀನಾಮೆ ನೀಡಿ ಮಹಾರಾಜ ಸಂಸ್ಕೃತ ಕಾಲೇಜಿನಲ್ಲಿ ಸ್ವಲ್ಪ ಕಾಲ ಉಪಾಧ್ಯಾಯರಾಗಿ ಕೆಲಸ ಮಾಡಿದರು. ಶಾಸ್ತ್ರಿಗಳ ಪ್ರತಿಭೆಯ ಬಗ್ಗೆ ಅರಿವಿದ್ದ ಶಾಲಾ ಇನ್ಸ್‌ಪೆಕ್ಟರ್ ಜನರಲ್ ಎಚ್.ಜೆ.ಭಾಭಾ ಇವರನ್ನು ಪಠ್ಯಪುಸ್ತಕಗಳ ಸಮಿತಿ ಸದಸ್ಯರನ್ನಾಗಿ, ಸಂಸ್ಕೃತ ಭಾಷೆಯ ಸ್ಥಳೀಯ ಪರೀಕ್ಷೆಗಳ ಪರೀಕ್ಷಕರನ್ನಾಗಿ ನೇಮಿಸಿದರು.

ಈ ಹಿಂದೆ ಅವರ ಜೊತೆಯಲ್ಲಿ ಓದಿದ ಧರ್ಮಾಧಿಕಾರಿ ಚಕ್ರವರ್ತ್ಯಯ್ಯಂಗಾರ್ ಹಾಗೂ ಶ್ರೀಕೃಷ್ಣ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳ ಒತ್ತಾಯದ ಮೇಲೆ ಶ್ರೀಕಂಠಶಾಸ್ತ್ರಿಗಳು ಏಳೆಂಟು ವರ್ಷ ಶ್ರಮವಹಿಸಿ "ಧಾತುರೂಪಪ್ರಕಾಶಿಕಾ" ಎಂಬ ಹೆಸರಿನ ವ್ಯಾಕರಣ ಪುಸ್ತಕವನ್ನು ಬರೆದರು. ಚಕ್ರವರ್ತ್ಯಯ್ಯಂಗಾರ್ 1,000 ಪುಟಗಳ ಈ ಪುಸ್ತಕವನ್ನು ತಮ್ಮದೇ ವಿದ್ಯಾತರಂಗಿಣಿ ಮುದ್ರಣಾಲಯದಲ್ಲಿ ಮುದ್ರಿಸಿ ಹೊರತಂದರು. 1903ರಲ್ಲಿ ಶಾಸ್ತ್ರಿಗಳಿಗೆ 70 ವರ್ಷ ವಯಸ್ಸಾದಾಗ ಸರ್ಕಾರ ಅವರನ್ನು ನಿವೃತ್ತಿಗೊಳಿಸಿತು. ಶ್ರೀಕಂಠಶಾಸ್ತ್ರಿಗಳು ಮತ್ತೆ ಚಾಮರಾಜನಗರಕ್ಕೆ ಹಿಂತಿರುಗಿದರು.

ಅರಮನೆಯಲ್ಲಿ ಧರ್ಮಾಧಿಕಾರಿಯಾಗಿದ್ದ ಕುಟ್ಟಾ ನರಸಿಂಹಶಾಸ್ತ್ರಿಗಳು ಕಾಲವಾಗಿ ಆ ಸ್ಥಾನ ತೆರವಾದಾಗ ಶ್ರೀಕಂಠಶಾಸ್ತ್ರಿಗಳ ವಿದ್ವತ್ತನ್ನು ತಿಳಿದುಕೊಂಡ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಅವರನ್ನು ಆ ಸ್ಥಾನಕ್ಕೆ ನೇಮಿಸಿದರು. ಈ ಕಾರಣ ಶಾಸ್ತ್ರಿಗಳು ಮತ್ತೆ ಮೈಸೂರಿಗೆ ಬರಬೇಕಾಯಿತು. ಮಹಾರಾಜರ ವಿಶಾಲ ಮನೋಭಾವ, ದಯೆ ಮತ್ತು ವಿದ್ವಾಂಸರ ಬಗ್ಗೆ ಇದ್ದ ಗೌರವ ಇತ್ಯಾದಿ ಕುರಿತಂತೆ ಶಾಸ್ತ್ರಿಗಳು ಶ್ಲೋಕಗಳನ್ನು ರಚಿಸಿ ಅವುಗಳನ್ನು "ಮಹಾರಾಜಾಭ್ಯುದಯ ಪ್ರಶಂಸಾ" ಹೆಸರಿನಲ್ಲಿ ಪ್ರಕಟಿಸಿದರು. ಅವುಗಳನ್ನು ತಮ್ಮ ಮೊಮ್ಮಗ ವೆಂಕಟರಮಣ ಶಾಸ್ತ್ರಿಯ ಜೊತೆ ಮಹಾರಾಜರ ಮುಂದೆ ಓದಿ ವಿವರಿಸಿದರು. ಈ ವೇಳೆಗಾಗಲೇ ಅವರಿಗೆ ವಯಸ್ಸಾಗಿ ಶಕ್ತಿ ಕುಗ್ಗುತ್ತಿತ್ತು. ಸುಮಾರು ಎರಡು ವರ್ಷಗಳ ನಂತರ 1917ರಲ್ಲಿ ಶ್ರೀಕಂಠಶಾಸ್ತ್ರಿಗಳು ವಿಧಿವಶರಾದರು. ಅವರ ನಿಧನದೊಂದಿಗೆ ಮೈಸೂರು ಮತ್ತು ಚಾಮರಾಜನಗರ ಮಹಾವಿದ್ವಾಂಸರೊಬ್ಬರನ್ನು ಕಳೆದುಕೊಂಡಿತ್ತು.

ಅಮೆರಿಕಾದ ಕ್ಯಾಲಿಫೋರ್ನಿಯಾ ಬೌರ್ನ್ಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಪ್ರೊಫೆಸರ್ ಆಗಿರುವ ಸಿ.ವಿ.ರವಿಶಂಕರ್ ಅವರು ಅಂದಿನ ಮೈಸೂರು ಇತಿಹಾಸದ ಬಗ್ಗೆ 'ಸನ್ಸ್ ಅಫ್ ಸರಸ್ವತಿ' ಎಂಬ ಅಮೂಲ್ಯವಾದ ಆಂಗ್ಲ ಪುಸ್ತಕವನ್ನು ಪ್ರಕಟಿಸಿದ್ದು ಅಲ್ಲಿ ಇಂತಹ ಹಲವು ಮಹಾನುಭಾವರನ್ನು ಕುರಿತಂತೆ ಪ್ರಸ್ತಾಪ ಮಾಡಿದ್ದಾರೆ.

ಹದಿಹರೆಯದ ಹೆಣ್ಣು ಮಕ್ಕಳ ಸ್ವಾಸ್ಥ್ಯ ಕುರಿತು ಅರಿವು ಕಾರ್ಯಕ್ರಮ

ಮೈಸೂರು, ನ.17(ಎಸ್‌ಬಿಡಿ)– ವಿ–ಕೇರ್ ಸಂಸ್ಥೆ ವತಿಯಿಂದ ಮೈಸೂರಿನ ಹಿನಕಲ್ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಹದಿಹರೆಯದ ಹೆಣ್ಣು ಮಕ್ಕಳ ಮಾಸಿಕ ಋತುಚಕ್ರ ಹಾಗೂ ವೈಯಕ್ತಿಕ ಸ್ವಚ್ಛತೆ ಕುರಿತು ಅರಿವು ಕಾರ್ಯಕ್ರಮ ಆಯೋಜಿಸಲಾಗಿತ್ತು.

ಸಂಸ್ಥೆಯ ಸಂಸ್ಥಾಪಕಿ ಡಾ.ಕುಮುದಿನಿ ಮಾತನಾಡಿ, ಹದಿಹರೆಯಕ್ಕೆ ಕಾಲಿಡುತ್ತಿರುವ ಹೆಣ್ಣು ಮಕ್ಕಳ ಋತುಸ್ರಾವಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ಸ್ವಚ್ಛತೆ ಹಾಗೂ ಆರೋಗ್ಯ ಸಂರಕ್ಷಣೆ ಆ ಮಗುವಿನ ಶಾರೀರಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ. ಈ ಹಿನ್ನೆಲೆಯಲ್ಲಿ ವೈಜ್ಞಾನಿಕವಾಗಿ ತಮ್ಮ ದೈಹಿಕ ಬೆಳವಣಿಗೆ ಬಗ್ಗೆ ಅರಿವು ಹೊಂದುವುದು ಬಹಳ ಮುಖ್ಯ ಎಂದು ತಿಳಿಸಿದರು.



ಹಿನಕಲ್ ಸರ್ಕಾರಿ ಶಾಲೆಯಲ್ಲಿ ಮಾಸಿಕ ಋತುಚಕ್ರ ಹಾಗೂ ವೈಯಕ್ತಿಕ ಸ್ವಚ್ಛತೆ ಕುರಿತ ಅರಿವು ಕಾರ್ಯಕ್ರಮದಲ್ಲಿ ವಿ–ಕೇರ್ ಸಂಸ್ಥೆಯ ಡಾ.ಕುಮುದಿನಿ ಮಾತನಾಡಿದರು.

ಮಾಸಿಕ ಋತುಸ್ರಾವದ ಬಗ್ಗೆ ಗ್ರಾಮೀಣ ಮಕ್ಕಳು ಹಾಗೂ ಮಹಿಳೆಯರಲ್ಲಿ ಈಗಲೂ ಬಹಳ ಮಡಿವಂತಿಕೆ, ಮುಜುಗರ ಹಾಗೂ ಅವೈಜ್ಞಾನಿಕ ಧೋರಣೆಗಳಿವೆ. ವೈಯಕ್ತಿಕ ಹಾಗೂ ಸಾಮಾಜಿಕ ಅಭಿವೃದ್ಧಿ ನಿಟ್ಟಿನಲ್ಲಿ ಪ್ರತಿಯೊಬ್ಬ ಬಾಲಕಿಯೂ ಮಾಸಿಕ ಋತುಸ್ರಾವವನ್ನು ಪ್ರಕೃತಿ ಸಹಜ ಹಾಗೂ ಪ್ರಕೃತ್ತಿದತ್ತ ಆರೋಗ್ಯಕರ ಪ್ರಕ್ರಿಯೆ ಎಂದೇ ಪರಿಗಣಿಸಿ, ಅದರ ನಿರ್ವಹಣೆ ಹಾಗೂ ಸ್ವಚ್ಛತೆಗೆ ಒತ್ತು ನೀಡಬೇಕು. ನಿರ್ಲಕ್ಷಿಸಿದರೆ ಅನೇಕ ರೀತಿಯ ಸಮಸ್ಯೆಗಳಿಗೆ ಆಸ್ಪದ ಮಾಡಿಕೊಟ್ಟಂತಾಗುತ್ತದೆ ಎಂದರು.

ಸರ್ಕಾರಿ ನರ್ಸಿಂಗ್ ಕಾಲೇಜಿನ ಉಪನ್ಯಾಸಕಿ ಕಮಲ ಮಾತನಾಡಿ, ಮಾಸಿಕ ಋತುಸ್ರಾವದ ಸಮಸ್ಯೆ ಹಾಗೂ ಅದರ ಸುತ್ತಲಿನ ಬಾಧ್ಯತೆಗಳ ಬಗ್ಗೆ ವೈಯಕ್ತಿಕವಾಗಿ ಮಕ್ಕಳಿಗೆ ಅರಿವು ಮೂಡಿಸಬೇಕು. ಗಂಡು ಮಕ್ಕಳ ಮೇಲೂ ನಡೆಯುತ್ತಿರುವ ವಿವಿಧ ರೀತಿಯ ಲೈಂಗಿಕ ಶೋಷಣೆ ಬಗ್ಗೆಯೂ ಜಾಗೃತಗೊಳಿಸಬೇಕು ಎಂದರು. ಕಾರ್ಯಕ್ರಮದಲ್ಲಿ ಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯ ನವೀನ್, ಶಿಕ್ಷಕ ಮಾದೇಶ್, ವಿ–ಕೇರ್ ಸಂಸ್ಥೆಯ ಸಿಬ್ಬಂದಿ ಸಿಂಚನ ಮತ್ತಿತರರು ಉಪಸ್ಥಿತರಿದ್ದರು.

ಇಂದು, ನಾಳೆ ಮೈಸೂರಲ್ಲಿ ರಾಷ್ಟ್ರೀಯ ವಿಚಾರಗೋಷ್ಠಿ


ಮೈಸೂರು: ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜನ್ಮ ವಾರ್ಷಿಕೋತ್ಸವದ ನೆನಪಿನಾರ್ಥ ಮತ್ತು ಜನ ಜಾತಿಯ ಗೌರವ ದಿನದ ಸ್ಮರಣಾರ್ಥ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನವು 'ಬುಡಕಟ್ಟು ಭಾಷೆ, ಸಂಸ್ಕೃತಿ ಮತ್ತು ಶಿಕ್ಷಣ' ಶೀರ್ಷಿಕೆಯಡಿ 2 ದಿನಗಳ ರಾಷ್ಟ್ರೀಯ ವಿಚಾರ ಗೋಷ್ಠಿಯನ್ನು ನ.18, 19ರಂದು ಏರ್ಪಡಿಸಿದ್ದು, ನ.18ರಂದು ಬೆಳಗ್ಗೆ 10:30ಕ್ಕೆ ಸಂಸ್ಥೆಯ ಪ್ರಿವ್ಯೂ ಥಿಯೇಟರಿನಲ್ಲಿ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ವಿಚಾರ ಗೋಷ್ಠಿಯನ್ನು ಪ್ರೊ.ರಾಜೇಶ್ ಸಚ್‌ದೇವ ಉದ್ಘಾಟಿಸಲಿದ್ದು, ಪ್ರೊ.ಶೈಲೇಂದ್ರ ಮೋಹನ್ ಸಮಾರಂಭದ ಅಧ್ಯಕ್ಷತೆ ವಹಿಸುವರು.

ಗ್ರಾಪಂ, ಸರ್ಕಾರಿ ಕಚೇರಿಗಳಲ್ಲಿ ನಮ್ಮ ಶೌಚಾಲಯ–ನಮ್ಮ ಗೌರವ ಅಭಿಯಾನ

ಮೈಸೂರು,ನ.17(ಎಸ್‌ಪಿಎನ್)–ವಿಶ್ವ ಶೌಚಾಲಯ ದಿನಾಚರಣೆ ಅಂಗವಾಗಿ ರಾಜ್ಯದ ಪ್ರತಿಯೊಂದು ಗ್ರಾಪಂ ಮತ್ತು ಸರ್ಕಾರಿ ಕಚೇರಿಗಳಲ್ಲಿ ನ.19ರಿಂದ ಡಿ.10ವರೆಗೆ 'ನಮ್ಮ ಶೌಚಾಲಯ–ನಮ್ಮ ಗೌರವ' ಎಂಬ ವಿಶೇಷ ಅಭಿಯಾನವನ್ನು ಪ್ರಥಮ ಆದ್ಯತೆ ಮೇರೆಗೆ ಹಮ್ಮಿಕೊಳ್ಳುವಂತೆ ಗ್ರಾಮೀಣ ಕುಡಿಯುವ ನೀರು ನೈರ್ಮಲ್ಯ ಇಲಾಖೆ ರಾಜ್ಯದ ಎಲ್ಲಾ ಜಿಪಂ ಸಿಇಓಗಳಿಗೆ ಸೂಚನೆ ನೀಡಿದೆ.

ಗ್ರಾಮೀಣ ಸಮುದಾಯದಲ್ಲಿ ಸುರಕ್ಷಿತ ನೈರ್ಮಲ್ಯ, ಶುಚಿತ್ವ ಕುರಿತು ಜಾಗೃತಿ ಮೂಡಿಸಿ ಶೌಚಾಲಯಗಳನ್ನು ಬಳಕೆಗೆ ಪ್ರೇರೇಪಿಸಬೇಕು. ಇದಕ್ಕಾಗಿ ನ.19ರಿಂದ ಡಿ.10ರವರೆಗೆ ದೇಶಾದ್ಯಂತ ವಿಶ್ವ ಶೌಚಾಲಯ ದಿನವನ್ನಾಗಿ ಆಚರಿಸಲಾಗುತ್ತಿದ್ದು, ಈ ದಿನಾಚರಣೆ ಬಯಲು ಶೌಚ ಮುಕ್ತ ಗ್ರಾಮ ಎಂಬ ಸ್ಥಾನಮಾನ ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಈ ನಿಟ್ಟಿನಲ್ಲಿ ವಿಶ್ವ ಶೌಚಾಲಯ ಮತ್ತು ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಪ್ರಯುಕ್ತ 'ಅಂದದ ಶೌಚಾಲಯ–ಆನಂದದ ಜೀವನ' ಎಂಬ ಘೋಷ ವಾಕ್ಯದೊಂದಿಗೆ ವಿಶಿಷ್ಟ ರೀತಿಯ ಅಭಿಯಾನ ರೂಪಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೆಜ್ ಸೂಚಿಸಿದ್ದಾರೆ.



ಸರ್ಕಾರಿ ಶಾಲೆ, ಅಂಗನವಾಡಿ ಶೌಚಾಲಯಗಳು ಹಾಗೂ ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಶೌಚಾಲಯಗಳ ದುರಸ್ತಿ, ಗೋಡೆ ಬರಹ, ಸ್ವಚ್ಛತೆ ಇತರೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಗಳ ಅನುದಾನವನ್ನು ವಿನಿಯೋಗಿಸಬೇಕು. ಗ್ರಾಮ ಪಂಚಾಯ್ತಿ ಹಂತದಲ್ಲಿ ಸ್ವಚ್ಛ, ಸುಂದರ ವೈಯಕ್ತಿಕ ಗೃಹ ಶೌಚಾಲಯ(ಉತ್ತಮ ಶೌಚಾಲಯ) ಸ್ಪರ್ಧೆಯನ್ನು ಆಯೋಜಿಸುವುದು. ಅದೇ ರೀತಿ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಸಮುದಾಯ ಶೌಚಾಲಯ ಸ್ಪರ್ಧೆಗಳನ್ನು ಆಯೋಜಿಸುವುದು ತದನಂತರ ಜಿಲ್ಲೆ ಮತ್ತು ತಾಲೂಕು ಹಂತದಲ್ಲಿ ವಿಜೇತರಿಗೆ ಪುರಸ್ಕಾರಗಳನ್ನು ನೀಡಿ ಗೌರವಿಸಬೇಕು.

> " ಸಮುದಾಯ ಶೌಚಾಲಯಗಳ ದುರಸ್ತಿ ಮತ್ತು ಗ್ರಾಪಂಗಳಲ್ಲಿ ನ.19ರಿಂದ ಡಿ.10ರವರೆಗೆ ಆಯೋಜಿಸುವ ವಿವಿಧ ಕಾರ್ಯಕ್ರಮಗಳಿಗೆ 15ನೇ ಹಣಕಾಸಿನ ಅನುದಾನ ವಿನಿಯೋಗಿಸಬೇಕು. ಅದರಂತೆ ಗ್ರಾಮೀಣ ಭಾಗದ ಸರ್ಕಾರಿ ಶಾಲೆ, ಅಂಗನವಾಡಿ ಹಾಗೂ ಸಮುದಾಯ ಆರೋಗ್ಯ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಶೌಚಾಲಯಗಳ ದುರಸ್ತಿ, ಗೋಡೆ ಬರಹ, ಸ್ವಚ್ಛತೆ ಇತರೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖೆಗಳ ಅನುದಾನವನ್ನು ವಿನಿಯೋಗಿಸಬೇಕು.
>
> **– ಅಂಜುಮ್ ಪರ್ವೆಜ್, ಅಪರ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಈ ಆಂದೋಲನದಲ್ಲಿ ಸ್ಥಳೀಯ ಪ್ರಭಾವಿಗಳು, ಸ್ವಚ್ಛತಾ ರಾಯಭಾರಿಗಳನ್ನು ಗುರುತಿಸಬೇಕು. ಜಿಲ್ಲೆಗಳಲ್ಲಿರುವ ಕೈಗಾರಿಕೆಗಳು, ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಇತರೆ ಸಾಂಸ್ಥಿಕ ಸಂಸ್ಥೆಗಳನ್ನು ಗುರುತಿಸಿ ಈ ಅಭಿಯಾನದ ಭಾಗವಾಗಿರುವ ಫಲಾನುಭವಿಗಳಿಗೆ ಸೂಕ್ತ ಗೌರವ, ಶೌಚಾಲಯ ಸೌಂದರ್ಯೀಕರಣ ಪುರಸ್ಕಾರ ನೀಡುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ನಿರುಪಯುಕ್ತ ಸಮುದಾಯ ಶೌಚಾಲಯಗಳನ್ನು ಗುರುತಿಸಿ ಅವುಗಳನ್ನು ಪುನರ್ ಬಳಕೆಗೆ ನವೀಕರಿಸಬೇಕು.

ನೈರ್ಮಲ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸ್ವಚ್ಛತಾ ಕಾರ್ಮಿಕರು, ಸ್ವಚ್ಛತಾಗಾರರನ್ನು ಗುರುತಿಸಿ, ಅವರಿಗೆ ಸೂಕ್ತ ಗೌರವ ಮತ್ತು ವಿವಿಧ ಯೋಜನೆಗಳಡಿ ದೊರೆಯುವ ಸೌಲಭ್ಯಗಳನ್ನು ಒದಗಿಸಲು ನೋಂದಾಯಿಸಬೇಕು. ಬಯಲು ಬಹಿರ್ದೆಸೆ ಮುಕ್ತ ಸುಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಗಣನೀಯ ಕೊಡುಗೆ ನೀಡಿದವರನ್ನು ಗುರುತಿಸಿ, ತಾಲೂಕು ಮತ್ತು ಗ್ರಾಪಂ ಹಂತದಲ್ಲಿ ಗೌರವಿಸಬೇಕು ಎಂದು ಸೂಚಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

71ನೇ ಸಹಕಾರ ಸಪ್ತಾಹ



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಆವರಣದಲ್ಲಿ 71ನೇ ಸಹಕಾರ ಸಪ್ತಾಹ ಆಚರಿಸಲಾಯಿತು. ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಉಪಾಧ್ಯಕ್ಷರಾದ ಎಂ.ಎನ್.ಸೌಮ್ಯ, ಖಜಾಂಚಿ ಕೆ.ನಾಗರಾಜ, ನಿರ್ದೇಶಕ ಮಂಡಲಿ ಸದಸ್ಯರಾದ ಸಿ.ವಿ.ಪಾರ್ಥಸಾರಥಿ, ಹೆಚ್.ಎಸ್.ಪ್ರಶಾಂತ್ ತಾತಾಚಾರ್, ಎಂ.ಆರ್.ಬಾಲಕೃಷ್ಣ, ಹೆಚ್.ಪಿ.ಚೇತನ್, ಎನ್.ಫಣಿರಾಜ್, ವಿಕ್ರಂ ಅಯ್ಯಂಗಾರ್, ಪಿ.ಮಹಿಮ, ಎನ್.ನಾಗಶ್ರೀ, ಕೆ.ಎನ್.ಅರುಣ್, ಶಿವರುದ್ರಪ್ಪ, ರಾಜಮ್ಮ, ಶಾಶ್ವತಿ ನಾಯಕ, ಪ್ರಭಾರ ಕಾರ್ಯದರ್ಶಿ ಎನ್.ವೀಣಾ, ಸದಸ್ಯರು ಇದ್ದರು.

ಸಹಕಾರ ಕ್ಷೇತ್ರ ಸರ್ಕಾರದ ಹಸ್ತಕ್ಷೇಪವಿಲ್ಲದೇ ಸ್ವಾಯತ್ತವಾಗಿರಬೇಕು

ಶಾಸಕರೂ ಆದ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರ ಅಭಿಮತ

ಬಾಗಲಕೋಟೆ, ನ.17– ಸಹಕಾರ ಕ್ಷೇತ್ರ ಸ್ವಾಯತ್ತವಾಗಿರಬೇಕು. ಅದರಲ್ಲಿ ಸರ್ಕಾರದ ಹಸ್ತಕ್ಷೇಪ ಇರಬಾರದು ಎಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ಭಾನುವಾರ ಬಾಗಲಕೋಟೆಯಲ್ಲಿ ನಡೆದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಉದ್ಘಾಟನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬಸವಣ್ಣರ ಐಕ್ಯ ಸ್ಥಳವಾದ ಬಾಗಲಕೋಟೆಯಲ್ಲಿ ಸಹಕಾರ ಸಪ್ತಾಹ ಆಯೋಜನೆಗೊಂಡಿರುವುದಕ್ಕೆ ಸಂತಸ ವ್ಯಕ್ತಪಡಿಸಿ, ಸಹಕಾರ ಕ್ಷೇತ್ರಕ್ಕೆ ಸರ್ಕಾರ ಬೆಂಬಲ ನೀಡಿ ಸಹಕಾರ ಕ್ಷೇತ್ರವನ್ನು ಉಳಿಸಿ, ಬೆಳೆಸಲು ನೆರವಾಗುವಂತೆ ಮುಖ್ಯಮಂತ್ರಿಗಳು ಹಾಗೂ ಸಹಕಾರ ಸಚಿವರಲ್ಲಿ ಮನವಿ ಮಾಡಿದರು.

ನಮ್ಮ ರಾಜ್ಯದಲ್ಲಿ 8–5–1905ರಂದು ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಅವರು ಪ್ರಪ್ರಥಮ ಕೃಷಿ ಪತ್ತಿನ ಸಹಕಾರ ಸಂಘವನ್ನು ಪ್ರಾರಂಭ ಮಾಡಿದರು. ಮಹಾತ್ಮ ಗಾಂಧೀಜಿಯವರು ರಾಮರಾಜ್ಯವಾಗಬೇಕಾದರೆ ಹಳ್ಳಿಯಲ್ಲಿ ಒಂದು ಸಹಕಾರ ಸಂಘ ತೆರೆದು ರೈತರ ಕಲ್ಯಾಣ ಕಾರ್ಯಕ್ರಮಗಳು, ರೈತರಿಗೆ ಕೃಷಿ ಉಪಕರಣ, ಗೊಬ್ಬರ, ಕೀಟನಾಶಕ ಇವೆಲ್ಲವನ್ನೂ ಸಹಕಾರ ಸಂಘಗಳ ಮೂಲಕ ವಿತರಿಸುವುದರಿಂದ ಕೃಷಿಗೆ ಒತ್ತು ನೀಡಲು ಸಹಕಾರಿಯಾಗುತ್ತದೆ ಎಂದು ಪರಿಕಲ್ಪನೆ ಕಂಡಿದ್ದರು ಎಂದರು.



ಬಾಗಲಕೋಟೆಯಲ್ಲಿ ನಡೆದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ.ದೇವೇಗೌಡರು ಹಿರಿಯ ಸಹಕಾರಿ ಧುರೀಣರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

ಪ್ರಪ್ರಥಮ ಪ್ರಧಾನಿ ಜವಾಹರ್‌ಲಾಲ್ ನೆಹರು ಅವರು ಪಂಚವಾರ್ಷಿಕ ಯೋಜನೆಯ ಮೂಲಕ ಸಹಕಾರ ಕ್ಷೇತ್ರಕ್ಕೆ ಹಲವಾರು ಯೋಜನೆಗಳನ್ನು ಜಾರಿ ಮಾಡಿದ್ದರು. ಆಹಾರ ಉತ್ಪಾದನೆಗೆ, ಗೊಬ್ಬರ ಉತ್ಪಾದನೆಗೆ, ವ್ಯಾಪಾರ ವಹಿವಾಟಿಗೆ ನೀಡಿದ ಕೊಡುಗೆಗಳು ಹಾಗೂ ದೇಶದಲ್ಲಿ ಕ್ಷೀರ ಕ್ರಾಂತಿ ಮಾಡಿದ ಡಾ.ವರ್ಗಿಸ್ ಕುರಿಯನ್ ಇವರುಗಳು ಸಹಕಾರ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸುವ ಸಲುವಾಗಿ ಪ್ರತಿ ಸಹಕಾರ ಸಂಘ ಸಂಸ್ಥೆಗಳಲ್ಲಿ ಇವರುಗಳ ಭಾವಚಿತ್ರವನ್ನು ಇಟ್ಟು ಪೂಜೆ ಮಾಡುತ್ತಿರುವುದಾಗಿ ಹಾಗೂ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಮಾಡುವ ಮೂಲಕ ಅವರನ್ನು ಸ್ಮರಿಸಿಕೊಳ್ಳುತ್ತೇವೆ ಎಂದು ಹೇಳಿದರು.

ನಬಾರ್ಡ್ 2023–24ನೇ ಸಾಲಿನಲ್ಲಿ ರಿಯಾಯಿತಿ ಬಡ್ಡಿ ದರದಲ್ಲಿ ರೂ 5,560 ಕೋಟಿ ಸಾಲ ನೀಡಿತ್ತು. ಆದರೆ 2024–25ನೇ ಸಾಲಿನಲ್ಲಿ ರೂ 3,320 ಕೋಟಿ ಕಡಿತ ಮಾಡಿ, ಕೇವಲ ರೂ 2,240 ಕೋಟಿ ಮಾತ್ರ ನೀಡಿದ್ದು, ಇದರಿಂದ ಕೃಷಿ ಸಾಲ ವಿತರಣೆಗೆ ಹಣದ ಕೊರತೆ ಉಂಟಾಗಿ, ಕೃಷಿ ಪತ್ತಿನ ಸಹಕಾರ ಸಂಘಗಳು, ಡಿಸಿಸಿ ಬ್ಯಾಂಕ್‌ಗಳು ಹಾಗೂ ರೈತರ ಮೇಲೆ ನೇರ ಪರಿಣಾಮ ಬೀರುವುದರಿಂದ ಸಾಲದ ಮೊತ್ತವನ್ನು ಕಡಿಮೆ ಮಾಡದಂತೆ ಮನವಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರವು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರನ್ನಾಗಿ ಘೋಷಣೆ ಮಾಡಿರುವುದಕ್ಕೆ ಬಸವಣ್ಣನವರ ಐಕ್ಯ ಸ್ಥಳ ಬಾಗಲಕೋಟೆಯ ಈ ಪುಣ್ಯಸ್ಥಳದಲ್ಲಿ ರಾಜ್ಯದ ಎಲ್ಲಾ ಸಹಕಾರಿಗಳು ಹಾಗೂ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು.

ಇದೇ ಸಂದರ್ಭದಲ್ಲಿ ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ 65 ಹಿರಿಯ ಸಹಕಾರಿಗಳಿಗೆ 'ಸಹಕಾರ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಹಕಾರ ಸಚಿವ ಕೆ.ಎನ್.ರಾಜಣ್ಣ, ಸಚಿವರಾದ ಶಿವಾನಂದ ಪಾಟೀಲ್, ಆರ್.ಬಿ.ತಿಮ್ಮಾಪುರ್, ಮಾಜಿ ಸಚಿವರಾದ ಎಸ್.ಆರ್.ಪಾಟೀಲ್, ಪ್ರಕಾಶ್ ಹುಕ್ಕೇರಿ, ಶಾಸಕರುಗಳಾದ ಹೆಚ್.ವೈ.ಮೇಟಿ, ಜೆ.ಟಿ.ಪಾಟೀಲ್, ವಿಜಯಾನಂದ ಕಾಶಪ್ಪನವರ, ನರೇಂದ್ರಸ್ವಾಮಿ, ಕೊತ್ತೂರ್ ಮಂಜುನಾಥ್, ಭೀಮಸೇನ ಚಿಮ್ಮನಕಟ್ಟಿ ಬಾಗಲಕೋಟೆ ಡಿಸಿಸಿ ಬ್ಯಾಂಕ್ ಅಧ್ಯಕ್ಷ ಅಜಯ್‌ಕುಮಾರ್ ಸರನಾಯಕ್, ಮಹಾಮಂಡಳದ ನಿರ್ದೇಶಕರಾದ ಜಿ.ಪಿ.ಪಾಟೀಲ್, ಶೇಖರಗೌಡ ಮಾಲಿಪಾಟೀಲ್, ಬಾಪೂಗೌಡ ಪಾಟೀಲ್, ಬಸವರಾಜ ಅರಬಗೊಂಡ, ಈರಣ್ಣ ಪಟ್ಟಣ ಶೆಟ್ಟಿ, ಸಹಕಾರ ಇಲಾಖೆಯ ಅಧಿಕಾರಿಗಳು, ವಿವಿಧ ಬ್ಯಾಂಕ್‌ಗಳ ನಿರ್ದೇಶಕರು, ಸ್ಥಳೀಯ ಸಹಕಾರಿ ಮುಖಂಡರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಷಣ ಮಾಡುವ ಸಮಯದಲ್ಲಿ ಜಿ.ಟಿ.ದೇವೇಗೌಡರು ಸಹಕಾರ ವಿಷಯದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಸಹಕಾರ ಸಂಘ ಸಂಸ್ಥೆಗಳಲ್ಲಿ ಉದ್ಯೋಗ ದೊರಕಲು ಮೀಸಲಾತಿ ಜಾರಿಗೆ ತರುವಂತೆ ಕೇಳಿದ್ದು, ಇದರ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಸಕಾರಾತ್ಮಕವಾಗಿ ಸ್ಪಂದಿಸಿದರು.

ಸಮರ್ಥನಂ ಬುದ್ಧಿ ವಿಕಲಚೇತನ ಶಾಲೆಯಲ್ಲಿ ಮಕ್ಕಳ ದಿನಾಚರಣೆ



ಮೈಸೂರು, ನ. 17– ಸುರಕ್ಷಿತ ಮತ್ತು ಆರೋಗ್ಯಕರ ಬಾಲ್ಯವನ್ನು ಉತ್ತೇಜಿಸುವುದು, ಮಕ್ಕಳ ಹಕ್ಕುಗಳನ್ನು ಗುರುತಿಸಿ ಅದನ್ನು ಎತ್ತಿಹಿಡಿಯುವ ಜವಾಬ್ದಾರಿ ನಮ್ಮದಾಗಿದೆ ಎಂದು ಸಮರ್ಥನಂ ಸಂಸ್ಥೆಯ ಡಾ.ಕೆ.ರಂಗರಾಜು (ಮುರಳಿ) ತಿಳಿಸಿದರು.

ಮೈಸೂರು ನಗರದ ವಿಜಯನಗರ ಎರಡನೇ ಹಂತದಲ್ಲಿರುವ ಸಮರ್ಥನಂ ಅಂಗವಿಕಲರ ಸಂಸ್ಥೆಯ ಆವರಣದಲ್ಲಿ ನಡೆದ ಮಕ್ಕಳ ದಿನಾಚರಣೆಯ ಉದ್ದೇಶಿಸಿ ಮಾತನಾಡಿದ ಅವರು, ಶಿಕ್ಷಣ, ಪೋಷಣೆ ಮತ್ತು ಸುರಕ್ಷಿತ ಮನೆಯ ವಾತಾವರಣದಂತಹ ವಿಧಾನಗಳ ಮೂಲಕ ಮಕ್ಕಳ ಒಟ್ಟಾರೆ ಯೋಗಕ್ಷೇಮವನ್ನು ಖಚಿತಪಡಿಸಿ, ವಿಶ್ವದ ಭವಿಷ್ಯದ ನಾಯಕರನ್ನು ರಕ್ಷಿಸುವ ಮತ್ತು ಪೋಷಿಸುವ ಜವಾಬ್ದಾರಿಯನ್ನು ಸಮಾಜ ತೆಗೆದುಕೊಳ್ಳುವಂತೆ ಮಾಡುವುದೇ ಮಕ್ಕಳ ದಿನಾಚರಣೆ ಆಶಯವಾಗಿದೆ ಎಂದು ತಿಳಿಸಿದರು.

ಸಮರ್ಥನಂ ಸಂಸ್ಥೆಯ ಮೈಸೂರು ವಿಭಾಗೀಯ ಸಂಯೋಜಕ ಶಿವರಾಜು ಮಾತನಾಡಿದರು. ಕಾರ್ಯಕ್ರಮದಲ್ಲಿ ಬುದ್ಧಿ ವಿಕಲಚೇತನ ಶಾಲೆಯ ಮುಖ್ಯೋಪಾಧ್ಯಾಯಿನಿ ಬ್ರಮಾರಂಭ, ಮಂತೇಶ್, ಚೈತ್ರಕುಮಾರಿ ವಿಶೇಷ ಶಿಕ್ಷಕರಾದ ಪಿ.ಪದ್ಮ, ಬೃಂದಾ ಬಾಯಿ, ವಿದ್ಯಾವತಿ, ಸಿಬ್ಬಂದಿಗಳಾದ ಮಹದೇವು, ಮಂಜುಳಾ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ರಾಜ್ಯ ಮಟ್ಟದ ಕ್ರೀಡೆಯಲ್ಲಿ ಪ್ರಥಮ ಸ್ಥಾನ



ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆಯ ವಿದ್ಯಾರ್ಥಿ ಎಂ.ಎಲ್. ಅಜಯ್ ಪೃಥ್ವಿರಾಜ್ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾನೆ.

ಮೈಸೂರು: ಓಟದ ಸ್ಪರ್ಧೆ ಹಾಗೂ ಇನ್ನಿತರೆ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಂಡು ಪ್ರಥಮ ಸ್ಥಾನ ಪಡೆದಿರುವ ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆಯಲ್ಲಿ 8ನೇ ತರಗತಿ ವ್ಯಾಸಂಗ ಮಾಡುತ್ತಿರುವ ಎಂ.ಎಲ್. ಅಜಯ್ ಪೃಥ್ವಿರಾಜ್ ರಾಜ್ಯಮಟ್ಟದ ಸ್ಪರ್ಧೆಯಲ್ಲೂ ಸ್ಪರ್ಧಿಸಿ, ಎರಡು ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾನೆ.

ಶಿವಮೊಗ್ಗದ ನೆಹರೂ ಕ್ರೀಡಾಂಗಣದಲ್ಲಿ ನಡೆದ ರಾಜ್ಯಮಟ್ಟದ ಶಾಲಾ ಮಕ್ಕಳ ಆಟೋಟಗಳ ಸ್ಪರ್ಧೆ–2024ರಲ್ಲಿ ಭಾಗವಹಿಸಿದ್ದ ಅಜಯ್ ಪೃಥ್ವಿರಾಜ್ 400 ಮೀಟರ್ ಹಾಗೂ 600 ಮೀಟರ್‌ನ ಎರಡೂ ವಿಭಾಗದ ಓಟದ ಸ್ಪರ್ಧೆಯಲ್ಲಿ ಸ್ಪರ್ಧಿಸಿ, ಪ್ರಥಮ ಸ್ಥಾನ ಪಡೆದಿದ್ದಾನೆ. ಗಾಯತ್ರಿಪುರಂ ನಿವಾಸಿ ಎಂ.ಲಿಂಗರಾಜು ಮತ್ತು ಸಂಗೀತಾ ದಂಪತಿ ಪುತ್ರನಾದ ಅಜಯ್ ಪೃಥ್ವಿರಾಜ್, ಇತ್ತೀಚೆಗೆ ಮೈಸೂರಿನಲ್ಲಿ ನಡೆದಿದ್ದ 15 ವರ್ಷದೊಳಗಿನವರ 200 ಮೀಟರ್ ಮತ್ತು 400 ಮೀಟರ್ ಓಟದ ಹಲವು ಸ್ಪರ್ಧೆಗಳಲ್ಲಿ ಭಾಗವಹಿಸಿ, ಎರಡೂ ವಿಭಾಗದಲ್ಲೂ ಪ್ರಥಮ ಸ್ಥಾನ ಪಡೆದಿದ್ದ. ರಾಷ್ಟ್ರೀಯ ಅಥ್ಲೀಟ್ ರೀನಾ ಜಾರ್ಜ್ ಈತನ ತರಬೇತುದಾರರಾಗಿದ್ದು, ಅಜಯ್ ಸಾಧನೆಗೆ ಶಾಲಾ ಆಡಳಿತ ಮಂಡಳಿ, ಪೋಷಕರು ಅಭಿನಂದಿಸಿದ್ದಾರೆ.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದ ಕುಡಿಯುವ ನೀರಿನ ಟ್ಯಾಂಕ್‌ನಲ್ಲಿ ಹುಳು

ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಭೇಟಿ ವೇಳೆ ಪತ್ತೆ



ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಭಾನುವಾರ ದಿಢೀರ್ ಭೇಟಿ ನೀಡಿ, ಸಾರ್ವಜನಿಕರ ಕುಂದುಕೊರತೆ ಆಲಿಸಿದರು.



ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ನೀರಿನ ಟ್ಯಾಂಕ್‌ನ ದುಸ್ಥಿತಿ.

ಮೈಸೂರು, ನ.17(ಜಿಎಲ್‌ಯು)– ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರು ಸರಬರಾಜು ಮಾಡುವ ನೀರಿನ ಟ್ಯಾಂಕ್ ಸ್ವಚ್ಛಗೊಳಿಸದೆ ಹುಳುಗಳಿರುವ ಆಘಾತಕಾರಿ ವಿಚಾರ ಬಯಲಾಗಿದೆ. ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌದರಿ ಭಾನುವಾರ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿದಾಗ ಅಧಿಕಾರಿಗಳ ಇಂತಹ ಹಲವು ಲೋಪಗಳು ಕಂಡುಬಂದಿತು.

ಡಾ.ನಾಗಲಕ್ಷ್ಮಿ ಚೌದರಿ ಬಸ್ ನಿಲ್ದಾಣದ ಟ್ಯಾಂಕ್ ಸೇರಿದಂತೆ ಇತರೆ ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಸಮಸ್ಯೆಗಳ ಸರಮಾಲೆಯೇ ಅಲ್ಲಿತ್ತು. ತಾಯಿ ಪಾಲನಾ ಕೇಂದ್ರದಲ್ಲಿ ಬಾಗಿಲು, ಹಾಸಿಗೆ, ಆಸನಗಳ ಕೊರತೆ ಕಾರಣ ತಾಯಂದಿರು ಮತ್ತು ಮಕ್ಕಳು ಅಲ್ಲಿ ಸುರಕ್ಷಿತವಾಗಿ ಇರಲು ಸಾಧ್ಯವಿಲ್ಲ ಎಂಬುದು ಕಂಡು ಬಂದಿತು.

ವಿಶೇಷಚೇತನರ ಶೌಚಾಲಯ ಬಳಕೆಗೆ ಯೋಗ್ಯವಾಗಿರಲಿಲ್ಲ, ಹಣ ಪಾವತಿ ಮಾಡಿ ಶೌಚಾಲಯ ಬಳಸುವ ಸ್ಥಳದಲ್ಲಿ ಕೂಡ ಬಹಳಷ್ಟು ಅವಾಂತರಗಳಿರುವುದು ದೃಢಪಟ್ಟಿತು. ಮಹಿಳೆಯರು ಮಾಸಿಕ ಸ್ರಾವದ ಸಂದರ್ಭದಲ್ಲಿ ಪ್ಯಾಡ್ ಬದಲಿಸಲು ಅವಕಾಶ ಇಲ್ಲದಿರುವುದನ್ನು ಡಾ. ನಾಗಲಕ್ಷ್ಮಿ ಚೌದರಿ ಅವರ ಅರಿವಿಗೆ ಬಂತು. ಬಸ್ ನಿಲ್ದಾಣದಲ್ಲಿ ಮತ್ತಷ್ಟು ಸಿಸಿ ಕ್ಯಾಮರಾ ಅಳವಡಿಕೆ ಅಗತ್ಯತೆ ಕೂಡ ಕಂಡು ಬಂದಿತು.

ಚಾಮರಾಜನಗರಕ್ಕೆ ಮತ್ತಷ್ಟು ಬಸ್‌ಗಳ ಅವಶ್ಯವಿದೆ ಎಂದು ಪ್ರಯಾಣಿಕರು ಈ ಸಂದರ್ಭದಲ್ಲಿ ತಿಳಿಸಿದರು. ಈ ಮೂಲಕ ಬಸ್ ನಿಲ್ದಾಣಕ್ಕೆ ಮೂಲಸೌಕರ್ಯದ ಅಗತ್ಯತೆ ತಿಳಿದು ಬಂದಿತು.



ಕಥಾ ಸ್ಪರ್ಧೆಯಲ್ಲಿ ಬಹುಮಾನ

ಅಮೇರಿಕದ ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟ ಏರ್ಪಡಿಸಿದ್ದ 'ಬೃಂದಾವನ ವಿಂಶತಿ ವೈಭವ–2024' ಕಥಾಸ್ಪರ್ಧೆಯಲ್ಲಿ ಮೈಸೂರಿನ ಲೇಖಕಿ ಸುಚಿತ್ರಾ ಹೆಗಡೆ ಪ್ರಥಮ ಬಹುಮಾನ ಪಡೆದಿದ್ದಾರೆ. ಅವರ ವಿಜೇತ ಕಥೆ 'ವ್ಯಾಪಾರ' ಐದು ಸಾವಿರ ರೂ. ಗಳ ನಗದು ಪುರಸ್ಕಾರಕ್ಕೆ ಭಾಜನವಾಗಿದೆ. ಗೀತಾ ಕುಂದಾಪುರ ಮತ್ತು ಕಲ್ಪನಾ ಕ್ರಮವಾಗಿ ದ್ವಿತೀಯ, ತೃತೀಯ ಬಹುಮಾನ ಪಡೆದಿದ್ದಾರೆ.

ಪದವಿ ಪ್ರದಾನ ಸಮಾರಂಭ...



ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಮುಕ್ತ ವಿವಿ ಕುಲಸಚಿವ ಪ್ರೊ.ಕೆ.ಬಿ. ಪ್ರವೀಣ ಕಾರ್ಯಕ್ರಮವನ್ನು ಉದ್ಘಾಟಿಸಿ, ಪದವಿ ಪ್ರದಾನ ಮಾಡಿದರು. ಕಾಲೇಜಿನ ಪ್ರಾಂಶುಪಾಲ ಡಾ. ಅಂಥೋನಿ ಪೌಲ್‌ರಾಜ್ ಸಿ., ಅಂತಿಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಬೀಳ್ಕೊಡುಗೆ ನೀಡಿದರು. ಕಾರ್ಯಕ್ರಮದ ಸಂಯೋಜಕಿ ಶ್ರೀಮತಿ ಪಲ್ಲವಿ, ಅಧ್ಯಾಪಕರು, ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಸೈನಿಕ ಅಕಾಡೆಮಿಯಲ್ಲಿ ಮಕ್ಕಳ ದಿನಾಚರಣೆ



ಮೈಸೂರು ಬೆಳವಾಡಿ ಸಿಲಿಕಾನ್ ವ್ಯಾಲಿ ಬಡಾವಣೆಯ ಸೈನಿಕ ಅಕಾಡೆಮಿ ಸಂಸ್ಥೆಯಲ್ಲಿ ಮಕ್ಕಳ ದಿನ ಆಚರಿಸಲಾಯಿತು. ಜನಪರ ವೈದ್ಯ ಡಾ.ದಿನೇಶ್‌ರನ್ನು ಅಭಿನಂದಿಸಲಾಯಿತು. ಅಕಾಡೆಮಿ ಸಂಸ್ಥಾಪಕ ಸಿ.ಎಂ.ಶ್ರೀಧರ್, ಅನಿತಾ ಶ್ರೀಧರ್ ಇತರರು ಉಪಸ್ಥಿತರಿದ್ದರು.

ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ದಿನಾಚರಣೆ



ಮೈಸೂರಿನ ನಿಂಗಯ್ಯನ ಕೆರೆ ಹೆಬ್ಬಾಳಿನ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳ ದಿನ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮಮತಾ ಶ್ರೀಧರ್ ಸಾಹಿತಿ, ಕಾಂಗ್ರೆಸ್ ಮುಖಂಡ ಕೇಬಲ್ ಮಹೇಶ್, ಹಿರಿಯ ನಾಗರಿಕರು ಪುಟ್ಟಮಾದಯ್ಯ, ಅಂಗನವಾಡಿ ಕಾರ್ಯಕರ್ತೆ ಮಂಗಳ ಹಾಗೂ ಹೆಬ್ಬಾಳ ಕಾಲೋನಿ ಅಂಗನವಾಡಿ ಕಾರ್ಯಕರ್ತೆ ಗೀತಾ ಮತ್ತು ಅಂಗನವಾಡಿಯ ಮಕ್ಕಳು ಭಾಗವಹಿಸಿದ್ದರು.

ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಬೆಂಗಳೂರು ವತಿಯಿಂದ 2023–24ನೇ ಸಾಲಿನ ಪುಸ್ತಕ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಶಸ್ತಿಗೆ ಬಂಜಾರ ಸಮುದಾಯದ ಲೇಖಕರು ಸ್ವತಃ ತಾವೇ ಬರೆದಿರುವ ಪ್ರಕಾರದಲ್ಲಿ ವರ್ಷದಲ್ಲಿ ಕನಿಷ್ಠ 03 ಶೀರ್ಷಿಕೆಗಳಾದರೂ ಪ್ರಕಟವಾಗಿದ್ದಲ್ಲಿ ಮಾತ್ರ ಬಹುಮಾನಕ್ಕೆ ಪರಿಗಣಿಸಲಾಗುವುದು. ಈ ಕೃತಿಗಳು 2022–23(ಪ್ರಸಕ್ತ ಸಾಲಿಗೆ ಮಾತ್ರ ಸೀಮಿತವಾಗಿ)ರ ಹಿಂದೆ ಮುದ್ರಣಗೊಂಡ ಕೃತಿಗಳು ಹಾಗೂ 2023–24ರ ಸಾಲಿನಲ್ಲಿ ಪ್ರಕಟವಾಗಿರಬೇಕು. ಆಸಕ್ತರು ತಾವು ಪ್ರಕಟಿಸಿದ ಕೃತಿಯ 3 ಪ್ರತಿಗಳೊಂದಿಗೆ ಸ್ವ ವಿವರಗಳನ್ನು ಒಳಗೊಂಡ ಅರ್ಜಿಯನ್ನು ನ.30ರೊಳಗಾಗಿ ಬೆಂಗಳೂರಿನ ಜೆ.ಸಿ ರಸ್ತೆಯಲ್ಲಿರುವ ಕನ್ನಡ ಭವನದ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ರಿಜಿಸ್ಟ್ರಾರ್‌ರ ಕಚೇರಿಗೆ ಖುದ್ದಾಗಿ ಅಥವಾ ಅಂಚೆ, ಕೊರಿಯರ್ ಮೂಲಕ ಕಳುಹಿಸಿಕೊಡಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ: 080–29917745 ಸಂಪರ್ಕಿಸಬಹುದು.

ಕಸಾಪ ಸಮ್ಮೇಳನ ಪ್ರಚಾರ ರಥಕ್ಕೆ ಕಿಕ್ಕೇರಿಯಲ್ಲಿ ಭವ್ಯ ಸ್ವಾಗತ



ಕಿಕ್ಕೇರಿ: ಜಿಲ್ಲೆಯಿಂದ ಆಗಮಿಸಿದ ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಜಾಗೃತಿ ಪ್ರಚಾರ ರಥವನ್ನು ಭಾನುವಾರ ಪುಷ್ಪಾರ್ಚನೆಗೈಯುವ ಮೂಲಕ ಸ್ವಾಗತಿಸಲಾಯಿತು.

ಪಿಡಿಒ ಚಲುವರಾಜು ಮಾತನಾಡಿ, ಇದೇ ಡಿ.20ರಿಂದ ಮೂರು ದಿನಗಳವರೆಗೆ ಸಮ್ಮೇಳನ ಮಂಡ್ಯದಲ್ಲಿ ನಡೆಯಲಿದೆ. ನಮ್ಮ ರಾಜ್ಯದಲ್ಲಿಯೇ ಅತೀ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆನಮ್ಮದಾಗಿದೆ ಇಡೀ ಹೋಬಳಿಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಸಮ್ಮೇಳನದಲ್ಲಿ ಭಾಗವಹಿಸಿ ಕನ್ನಡಿಗರ ಹೃದಯ ವೈಶಾಲ್ಯತೆ ಪ್ರದರ್ಶಿಸಬೇಕು ಎಂದು ಮನವಿ ಮಾಡಿದರು.

ಗ್ರಾಪಂ ಅಧಿಕಾರಿಗಳು, ಸದಸ್ಯರು, ಕರವೇ ಕಾರ್ಯಕರ್ತರು, ಸಾಹಿತ್ಯಾಭಿಮಾನಿಗಳು ತಾಯಿ ಭುವನೇಶ್ವರಿಗೆ ಜೈಕಾರ ಹಾಕಿದರು. ಭುವನೇಶ್ವರಿ ಮೂರ್ತಿಗೆ ಪುಷ್ಪಮಾಲೆ ಹಾಕಿ, ಪುಷ್ಪಾರ್ಚನೆ ಮಾಡಿದರು. ಪೂರ್ಣಕುಂಭದೊಂದಿಗೆ ದೀಪದ ಆರತಿ ಬೆಳಗಿದರು.

ಹಲವೆಡೆ ಸಿಹಿ ಹಂಚಿ ಸಂಭ್ರಮಿಸಿದರು. ಕನ್ನಡದ ಶಾಲು ಹಾಕಿಕೊಂಡು ಕನ್ನಡ ಬಾವುಟವನ್ನು ಹಾರಾಡಿಸುತ್ತ ಖುಷಿಪಟ್ಟರು. ಹೋಬಳಿಯ ಆನೆಗೊಳ, ಮಾದಾಪುರ, ದಬ್ಬೇಘಟ್ಟ, ಮಂದಗೆರೆ ಗ್ರಾಪಂ ವ್ಯಾಪ್ತಿಯ ವಿವಿಧೆಡೆ ರಥವನ್ನು ಭವ್ಯವಾಗಿ ಸ್ವಾಗತಿಸಿ ಭುವನೇಶ್ವರಿಗೆ ಪೂಜಿಸಿದರು. ಜಿಲ್ಲಾ ಬೀದಿ ನಾಟಕ ಒಕ್ಕೂಟದ ಕಲಾವಿದರು ಹಳದಿ, ಕೆಂಪು ಬಟ್ಟೆ ಧರಿಸಿ ಆಕರ್ಷಕ ನೃತ್ಯರೂಪಕದೊಂದಿಗೆ ರಂಜಿಸಿದರು.

ಕಿಕ್ಕೇರಿಯಲ್ಲಿ ಪಿಡಿಒ ಚಲುವರಾಜ್, ಕರವೇ ಜಿಲ್ಲಾ ಉಪಾಧ್ಯಕ್ಷ ಸಾಸಲು ಗುರುಮೂರ್ತಿ, ಗ್ರಾಪಂ ಉಪಾಧ್ಯಕ್ಷೆ ಜ್ಯೋತಿ, ಸದಸ್ಯರಾದ ತಾಯಮ್ಮ, ಸರಸ್ವತಿ, ರೇಣುಕಮ್ಮ, ಚಂದ್ರಶೇಖರ್, ಪುಟ್ಟೇಗೌಡ, ಕೃಷ್ಣ, ಕಾರ್ಯದರ್ಶಿ ಪಾಪೇಗೌಡ, ಲೆಕ್ಕ ಸಹಾಯಕ ವಾಸು, ಶ್ರೀಕಾಂತ್, ಜಿಲ್ಲಾ ಬೀದಿನಾಟಕ ಒಕ್ಕೂಟದ ವೈರಮುಡಿ, ಶೇಖರ್, ನಾಗರಾಜು, ಬಸವರಾಜು, ಉಮಾಪತಿ, ಚನ್ನಮ್ಮ, ಶ್ವೇತಾ, ಪೌರಕಾರ್ಮಿಕರು, ಆಶಾ ಕಾರ್ಯಕರ್ತೆ, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

ನಾಳೆ ಪರಿಶಿಷ್ಟರ ಸಮಸ್ಯೆ ಬಗೆಹರಿಸಲು ಪೂರ್ವಭಾವಿ ಸಭೆ

ಮಂಡ್ಯ: ಜಿಲ್ಲೆಯ ಪರಿಶಿಷ್ಟ ಜಾತಿ, ವರ್ಗದ ಜನರಿಗೆ ಇರುವ ಸಮಸ್ಯೆಗಳು ಮತ್ತು ಪರಿಹಾರಗಳ ಸಂಬಂಧ ಮೊದಲ ಜಿಲ್ಲಾ ಮಟ್ಟದ ಮೂಲ ಭಾರತೀಯರ ಪ್ರಥಮ ದುಂಡು ಮೇಜಿನ ಸಭೆಯ ಪೂರ್ವಭಾವಿ ಸಭೆಯನ್ನು ನ.19ರ ಬೆಳಗ್ಗೆ 11 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ಡಾ.ಬಿ.ಆರ್.ಅಂಬೇಡ್ಕರ್ ವಾರಿಯರ್ಸ್‌ನ ಅಧ್ಯಕ್ಷ ಗಂಗರಾಜ್ ಹನಕೆರೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ತಾಲೂಕಿನ ಹನಕೆರೆ ಗ್ರಾಮದಲ್ಲಿ ಕಾಲಭೈರೇಶ್ವರ ದೇವಸ್ಥಾನಕ್ಕೆ ಪರಿಶಿಷ್ಟರ ಪ್ರವೇಶ ಕಾರ್ಯಕ್ರಮದ ಸಂಬಂಧ ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ನೇತೃತ್ವದಲ್ಲಿ ಶಾಂತಿ ಸಭೆ ನಡೆಸಿ ಪರಿಸ್ಥಿತಿ ತಿಳಿಗೊಳಿಸಲಾಗಿದೆ ಎಂದರು.

ಕೆಲವು ಕಿಡಿಗೇಡಿಗಳ ಕುತ್ಸಿತದಿಂದ ಈ ಘಟನೆ ನಡೆದಿದ್ದು, ಸರ್ವಜನರೊಂದಿಗೆ ಯಾವುದೇ ಘರ್ಷಣೆ ನಡೆದಿಲ್ಲ. ಈ ನಿಟ್ಟಿನಲ್ಲಿ ಬುದ್ಧ ಸಂದೇಶ ಸಾರುವ ಹಿನ್ನೆಲೆ ಭಾರತೀಯರ ನಡೆ, ಬುದ್ಧನ ಕಡೆ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲು ಸದರಿ ಪೂರ್ವಭಾವಿ ಸಭೆಯಲ್ಲಿ ನಿರ್ಣಯ ಮಾಡಿ, ಮಂಡ್ಯ ನಗರ ಅಂಬೇಡ್ಕರ್ ಪುತ್ಥಳಿಯಿಂದ ಹನಕೆರೆವರೆಗೆ ಪಾದಯಾತ್ರೆ ನಡೆಸಲಾಗುವುದು ಎಂದು ಹೇಳಿದರು. ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿಯ ಉಪಾಧ್ಯಕ್ಷ ವೆಂಕಟಗಿರಿಯಯ್ಯ ಮಾತನಾಡಿ, ಹನಕೆರೆಯಲ್ಲಿ ನಡೆದ ಘಟನೆ ಬೆರಳೆಣಿಕೆಯಷ್ಟು ಮಂದಿ ಮಾಡಿದ ಕುಚೇಷ್ಟೆ ಇದಾಗಿದ್ದು, ಅನಾಗರಿಕತೆಯಿಂದ ಪ್ರಬುದ್ಧತೆಯೆಡೆಗೆ ನಡೆಯುವ ಹಿನ್ನೆಲೆ ಕಾಲು ನಡಿಗೆ ಜಾಥ ಹಮ್ಮಿಕೊಳ್ಳಲು ನಿರ್ಣಯಿಸಲು ಸಭೆ ಆಯೋಜಿಸಿದ್ದು, ಸದರಿ ಕಾರ್ಯಕ್ರಮಕ್ಕೆ ಜಿಲ್ಲೆಯ ಪ್ರಗತಿ ಪರ ಚಿಂತಕರು ಆಗಮಿಸುವಂತೆ ಮನವಿ ಮಾಡಿದರು.

ಹನಕೆರೆ ಗ್ರಾಮದ ಮುಖಂಡ ಅಭಿ ಹನಕೆರೆ ಮಾತನಾಡಿ, ಹನಕೆರೆ ಘಟನೆ ವಿಚಾರವಾಗಿ ಯಾರೂ ವಿಚಲಿತರಾಗಬೇಕಾದ ಅವಶ್ಯಕತೆಯಿಲ್ಲ, ಹನಕೆರೆಯಲ್ಲಿ ಎಲ್ಲ ಸಮುದಾಯ ಒಟ್ಟಾಗಿದ್ದು, ಹನಕೆರೆಯ ಮೂಲಕ ದೇಶಕ್ಕೆ ಏಕತೆಯ ಶಾಂತಿ ಸಂದೇಶ ರವಾನಿಸಲಿ. ಈ ಕಾರ್ಯಕ್ಕೆ ಕಾಲಭೈರವೇಶ್ವರ ದೇವಸ್ಥಾನ ಸಮಿತಿ ಪರವಾಗಿ ಬೆಂಬಲವಿದೆ, ಹನಕೆರೆ ಘಟನೆಯಿಂದ ನೋವಾಗಿದ್ದರೆ ಸಮಿತಿಯ ಪರವಾಗಿ ಕ್ಷಮೆಯಾಚನೆ ಮಾಡಿದರು.

ಗೋಷ್ಠಿಯಲ್ಲಿ ಸ್ವಾಭಿಮಾನಿ ಸಮಾಜದ ರಾಜ್ಯಾಧ್ಯಕ್ಷ ಹೆಚ್.ಎನ್.ನರಸಿಂಹ ಮೂರ್ತಿ, ಟಿಪ್ಪು ಚಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷ ಅಮ್ಜದ್ ಪಾಷ, ವಕೀಲ ಜೆ.ರಾಮಯ್ಯ, ಮೋಹನ್, ದೇವಯ್ಯ ಇತರರಿದ್ದರು.

ಹರಿರಾಯನಹಳ್ಳಿಯಲ್ಲಿ ಇ–ಸ್ವತ್ತು ಖಾತಾ ಅಭಿಯಾನ



ಕೆ.ಆರ್.ಪೇಟೆ ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರಿರಾಯನಹಳ್ಳಿ ಗ್ರಾಮದಲ್ಲಿ ಇ–ಸ್ವತ್ತು ಖಾತಾ ಆಂದೋಲನ ಕಾರ್ಯಕ್ರಮವು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎ.ಸಿ.ದಿವಿಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಿತು.

ಕೆ.ಆರ್.ಪೇಟೆ, ನ.17– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹರಿರಾಯನಹಳ್ಳಿಯಲ್ಲಿ ಇ–ಸ್ವತ್ತು ಖಾತಾ ಕಾರ್ಯಕ್ರಮವು ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಸಿ.ದಿವಿಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ದಿವಿಕುಮಾರ್, ಸರ್ಕಾರವು ಎಷ್ಟೇ ಜಾಗೃತಿ ಮೂಡಿಸಿದರೂ ರೈತರು ತಮ್ಮ ಮನೆಗೆ ಹಾಗೂ ಜಮೀನಿಗೆ ಅಗತ್ಯ ದಾಖಲೆಗಳನ್ನು ಮಾಡಿಕೊಳ್ಳದೇ ಇರುವುದು ಸರಿಯಲ್ಲ. ಭೂಮಿ ದಾಖಲೆ ಮಾಡಿಸಿಕೊಳ್ಳಲು ಪೌತಿ ಖಾತೆ ಆಂದೋಲನ ಪೋಡಿ ಆಂದೋಲನವನ್ನು ಮಾಡಲಾಗುತ್ತಿದೆ. ಅದೇ ರೀತಿ ಮನೆ ಮತ್ತು ನಿವೇಶನಗಳಿಗೆ ದಾಖಲೆ ಮಾಡಿಕೊಡಲು ಜನಸಾಮಾನ್ಯರ ಮನೆ ಬಳಿಗೆ ಹೋಗಿ ಇಸ್ವತ್ತು ಖಾತೆ ಮಾಡಿಕೊಡಲು ಗ್ರಾಮ ಪಂಚಾಯಿತಿಯ ಆಡಳಿತ ಮಂಡಳಿಯು ತೀರ್ಮಾನ ಮಾಡಿದೆ. ಅದರಂತೆ ಪ್ರಥಮವಾಗಿ ಹರಿರಾಯನಹಳ್ಳಿ ಗ್ರಾಮಕ್ಕೆ ಎರಡು ದಿನಗಳ ಕಾಲ ಇಡೀ ಗ್ರಾಮ ಪಂಚಾಯಿತಿ ಆಡಳಿತವೇ ಬಂದು ಮನೆ ಮನೆ ಪ್ರಚಾರ ಮಾಡಿ ಗ್ರಾಮದಲ್ಲಿಯೇ ಅರ್ಜಿ ಪಡೆದು ದಾಖಲೆಗಳನ್ನು ಪರಿಶೀಲಿಸಿ ಇ–ಸ್ವತ್ತು ಖಾತೆ ಮಾಡಿಕೊಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಸುನಿತಾ ದ್ಯಾವಯ್ಯ, ಸದಸ್ಯರಾದ ನಂಜೇಗೌಡ, ಆರ್.ಶ್ರೀನಿವಾಸ್, ಆಶಾ ಆನಂದ್, ರೇವತಿ ಹರೀಶ್, ನೇತ್ರಾವತಿ ರಮೇಶ್, ಚಿಕ್ಕೋಸನಹಳ್ಳಿ ಕುಮಾರ್, ಶ್ರೀರಾಮಚಂದ್ರೇಗೌಡ, ಜಯಂತಿ ರವೀಂದ್ರ, ಆರ್.ರಮೇಶ್, ಚನ್ನೇಗೌಡ, ಶಶಿರೇಖಾ, ನೇತ್ರಾವತಿ, ಸಿಆರ್‌ಪಿ. ಕುಮಾರ್, ಭಾಗ್ಯಕುಮಾರ್, ಪಿಡಿಓ ಹರ್ಷವರ್ಧನ್, ಕಾರ್ಯದರ್ಶಿ ಚಂದ್ರ ಕುಮಾರ್, ಬಿಲ್‌ಕಲೆಕ್ಟರ್ ನರಸಿಂಹಯ್ಯ, ಡಿಇಓ ತ್ರಿವೇಣಿ, ಗ್ರಂಥಪಾಲಕಿ ಸೌಮ್ಯ ಸೇರಿದಂತೆ ಗ್ರಾಮ ಪಂಚಾಯಿತಿಯ ಎಲ್ಲಾ ಸಿಬ್ಬಂದಿ ವರ್ಗದವರು, ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಡಿ.14, ಲೋಕ್ ಅದಾಲತ್

ಮಂಡ್ಯ, ನ.17– ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ರಾಜ್ಯಾದ್ಯಂತ ಡಿ.14ರಂದು ರಾಷ್ಟ್ರೀಯ ಲೋಕ್ ಅದಾಲತ್‌ನ್ನು ಹಮ್ಮಿಕೊಂಡಿದ್ದು, ಮಂಡ್ಯ ಜಿಲ್ಲೆಯ 7 ತಾಲೂಕುಗಳಲ್ಲಿಯೂ ಸಹ ಲೋಕ್ ಅದಾಲತ್ ಮುಖಾಂತರ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ನಿಟ್ಟಿನಲ್ಲಿ ಪೂರ್ವಭಾವಿ ಬೈಠಕ್‌ಗಳನ್ನು ನಡೆಸುತ್ತಿದೆ. ಆಸ್ತಿ ವಿವಾದಗಳನ್ನು ಒಳಗೊಂಡಂತೆ ಸಿವಿಲ್ ವ್ಯಾಜ್ಯಗಳು, ವಿಭಾಗದ ದಾವೆಗಳು, ಹಣ ವಸೂಲಾತಿ ದಾವೆಗಳು ನಿರ್ದಿಷ್ಟ ಪರಿಹಾರ ಕಾಯ್ದೆಯಡಿ ದಾಖಲಿಸಿರುವ ದಾವೆಗಳು ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುವುದು.

ಬೆಳಗಾವಿ ಅಧಿವೇಶನಕ್ಕೆ 1 ಲಕ್ಷ ರೈತರು



ಭಾರತೀನಗರ.ನ.17– ರೈತರ ಬೇಡಿಕೆಗಳ ಈಡೇರಿಕೆಗಾಗಿ ಬೆಳಗಾವಿ ಅದಿವೇಶನದಲ್ಲಿ 1 ಲಕ್ಷ ರೈತರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಏಕೀಕೃತ ಕರ್ನಾಟಕ ರಾಜ್ಯ ರೈತಸಂಘದ ಸಂಸ್ಥಾಪಕ ಅಧ್ಯಕ್ಷ ಪಚ್ಚೆ ನಂಜುಡಸ್ವಾಮಿ ತಿಳಿಸಿದರು.

ಭಾರತೀನಗರದ ಸಮುದಾಯ ಆರೋಗ್ಯ ಕೇಂದ್ರದ ಆವರಣದಲ್ಲಿ ನಡೆಸಲಾದ ರೈತ ಸಂಘದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಬೆಳಗಾವಿ ಅಧಿವೇಶನದ ವೇಳೆ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ಮಂಡ್ಯ ಜಿಲ್ಲೆಯಿಂದ ಕನಿಷ್ಟ 10 ಸಾವಿರ ರೈತರು ಭಾಗವಹಿಸಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಮುಂದಾಗಬೇಕೆಂದು ತಿಳಿಸಿದರು.

80ರ ದಶಕದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕರ್ನಾಟಕ ರಾಜ್ಯ ರೈತ ಸಂಘ ಇತ್ತೀಚಿನ ವರ್ಷಗಳಲ್ಲಿ ತಾತ್ವಿಕ ಭಿನ್ನಾಪ್ರಾಯದಿಂದ ಬಣಗಳಾಗಿ ರೂಪುಗೊಂಡಿದ್ದು ಸಂಘಟನೆ ಬಲ ಕುಸಿದಿದ್ದು, ಈಗ ರೈತ ಸಂಘದ ಏಕೀಕರಣ ಮೂಲಕ ಎಲ್ಲಾ ಬಣಗಳನ್ನು ಒಂದೇ ವೇದಿಕೆಯಲ್ಲಿ ಕರೆತಂದು ಒಗ್ಗೂಡಿಸಿ ಸಂಘಟಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ರೈತ ಸಂಘದ ಮೈಸೂರು ಜಿಲ್ಲಾಘಟಕದ ಅಧ್ಯಕ್ಷ ವಿದ್ಯಾಪ್ರಸಾದ್, ಹಿರಿಯ ಮುಖಂಡರಾದ ರಾಮಕೃಷ್ಣಯ್ಯ, ಸೀತಾರಾಮು, ಸೋಶಿ ಪ್ರಕಾಶ್, ಪ್ರಭು, ಪಣ್ಣೇದೊಡ್ಡಿ ವೆಂಕಟೇಶ್, ಕೊತ್ತನಹಳ್ಳಿ ಉಮೇಶ್, ಅಣ್ಣೂರು ಮಹೇಂದ್ರ ಇದ್ದರು.

ಅಧ್ಯಕ್ಷರಾಗಿ ಶಿವಪ್ಪ ಆಯ್ಕೆ

ಶ್ರೀರಂಗಪಟ್ಟಣ, ನ,16–ತಾಲೂಕಿನ ಕೆ.ಆರ್.ಸಾಗರ ಯೋಜನಾ ಘಟಕದ ಸರ್ಕಾರಿ ನೌಕರರ ಸಂಘದ ನೂತನ ಅಧ್ಯಕ್ಷರಾಗಿ ಶಿವಪ್ಪ ಆಯ್ಕೆಯಾಗಿದ್ದಾರೆ.

ಒಟ್ಟು 19 ನಿರ್ದೇಶಕರುಗಳು ಇರುವ ಸಂಘದ ಅಧ್ಯಕ್ಷ ಸ್ಥಾನಕ್ಕೆ ಶನಿವಾರ ಚುನಾವಣೆ ನಡೆದಿದ್ದು, ಅಧ್ಯಕ್ಷ ಸ್ಥಾನಕ್ಕೆ ನಾಗೇಶ್ ಮತ್ತು ಶಿವಪ್ಪ ಸ್ಪರ್ಧಿಸಿದ್ದರು.

ನಾಗೇಶ್ 7 ಮತ ಹಾಗೂ ಶಿವಪ್ಪ 12 ಮತಗಳನ್ನು ಪಡೆದಿದ್ದು, 2024–29 ಸಾಲಿಗೆ ಶಿವಪ್ಪ ಆಯ್ಕೆಯಾಗಿ ಈ ಸಾಲಿನ ನೂತನ ಅಧ್ಯಕ್ಷರಾಗಿದ್ದಾರೆಂದು ಚುನಾವಣಾಧಿಕಾರಿ ಅಶ್ವಥಪ್ಪ ತಿಳಿಸಿದರು.

ನೂತನ ಅಧ್ಯಕ್ಷ ಶಿವಪ್ಪರವರಿಗೆ ರಾಜ್ಯ ಪರಿಷತ್ ಸದಸ್ಯ ವೆಂಕಟೇಶ ನಾಯ್ಡು, ನಿರ್ದೇಶಕರಾದ ರಿಜ್ವಾನ್, ಕುಮಾರ ಸ್ವಾಮಿ, ಮಾಜಿ ನಿರ್ದೇಶಕ ಜಗದೀಶ್, ಜಗನ್ನಾಥ್ ಕಿಲ್ಲೇದಾರ್ ರಾಜು, ಗ್ರಾ.ಪಂ ಮಾಜಿ ಅಧ್ಯಕ್ಷ ನಾಗೇಂದ್ರಕುಮಾರ್, ನರಸಿಂಹ ಅಭಿನಂದಿಸಿದರು

ಕೃಷಿ ಸೇವೆಗಳ ಸದುಪಯೋಗಕ್ಕೆ ಕರೆ



ನಾಗಮಂಗಲ/ ದೇವಲಾಪುರ: ಕೃಷಿ ಸೌಲತ್ತುಗಳು ಪಡೆಯುವ ಹಾಗೂ ಮಾಹಿತಿ ನೀಡುವ ಉದ್ದೇಶದಿಂದ ಒಂದೇ ಕಟ್ಟಡದಲ್ಲಿ ಕೃಷಿಯ ಪೂರಕ ವ್ಯವಸ್ಥೆಗಳು ದೊರಕುವುದರಿಂದ ರೈತರು ಬಳಸಿಕೊಳ್ಳುವಂತೆ ಕೃಷಿ ಸಚಿವರಾದ ಚೆಲುವರಾಯಸ್ವಾಮಿ ಕರೆ ನೀಡಿದರು.

ತಾಲೂಕಿನ ದೇವಲಾಪುರ ಹೋಬಳಿ ಕೇಂದ್ರದಲ್ಲಿ ನೂತನವಾಗಿ ರೈತ ಸಂಪರ್ಕ ಕೇಂದ್ರದ ನೂತನ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ರಾಜ್ಯದ ಕೃಷಿ ಸಚಿವರಾದ ಮೇಲೆ ಕೃಷಿಗೆ ಸಂಬಂಧಪಟ್ಟಂತ ಹೊಸ ಯೋಜನೆಗಳನ್ನು ರೂಪಿಸಿದ್ದು ಜಿಲ್ಲೆಗೆ 15 ರೈತ ಸಂಪರ್ಕ ಕೇಂದ್ರಗಳು ಮಂಜುರಾತಿಯಾಗಿದ್ದು ತಾಲೂಕಿಗೂ ನೂತನ ರೈತ ಕೇಂದ್ರಗಳ ಕಟ್ಟಡಗಳನ್ನು ನಿರ್ಮಿಸುತ್ತಿದ್ದು ತಾವುಗಳು ಇಂತಹ ಕೆಲಸಗಳಿಗೆ ಆದ್ಯತೆ ನೀಡಿದವರನ್ನು ನೆನಪಿಸಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ತಿಳಿಸಿದರು. ಇದೇ ಸಂದರ್ಭದಲ್ಲಿ ಮಾಜಿ ವಿಧಾನಪರಿಷತ್ ಸದಸ್ಯರಾದ ಅಪ್ಪಾಜಿಗೌಡ, ಮಂಡ್ಯ ಜಿಲ್ಲಾ ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಅಶೋಕ್, ಪಾಂಡವಪುರ ಉಪನಿರ್ದೇಶಕರಾದ ಡಾ.ಭಾನುಪ್ರಕಾಶ್, ನಾಗಮಂಗಲ ಸಹಾಯಕ ನಿರ್ದೇಶಕರಾದ ಹರೀಶ್, ತಾಲೂಕು ಕಾರ್ಯ ನಿರ್ವಹಣಾಧಿಕಾರಿ ಸತೀಶ್ ಕೆಆರ್‌ಐಡಿಎಲ್ ಇಇ ಸೋಮಶೇಖರ್ ಎಇಇ ಚೈತ್ರ ಹಾಜರಿದ್ದರು.

ಫಸಲ್ ಬಿಮಾ ಯೋಜನೆ ಅನುಷ್ಠಾನಕ್ಕೆ ಮಂಜೂರಾತಿ

ಮಂಡ್ಯ,ನ.17– ಮಂಡ್ಯ ಜಿಲ್ಲೆಯಲ್ಲಿ 2024–25ನೇ ಸಾಲಿನ ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದ್ದು, ಇವುಗಳಲ್ಲಿ ತಾಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ಮತ್ತು ಇತರೆ ಬೆಳೆಗಳನ್ನು, ಹೋಬಳಿ ಮಟ್ಟಕ್ಕೆ ಅಧಿಸೂಚಿಸಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ ಎಂದು ಮಂಡ್ಯ ಜಿಲ್ಲೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ತಮ್ಮ ಹತ್ತಿರದ ರೈತ ಸಂಪರ್ಕ ಕೇಂದ್ರಗಳು, ತಾಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಬ್ಯಾಂಕುಗಳು, ಸಾಮಾನ್ಯ ಸೇವಾ ಕೇಂದ್ರಗಳು, ಬೆಂಗಳೂರು ಒನ್, ಕರ್ನಾಟಕ ಒನ್ ಮತ್ತು ಗ್ರಾಮ ಒನ್ ಕೇಂದ್ರಗಳನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಜಿಲ್ಲೆ ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಸಾಕ್ಷಿ ಬೇಕಿದ್ದರೆ ತನಿಖೆ ನಡೆಸಿ

ಅದನ್ನು ಮಾಧ್ಯಮಗಳು ವರದಿ ಮಾಡಿವೆ. ಇದನ್ನೇ ಪ್ರಧಾನಿ ಮೋದಿ ಅವರು ಮಹಾರಾಷ್ಟ್ರದಲ್ಲಿ ಹೇಳಿದ್ದಾರೆಯೇ ಹೊರತು ಅವರು ಯಾವುದೇ ಸುಳ್ಳು ಆರೋಪ ಮಾಡಿಲ್ಲ. ಸಾಕ್ಷಿ ಬೇಕಾದರೆ ಸಿದ್ದರಾಮಯ್ಯ ನವರು ಮದ್ಯ ಮಾರಾಟಗಾರರ ಸಂಘದ ಆರೋಪದ ತನಿಖೆ ಮಾಡಲು ಮತ್ತೊಂದು ಎಸ್‌ಐಟಿ ರಚಿಸಲಿ ಎಂದು ಸವಾಲು ಹಾಕಿದರು. ಮದ್ಯ ಮಾರಾಟಗಾರರು ಮಾಡುತ್ತಿರುವ ಆರೋಪ ಸುಳ್ಳಾದರೆ

ಅವರ ಲೈಸೆನ್ಸ್ ರದ್ದು ಮಾಡಿ ಅಂಗಡಿಗಳಿಗೆ ಬೀಗ ಹಾಕಿಸಿ. ತಮ್ಮ ಹೈಕಮಾಂಡ್ ನಾಯಕರನ್ನು ಮೆಚ್ಚಿಸಲು ಕನ್ನಡಿಗರ ತೆರಿಗೆ ಹಣವನ್ನು ಲೂಟಿ ಹೊಡೆಯುತ್ತಿರುವ ಕಾಂಗ್ರೆಸ್ ನಾಯಕರಿಗೆ ಪ್ರಧಾನಿ ಮೋದಿ ಅವರ ಬಗ್ಗೆ ಮಾತನಾಡಲು ಯಾವ ನೈತಿಕತೆ ಇಲ್ಲ ಎಂದರು. ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಅಂಬಿಕಾಪತಿ ಅವರು ಬಿಬಿಎಂಪಿಗೆ ಸಂಬಂಧಿಸಿದಂತೆ ಮಾಡಿದ್ದ ಶೇ.40 ಕಮಿಷನ್ ಆರೋಪಗಳು ಶುದ್ಧ ಸುಳ್ಳೆಂದು ಲೋಕಾಯುಕ್ತ ತನಿಖಾ ಅಧಿಕಾರಿಗಳು ಸಲ್ಲಿಸಿರುವ ವರದಿಯಲ್ಲಿ ಬಹಿರಂಗವಾಗಿದೆ. 40 ಪರ್ಸೆಂಟ್ ಕಮಿಷನ್ ಆರೋಪ ಕಾಂಗ್ರೆಸ್‌ನ ಟೂಲ್ ಕಿಟ್ ಎಂಬುದು ಈಗ ಸಾಕ್ಷಿ ಸಮೇತ ಋಜುವಾತಾಗಿದೆ. ಬಿಜೆಪಿ ಸರ್ಕಾರದ ವಿರುದ್ಧ ಆರೋಪ ಮಾಡಿದ್ದ ಗುತ್ತಿಗೆದಾರ ಅಂಬಿಕಾಪತಿ ಗುತ್ತಿಗೆ ಕೆಲಸಗಳನ್ನು ಮಾಡುವುದನ್ನು ಬಿಟ್ಟೇ ಆರು ವರ್ಷವಾಗಿತ್ತು. ಇದರಿಂದ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಕಟ್ಟಿದ ಸುಳ್ಳಿನ ಮಹಲು ಸಂಪೂರ್ಣ ಕುಸಿದುಬಿದ್ದಿದೆ ಎಂದು ಹೇಳಿದರು.

ಬಿಪಿಎಲ್ ಕಾರ್ಡ್‌ಗಳು ಎಪಿಎಲ್‌ಗೆ ಶಿಫ್ಟ್

ವಕ್ಫ್ ಆಸ್ತಿ ವಿವಾದಕ್ಕೆ ಸರ್ಕಾರವೇ ತೆರೆ ಎಳೆಯಬೇಕು ಎಂದರು. ನೋಟಿಸ್ ಹಿಂಪಡೆಯಲು ಸಿಎಂ ಸೂಚನೆ ಕೊಟ್ಟಿದ್ದಾರೆ ಎಂದು ಮಂತ್ರಿನೇ ಹೇಳುತ್ತಿದ್ದಾರೆ. ಸರ್ಕಾರದ ಕೆಲವು ತೀರ್ಮಾನದಿಂದ ಗೊಂದಲ ಸೃಷ್ಟಿಯಾಗಿದೆ. ಉಳ್ಳವರ ವಕ್ಫ್ ಆಸ್ತಿ ವಶಕ್ಕೆ ಪಡೆದಿರುವ ಬಗ್ಗೆ ಏನೂ ಕ್ರಮ ಆಗಿಲ್ಲ. ರೈತರ ಜಮೀನು ಮಾತ್ರ ವಕ್ಫ್ ಆಸ್ತಿ ಮಾಡಲಾಗ್ತಿದೆ. ಅಶಾಂತಿ ಉಂಟು ಮಾಡಲು ಸರ್ಕಾರ ಮಾಡಿರುವ ಮಹಾ ಅಪರಾಧ ಎಂದು ಗುಡುಗಿದ್ದಾರೆ.

ಶ್ರೀನಿವಾಸಪುರದಲ್ಲಿ ಮಾಜಿ ಸ್ಪೀಕರ್ ರಮೇಶ್ ಕುಮಾರ್ ಅವರಿಂದ ಅರಣ್ಯ ಒತ್ತುವರಿ ಆರೋಪದ ಸರ್ವೇ ಸ್ಥಗಿತ ಕುರಿತು ಮಾತನಾಡಿ, ಕೋಲಾರ ಜಿಲ್ಲೆಯಲ್ಲಿ ಅಮಾಯಕ ರೈತರ ಭೂಮಿಯನ್ನು ಅರಣ್ಯ ಹಾಗೂ ಕಂದಾಯ ಅಧಿಕಾರಿಗಳು ತೆರವು ಮಾಡಿದ್ದಾರೆ. ಶ್ರೀನಿವಾಸಪುರದಲ್ಲಿ ರೈತರನ್ನು ಒಕ್ಕಲೆಬ್ಬಿಸಿ ಖಾಲಿ ಮಾಡಿಸಿದ್ದಾರೆ. 126 ಎಕರೆ ಒತ್ತುವರಿ ಸರ್ವೇ ಬಗ್ಗೆ ಕೋರ್ಟ್ ಸೂಚನೆ ನೀಡಿದೆ. ಹಾಗಾದರೆ ಬಡವರಿಗೆ ಒಂದು ನ್ಯಾಯ ಇವರಿಗೆ ಒಂದು ನ್ಯಾಯನಾ? ಇದೇ ತಿಂಗಳ 6ರಂದು ಸರ್ವೇ ಮಾಡಲು ನಿಗಧಿ ಆಗಿದ್ದು ಏನಾಯ್ತು? ಎಂದು ಪ್ರಶ್ನಿಸಿದರು.

ಡಿಜಿಎಂ ಅನುಮಾನಾಸ್ಪದ ಸಾವು

ಸಹೋದ್ಯೋಗಿಗಳಿಗೆ ಕರೆ ಮಾಡಿ ವಿಚಾರಿಸಿದಾಗ ಅವರು ಇಂದು ಕೆಲಸಕ್ಕೇ ಹಾಜರಾಗಿಲ್ಲ ಎನ್ನುವುದು ಗೊತ್ತಾಗಿದೆ. ಗಾಬರಿಯಿಂದ ಹುಡುಕಾಡುತ್ತಿದ್ದಾಗ ಸಾರಾ ಕಲ್ಯಾಣ ಮಂಟಪದ ಮುಂಭಾಗ ರಿಂಗ್‌ರಸ್ತೆ ಕೆಇಬಿ ಜಂಕ್ಷನ್ ಬಳಿ ಮೋಹನ್ ರಾವ್ ಅವರ ಕಾರು ಪತ್ತೆಯಾಗುತ್ತದೆ. ಆದರೆ ಕಾರಿನಲ್ಲಿ ಮೋಹನ್ ರಾವ್ ಇರುವುದಿಲ್ಲ. ಬಳಿಕ ಸುತ್ತಮುತ್ತ ಹುಡುಕಾಡಿದಾಗ ನಿರ್ಮಾಣ ಹಂತದ ಕೆಇಬಿ ಸಮುದಾಯ ಭವನ ಆವರಣದ ವಾಚ್‌ಮನ್ ಕೋಣೆಯಲ್ಲಿ ಸೀರೆಯಿಂದ ನೇಣು ಹಾಕಿಕೊಂಡಿರುವ ಸ್ಥಿತಿಯಲ್ಲಿ ಮೋಹನ್ ರಾವ್ ಅವರ ಮೃತದೇಹ ಪತ್ತೆಯಾಗಿದೆ.

ಮೋಹನ್ ರಾವ್ ಅವರು 30 ವರ್ಷಗಳಿಂದ ಬೆಮೆಲ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕೆಲಸದ ಒತ್ತಡದ ಬಗ್ಗೆ ಮನೆಯವರ ಬಳಿ ಆಗಾಗ್ಗೆ ಹೇಳಿಕೊಳ್ಳುತ್ತಿದ್ದರು. ಅದೇ ಕಾರಣಕ್ಕೆ ನೇಣು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಅನುಮಾನವಿದೆ. ಆದರೂ ತನಿಖೆ ನಡೆಸಿ, ನಮ್ಮ ತಂದೆಯ ಸಾವಿನ ಬಗ್ಗೆ ನಿಖರತೆ ತಿಳಿಸುವಂತೆ ಮೋಹನ್ ರಾವ್ ಪುತ್ರಿ ಕುವೆಂಪುನಗರ ಠಾಣೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಹೇಳಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಇನ್ಸ್‌ಪೆಕ್ಟರ್ ಅರುಣ್ ತಿಳಿಸಿದ್ದಾರೆ.

ವೇದಾಂತ್ ಬಸು ನಿಧನ

ಮೈಸೂರು, ನ.17– ಮೈಸೂರು ತಾಲೂಕು ಡಿ.ಸಾಲುಂಡಿ ಗ್ರಾಮದ ಕೆ.ಬಸಪ್ಪ ಅವರ ಪುತ್ರ ವೇದಾಂತ್ ಬಸು(9) ಅನಾರೋಗ್ಯದಿಂದ ಶನಿವಾರ ನಿಧನರಾದರು.



ಕೆ.ಬಸಪ್ಪ ಅವರು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಇಲಾಖೆ, ಕಾರ್ಯಪಾಲಕ ಇಂಜಿನಿಯರ್ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರ್ ವಿಭಾಗದಲ್ಲಿ ಲೆಕ್ಕಾಧೀಕ್ಷಕರಾಗಿದ್ದಾರೆ. ವೇದಾಂತ್ ಬಸು ದೀರ್ಘಕಾಲದ ಅನಾರೋಗ್ಯದಿಂದ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದ್ದು, ಇವರು ತಂದೆ, ತಾಯಿ ಕಾಳಮ್ಮ (ಅನಸೂಯ), ಸಹೋದರಿ ಇಂಚರ ಬಸು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಶನಿವಾರ ರಾತ್ರಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಮಾಜಕ್ಕೆ ಸತ್ಯ ತಿಳಿಸುವ ಏಕೈಕ ಮಾಧ್ಯಮ ರಂಗಭೂಮಿ

ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಅಭಿಮತ

ಮೈಸೂರು, ನ17(ಎಸ್‌ಪಿಎನ್)– ಸಮಾಜಕ್ಕೆ ಸತ್ಯವನ್ನು ತಿಳಿಸುವ ಏಕೈಕ ಮಾಧ್ಯಮ ರಂಗಭೂಮಿ. ತಿರುಚಿದ ದೇಶದ ಇತಿಹಾಸವನ್ನು ಇಲ್ಲಿಯವರೆಗೂ ಓದಿದ್ದೇವೆ. ಇನ್ನು ಮುಂದೆ ನೈಜ ಇತಿಹಾಸ ತಿಳಿಸುವ ಪ್ರಯತ್ನವಾಗಬೇಕು ಎಂದು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಕನ್ನಡ ಸಾಹಿತ್ಯಭವನದಲ್ಲಿ ಜಿಲ್ಲಾ ಕಸಾಪ, ಹಿಮಾಲಯ ಪ್ರತಿಷ್ಠಾನದ ಸಹಯೋಗದೊಂದಿಗೆ ಕನ್ನಡ ರಾಜ್ಯೋತ್ಸವ ಅಂಗವಾಗಿ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದರು.

ದೇಶಭಕ್ತಿ ಕೊಡಗಿನಿಂದ ಬಂದಿರುವ ನನ್ನ ರಕ್ತದಲ್ಲಿದೆ. ಹಾಗಾಗಿ ದೇಶದ ನೈಜ ಇತಿಹಾಸವನ್ನು ತಿಳಿಸಲು ನನಗೆ ಯಾವುದೇ ಅಂಜಿಕೆ ಇಲ್ಲ. ನಾನು ರಂಗಾಯಣ ನಿರ್ದೇಶಕನಾಗಿದ್ದಾಗ ಕೆಲವರು ಅಲ್ಲಿಂದ ಓಡಿಸಲು ಸಾಕಷ್ಟು ಪ್ರಯತ್ನಪಟ್ಟರು. ಅದು ಯಶಸ್ವಿಯಾಗಲಿಲ್ಲ. ಅದಕ್ಕಾಗಿ ನಾನು ರಂಗಾಯಣದಲ್ಲಿ ಇದ್ದಷ್ಟು ದಿನ ಸಂಬಳವನ್ನೇ ತೆಗೆದುಕೊಳ್ಳಲಿಲ್ಲ. ಹಾಗಾಗಿ ನನ್ನನ್ನು ಮುಟ್ಟಲು ಯಾರಿಗೂ ಸಾಧ್ಯವಾಗಲಿಲ್ಲ ಎಂದು ಹೇಳಿದರು.

ನಾಡು–ನುಡಿಗೆ ಕೆಲಸ ಮಾಡುವ ಸಾಧಕರು ಅರ್ಜಿ ಹಾಕಿ ಪ್ರಶಸ್ತಿ ಪಡೆಯುವ ಹಾಗೂ ಪೊಲೀಸರಿಂದ ಎನ್‌ಓಸಿ ಪಡೆದು ಪ್ರಶಸ್ತಿ ತೆಗೆದುಕೊಳ್ಳ ಬೇಕಾದ ದುಸ್ಥಿತಿ ಕನ್ನಡಿಗರಿಗೆ ಬಂದಿರುವುದು ದುರ್ದೈವದ ಸಂಗತಿ. ಈ ವೇದಿಕೆಯಲ್ಲಿ ಕೊಡ ಮಾಡುತ್ತಿರುವ 'ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ'ಯು ಅದಕ್ಕಿಂತ ಮಿಗಿಲು ಹಾಗಾಗಿ ಈ ಪ್ರಶಸ್ತಿಯನ್ನು ಸಂತೋಷದಿಂದ ಸ್ವೀಕರಿಸಿದ್ದೇನೆ ಎಂದರು.



ಕನ್ನಡ ರಾಜ್ಯೋತ್ಸವ ಅಂಗವಾಗಿ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿಯನ್ನು ಅಡ್ಡಂಡ ಸಿ. ಕಾರಿಯಪ್ಪ ಸೇರಿ 12 ಮಂದಿ ವಿವಿಧ ಕ್ಷೇತ್ರದ ಸಾಧಕರಿಗೆ ಪ್ರದಾನ ಮಾಡಲಾಯಿತು.

ನನ್ನ ಜೊತೆಗೆ ಪ್ರಶಸ್ತಿ ಸ್ವೀಕರಿಸಿರುವ 11 ಮಂದಿ ಸಾಧಕರು ಅವರವರ ಕ್ಷೇತ್ರದಲ್ಲಿ ಅದ್ವಿತೀಯ ಸಾಧನೆ ಮಾಡಿದ್ದಾರೆ. ಈ ಸಾಧಕರನ್ನು ಸರ್ಕಾರ ಗುರುತಿಸದಿದ್ದರೂ ಜಿಲ್ಲಾ ಕಸಾಪ ಹಾಗೂ ಹಿಮಾಲಯ ಪ್ರತಿಷ್ಠಾನ ಗುರುತಿಸಿರುವುದು ಸಂತೋಷದ ಸಂಗತಿ ಎಂದರು.

ಸಿಸಿಬಿ ಎಸಿಪಿ ಎಸ್.ಎನ್.ಸಂದೇಶ ಕುಮಾರ್ ಮಾತನಾಡಿ, ತುಂಗಾ ತೀರದಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದ ಶ್ರೀ ವಿದ್ಯಾರಣ್ಯರು, ಶೃಂಗೇರಿ ಪೀಠಕ್ಕೂ ಮಠಾಧೀಶರಾಗಿದ್ದರು. ತದನಂತರ ಹಂಪಿಗೆ ಆಗಮಿಸಿ, ಹಕ್ಕ–ಬುಕರ ಮೂಲಕ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಮುಂದಾದರು. ವಿಜಯನಗರ ಸಾಮ್ರಾಜ್ಯದಲ್ಲಿ ಕನ್ನಡಕ್ಕೆ ಮೊದಲ ಆದ್ಯತೆ ಇತ್ತು ಮುತ್ತು ರತ್ನಗಳನ್ನು ವಿಜಯನಗರ ಬೀದಿಬದಿಯಲ್ಲಿ ಅಲ್ಲಿನ ವರ್ತಕರು ಮಾರಾಟ ಮಾಡುತ್ತಿದ್ದರೆಂಬ ವಿಷಯ ಇತಿಹಾಸದಿಂದ ತಿಳಿದು ಬಂದಿದೆ ಎಂದರು.

ಚಿನ್ನಾಭರಣಗಳನ್ನು ಬೀದಿಯಲ್ಲಿ ಮಾರಾಟ ಮಾಡುತ್ತಿದ್ದರು ಎಂದರೆ, ಕಾನೂನು ಸುವ್ಯವಸ್ಥೆಗೆ ವಿಜಯನಗರ ಸಾಮ್ರಾಜ್ಯ ಅರಸರು ಸಾಕಷ್ಟು ಒತ್ತು ನೀಡಿದ್ದರು ಎಂಬುದು ತಿಳಿಯುತ್ತದೆ. ಎಲ್ಲಿ ಕಾನೂನು ಸುವ್ಯವಸ್ಥೆಯನ್ನು ಜನರು ಪಾಲಿಸುತ್ತಾರೆ. ಅಂತಹ ನಗರಗಳಲ್ಲಿ ಅಪರಾಧ ಪ್ರಕರಣಗಳು ಸಂಭವಿಸುವುದಿಲ್ಲ. ಇದಕ್ಕೆ ವಿಜಯನಗರ ಸಾಮ್ರಾಜ್ಯವೇ ಉದಾಹರಣೆ. ಶೃಂಗೇರಿ ಮೂಲದವನಾದ ನಾನು, ಶೃಂಗೇರಿ ಪೀಠಾಧ್ಯಕ್ಷರೊಬ್ಬರು ವಿಜಯನಗರ ಸಾಮ್ರಾಜ್ಯ ಸ್ಥಾಪನೆ ಕಾರಣೀಭೂತರಾದರು ಎಂಬುದು ಸಂತೋಷದ ಸಂಗತಿ ಎಂದರು.

12 ಮಂದಿ ಸಾಧಕರಿಗೆ ಸನ್ಮಾನ: ಕಲೆ ಮತ್ತು ಸಾಹಿತ್ಯ ಕ್ಷೇತ್ರದಿಂದ ಮೋಹನ್ ವರ್ಣೇಕರ್, ಕಾವ್ಯ ಮತ್ತು ಸಂಘಟನೆಯಿಂದ ಅರಕಲಗೂಡು ನೀಲಕಂಠ ಮೂರ್ತಿ, ಉದ್ಯಮದಿಂದ ಎಂ.ಎಸ್.ರಾಮನಾಥಗುಪ್ತ, ರಂಗಭೂಮಿಯಿಂದ ಅಡ್ಡಂಡ ಕಾರ್ಯಪ್ಪ, ಸಾಹಿತ್ಯದಿಂದ ನೀಲಕಂಠಹಳ್ಳಿ ತಮ್ಮಣ್ಣಗೌಡ, ಶಿಕ್ಷಣದಿಂದ ಡಾ.ಹನುಮಂತಾಚಾರ್ ಜೋಶಿ, ಯೋಗದಿಂದ ಸಿ.ರಮೇಶ್‌ಶೆಟ್ಟಿ, ಯೋಗ ಮತ್ತು ಆಧ್ಯಾತ್ಮಕ್ಷೇತ್ರದಿಂದ ಎಂ.ಪಿ.ವಿಜಯಕುಮಾರ್, ಮುಕ್ತಕ ಸಾಹಿತ್ಯದಿಂದ ಮಾಲತಿ ಕೃಷ್ಣಪ್ರಸಾದ್, ವೈದ್ಯಕೀಯ ಕ್ಷೇತ್ರದಿಂದ ಡಾ.ನಾರಾಯಣ ಹೆಗಡೆ, ಶಿಕ್ಷಣ ಮತ್ತು ಸೇವಾಕ್ಷೇತ್ರದಿಂದ ಎಂ.ಎಸ್. ನಾಗೇಶ್, ಸಾಹಿತ್ಯದಿಂದ ಎಸ್.ಉಮೇಶ್ ಅವರಿಗೆ ಆಚಾರ್ಯ ಶ್ರೀ ವಿದ್ಯಾರಣ್ಯ ರಾಜ್ಯೋತ್ಸವ ಪ್ರಶಸ್ತಿ ಪ್ರಧಾನ ಮಾಡಲಾಯಿತು.

ವೇದಿಕೆಯಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಪ್ರಮುಖಂಡ ಕೆರ್ಘುರಾಂ ವಾಜಪೇಯಿ, ರಾಜಶೇಖರ್ ಮೆಡಿಕಲ್ ಫೌಂಡೇಷನ್ ನಿರ್ದೇಶಕ ಡಾ.ಹೆಚ್.ಬಿ. ರಾಜಶೇಖರ್, ಕವಯತ್ರಿ ಎ.ಪುಷ್ಪಾ ಐಯ್ಯಂಗಾರ್, ಹಿಮಾಲಯ ಪ್ರತಿಷ್ಠಾನ ಎನ್.ಅನಂತ ಉಪಸ್ಥಿತರಿದ್ದರು.

ಧೂಳೆಬ್ಬಿಸಿದ ಪೈಲ್ವಾನರು, ಕಾದಾಟದ ರೋಚಕತೆ ಕಣ್ತುಂಬಿಕೊಂಡ ಕುಸ್ತಿ ಅಭಿಮಾನಿಗಳು

ಮೈಸೂರು,ನ.17(ಪಿಎಂ)– ಪಟ್ಟಿಗೆ ಪ್ರತಿಪಟ್ಟು ಹಾಕಿ ಅಖಾಡದಲ್ಲಿ ಪೈಲ್ವಾನರು ಧೂಳೆಬ್ಬಿಸುತ್ತಿದ್ದರೆ, ಕುಸ್ತಿ ಅಭಿಮಾನಿಗಳು ಉಸಿರು ಬಿಗಿಹಿಡಿದು ಕೌತುಕದ ಕಣ್ಣುಗಳಿಂದ ಕಾದಾಟದ ರೋಚಕತೆಯನ್ನು ಕಣ್ತುಂಬಿಕೊಂಡರು.

ಮೈಸೂರಿನ ಡಿ.ದೇವರಾಜ ಅರಸು ವಿವಿದೋದ್ದೇಶ ಕ್ರೀಡಾಂಗಣದ ಕುಸ್ತಿ ಅಖಾಡದಲ್ಲಿ ಭಾನುವಾರ ನಡೆದ ಕುಸ್ತಿ ಪಂದ್ಯಗಳ ರೋಚಕ ದೃಶ್ಯಗಳಿವು. ಮೈಸೂರು ಜಿಲ್ಲಾ ಕುಸ್ತಿ ಸಂಘದ ಸಹಯೋಗದಲ್ಲಿ ಅಶೋಕಪುರಂ ಪೈಲ್ವಾನ್ ಪುರುಷೋತ್ತಮ್ ಅಭಿಮಾನಿಗಳ ಬಳಗದ ವತಿಯಿಂದ ಮಾಜಿ ಮೇಯರ್ ಹಾಗೂ ಅಶೋಕಪುರಂನ ಪೈಲ್ವಾನ್ ಪುರುಷೋತ್ತಮ್ ಅವರ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ರಾಷ್ಟ್ರ ಮಟ್ಟದ 45 ಜೊತೆ ನಾಡ ಕುಸ್ತಿ ಪಂದ್ಯಾವಳಿ ನೋಡುಗರನ್ನು ತುದಿಗಾಲಲ್ಲಿ ನಿಲ್ಲಿಸಿತು.

ನಜರ್‌ನಾದ್‌ನ ಪೈ.ಮಧು ಅವರ ಶಿಷ್ಯ ಪೈ.ಚೇತನ್‌ಗೌಡ ಮತ್ತು ಪಾಲಹಳ್ಳಿ ಕೋಚ್ ಎಲ್.ಮಂಜಪ್ಪನವರ ಶಿಷ್ಯ ಪೈ.ಚೇತನ ನಡುವಿನ ಕುಸ್ತಿ ನೋಡುಗರಲ್ಲಿ ರೋಮಾಂಚನ ಉಂಟು ಮಾಡಿತು. 30 ನಿಮಿಷ ಪರಸ್ಪರ ಸೆಣಸಾಡಿದ ಈ ಇಬ್ಬರು ಪೈಲ್ವಾನರು ರಕ್ಷಣಾತ್ಮಕ ಪಟ್ಟುಗಳನ್ನು ಹಾಕಿ ಕುಸ್ತಿ ಮಾಡಿದರು. ನಿಗದಿತ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ಕುಸ್ತಿಯನ್ನು ತೀರ್ಪುಗಾರರು ಸಮಬಲ ಎಂದು ಘೋಷಣೆ ಮಾಡಿದರು.



ಮೈಸೂರಿನ ಡಿ.ದೇವರಾಜ ಅರಸು ವಿವಿದೋದ್ದೇಶ ಕ್ರೀಡಾಂಗಣದ ಕುಸ್ತಿ ಅಖಾಡದಲ್ಲಿ ಭಾನುವಾರ ನಡೆದ ಕುಸ್ತಿ ಪಂದ್ಯಾವಳಿಯಲ್ಲಿ ನಜರ್‌ನಾದಿನ ಪೈ.ಚೇತನ್‌ಗೌಡ ಮತ್ತು ಪೈ.ಚೇತನ ನಡುವಿನ ಕುಸ್ತಿ ನೋಡುಗರಲ್ಲಿ ರೋಮಾಂಚನ ಉಂಟು ಮಾಡಿತು.

1 ಗಂಟೆ ಕಾಲ ನಿಗದಿಯಾಗಿದ್ದ ಬಾಗಲಕೋಟೆ ಪೈ.ಪ್ರಕಾಶ್ ಇಂಗಳಗಿ ಹಾಗೂ ಮಹಾರಾಷ್ಟ್ರದ ಕೊಲ್ಲಾಪುರ ಪೈ.ಸುನೀಲ್ ಜಾದವ್ ನಡುವಿನ ಕುಸ್ತಿ ಅಖಾಡದಲ್ಲಿ ಧೂಳೆಬ್ಬಿಸಿ ನೋಡುಗರಿಗೆ ರೋಮಾಂಚನ ಉಂಟು ಮಾಡಿತು. ಕೊನೆಗೆ 20ನೇ ನಿಮಿಷದಲ್ಲಿ ಪೈ.ಪ್ರಕಾಶ್ ಇಂಗಳಗಿ ತಮ್ಮ ಪರಿಣಾಮಕಾರಿ ಪಟ್ಟುಗಳ ಮೂಲಕ ಪೈ.ಸುನೀಲ್‌ರನ್ನು ಚಿತ್ ಮಾಡಿ ಮಣಿಸಿ ಗೆಲುವಿನ ನಗೆಬೀರಿದರು.

ಮುಧೋಳ್ ಪೈ.ರೋಹನ್ ಗವಾಡೆ (2023ರ ದಸರಾ ಕೇಸರಿ ಪುರಸ್ಕೃತ ಪೈಲ್ವಾನ್) ಹಾಗೂ ದಾವಣಗೆರೆ ಕ್ರೀಡಾ ನಿಲಯದ ಕೋಚ್ ಡಾ.ವಿನೋದ್ ಕುಮಾರ್ ಅವರ ಶಿಷ್ಯ ಪೈ.ಬಸವರಾಜ ಪಾಟೀಲ್ ನಡುವೆ ನಿಗದಿತ ಅರ್ಧ ಗಂಟೆ ಕಾಲ ಕುಸ್ತಿ ನಡೆಯಿತು. ಇಬ್ಬರು ಪೈಲ್ವಾನರು ಪರಸ್ಪರ ಬಿರುಸಿನ ಪಟ್ಟುಗಳನ್ನು ಹಾಕುವ ಮೂಲಕ ಕುಸ್ತಿ ಪ್ರೇಮಿಗಳಲ್ಲಿ ಮಿಂಚಿನ ಸಂಚಲನ ಉಂಟು ಮಾಡಿದರು. ಅರ್ಧ ಗಂಟೆ ಬಳಿಕ ನಡೆದ ಪಾಯಿಂಟ್ ಕುಸ್ತಿಯಲ್ಲಿ ಮೊದಲ ಪಾಯಿಂಟ್ ಪಡೆದ ಪೈ.ರೋಹನ್ ಗವಾಡೆ ಗೆದ್ದು ಬೀಗಿದರು. ಇದಲ್ಲದೆ, ಇತರ ಕುಸ್ತಿ ಪಂದ್ಯಗಳೂ ನೋಡಗರಿಗೆ ರೋಚಕ ಅನುಭವ ನೀಡಿದವು. ಗೆದ್ದ ಪೈಲ್ವಾನರಿಗೆ ನಗದು ಬಹುಮಾನ ಹಾಗೂ ಸೋತ ಪೈಲ್ವಾನರಿಗೆ ಗೌರವಧನ ನೀಡಲಾಯಿತು.

ಮಾಜಿ ಮೇಯರ್ ಹಾಗೂ ಅಶೋಕಪುರಂನ ಪೈಲ್ವಾನ್ ಪುರುಷೋತ್ತಮ್, ಮುಖಂಡ ನವೀನ್‌ಕುಮಾರ್, ಅಶೋಕಪುರಂನ ಪೈ.ಸುನೀಲ್ ಕುಮಾರ್, ಮೈಸೂರು ಜಿಲ್ಲಾ ಕುಸ್ತಿ ಸಂಘದ ಅಧ್ಯಕ್ಷ ಪೈ.ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಪೈ.ಸ್ಟಾರ್ ವೆಂಕಟೇಶ್, ಕುಸ್ತಿ ತರಬೇತುದಾರ ಪೈ.ವಿನೋದ್‌ಕುಮಾರ್, ಪೈ.ಗಿರೀಶ್ ನಕ್ಷತ್ರ, ಪೈ.ಹರಿದಾಸ್ ಮತ್ತಿತರರು ಹಾಜರಿದ್ದರು.

ಬೆರಳಚ್ಚಿನಲ್ಲಿ ರಹಸ್ಯ ಪತ್ತೆ: ಡಿಟೆಕ್ಟಿವ್ ಡಿಎನ್‌ಎ


ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೂಕ್ಷ್ಮ ಜೀವ ವಿಜ್ಞಾನ ವಿಭಾಗ, ಐಕ್ಯುಎಸಿ ಘಟಕಗಳಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರು, ನ.17– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸೂಕ್ಷ್ಮ ಜೀವ ವಿಜ್ಞಾನ ವಿಭಾಗ ಮತ್ತು ಐಕ್ಯುಎಸಿ ಘಟಕಗಳ ಸಹಯೋಗದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಸಿಎಸ್‌ಐಆರ್ ಮತ್ತು ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ವಿಜ್ಞಾನಿಯಾಗಿದ್ದ ಡಾ.ಟಿ.ಶಿವಾನಂದಪ್ಪ ಅವರು 'ದಿ ಡಿಎನ್‌ಎ ಡಿಟೆಕ್ಟಿವ್' ಕುರಿತು ವಿಶೇಷ ಉಪನ್ಯಾಸ ನೀಡಿದರು. ಬೆರಳಚ್ಚಿನಲ್ಲಿ ದೊರೆಯುವ ಡಿಎನ್‌ಎಯಿಂದ ಅಪರಾಧ ಪತ್ತೆ ಹಚ್ಚುವ ವೈಜ್ಞಾನಿಕ ವಿಧಾನವನ್ನು ವಿವರಿಸಿದ ಡಾ.ಶಿವಾನಂದ ಅವರು ಡಿಎನ್‌ಎ ಫಿಂಗರ್ ಪ್ರಿಂಟ್‌ನಿಂದ ಅಪರಾಧ ಪತ್ತೆ ಮಾಡಿದ ಕುತೂಹಲಕಾರಿ ಮಾಹಿತಿಯನ್ನು ನೀಡಿದರು. ಡಿಎನ್‌ಎ ಬೆರಳಚ್ಚು ಪತ್ತೆ ತಂತ್ರವನ್ನು ಅಪರಾಧ ಕಂಡು ಹಿಡಿಯಲು ಮಾತ್ರವಲ್ಲದೇ, ಪೋಷಕರ ಪತ್ತೆ ಮಾಡಲು ಸಹ ಬಳಸಲಾಗುತ್ತದೆ ಎಂದು ಪ್ರಯೋಜನಗಳನ್ನು ವಿವರಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಂಯು ಕುಮಾರಿ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಎಸ್.ಆರ್ .ರಮೇಶ್ ಹಾಗೂ ಸೂಕ್ಷ್ಮ ಜೀವ ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಸ್ಪಂದನಾ ಎನ್. ಉಪಸ್ಥಿತರಿದ್ದರು. ವಿಭಾಗದ ಸಹಾಯಕ ಪ್ರಾಧ್ಯಾಪಕ ಶ್ರೀಜಾ ಕೆ., ಜೂಹಾ ಅಫ್ನಾ ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಕಲಾಪೋಷಕ ರವಿಗೌಡರಿಗೆ ಭಾವನಮನ, ಪ್ರಶಸ್ತಿ ಸ್ಥಾಪನೆಗೆ ಸಲಹೆ

ಮೈಸೂರು, ನ.17–ನಗರದ ಎಂಜಿನಿಯರುಗಳ ಸಂಸ್ಥೆಯ ಸಭಾಂಗಣದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಲಾಪೋಷಕ ರವಿಗೌಡ ಅವರಿಗೆ ಭಾವನಮನ ಸಲ್ಲಿಸಲಾಯಿತು.

ರವಿಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿ, ರವಿಗೌಡರು ಯಾವುದೇ ಪ್ರತಿಫಲ ಬಯಸದೇ ಎಲೆಮರೆಯ ಕಾಯಿಯಂತೆ ಇದ್ದುಕೊಂಡು ಜಿಲ್ಲೆಯ ಕಲಾವಿದರಿಗೂ ಅದರಲ್ಲೂ ಗ್ರಾಮೀಣ ಪ್ರದೇಶದ ಜಾನಪದ ಕಲಾವಿದರಿಗೆ ಆದಿವಾಸಿ ಬುಡಕಟ್ಟು ಜನಾಂಗದ ಕಲಾವಿದರಿಗೆ ನೆರವಾಗುತ್ತಿದ್ದರು. ಅವರ ಹೆಸರು ಚಿರಸ್ಥಾಯಿಯಾಗಿರಬೇಕಾದರೆ ಪ್ರಶಸ್ತಿ ಸ್ಥಾಪಿಸಿ, ಕಲಾವಿದರು, ಕಲಾ ಪೋಷಕರು ಸೇರಿದಂತೆ ಗಣನೀಯ ಸೇವೆ ಸಲ್ಲಿಸುತ್ತಿರುವವರಿಗೆ ನೀಡಬೇಕು ಎಂದು ಸಲಹೆ ಮಾಡಿದರು.


ಮೈಸೂರಿನ ಎಂಜಿನಿಯರುಗಳ ಸಂಸ್ಥೆಯ ಸಭಾಂಗಣದಲ್ಲಿ ಕಲಾಪೋಷಕ ರವಿಗೌಡ ಅವರಿಗೆ ಭಾವನಮನ ಸಲ್ಲಿಸಲಾಯಿತು. ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್, ವಿಭಾಗೀಯ ಕಾರ್ಯದರ್ಶಿ ಕಾವೇರಿ ಪ್ರಕಾಶ್, ಗೀತಾ ಶ್ರೀಧರ್, ಪನ್ನಗ ವಿಜಯಕುಮಾರ್, ಬೆಸೂರು ಮೋಹನ ಪಾಳೇಗಾರ್ ಇದ್ದಾರೆ.

ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮಾತನಾಡಿ, ರವಿಗೌಡರ ನೆನಪಿನಲ್ಲಿ ಪ್ರಶಸ್ತಿ ಸ್ಥಾಪನೆಗೆ ನೆರವಾಗುವುದಾಗಿ ಹೇಳಿದರು.

ಜಿಲ್ಲಾ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್ ಮಾತನಾಡಿ, ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ದೇಸಿ ಸಂಭ್ರಮ, ರಮ್ಮನಹಳ್ಳಿ ಸಂತ ಜೋಸೆಫರ ಮಹಿಳಾ ಕಾಲೇಜಿನಲ್ಲಿ ನಡೆದ ಜಾನಪದ ಸಂಸ್ಥಾಪನಾ ದಿನಾಚರಣೆ, ಹುಣಸೂರಿನ ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ನಡೆದ ಬುಡಕಟ್ಟು ಜನಪದ ದಿನಾಚರಣೆಯಲ್ಲಿ ರವಿಗೌಡರು ಸಕ್ರಿಯವಾಗಿ ಪಾಲ್ಗೊಂಡಿದ್ದರು. ಕಲಾವಿದರಿಗೆ ಸ್ವಯಂಸ್ಫೂರ್ತಿಯಿಂದ ತಮ್ಮ ಕೈಲಾದ ನೆರವು ನೀಡುತ್ತಿದ್ದರು. ಇವತ್ತು ಸಾಕಷ್ಟು ಕಲಾವಿದರಿಗೆ ವೇದಿಕೆ ಸಿಗಲು ರವಿಗೌಡ ಅವರೇ ಕಾರಣ ಎಂದು ಸ್ಮರಿಸಿದರು.

ಅರಣ್ಯ ವಸತಿ ಮತ್ತು ವಿಹಾರಧಾಮ ಸಂಸ್ಥೆ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ ಮಾತನಾಡಿದರು. ಕಜಾಪ ವಿಭಾಗೀಯ ಸಂಚಾಲಕಿ ಡಾ.ಕಾವೇರಿ ಪ್ರಕಾಶ್, ಪದಾಧಿಕಾರಿಗಳಾದ ಬೆಸೂರು ಮೋಹನಪಾಳೇಗಾರ್, ಜಿ.ರವಿಶಂಕರ್, ಗಾಯಕಿಯರಾದ ಪನ್ನಗ ವಿಜಯಕುಮಾರ್, ಗೀತಾ ಶ್ರೀಧರ್ ಮೊದಲಾದವರು ಇದ್ದರು. ಸುಧೀಂದ್ರ ನಿರೂಪಿಸಿದರು. ಜಿಲ್ಲೆಯ ವಿವಿಧೆಡೆಯಿಂದ ಬಂದಿದ್ದ ಕಲಾವಿದರು ಗೀತಗಾಯನದ ಮೂಲಕವು ರವಿಗೌಡರಿಗೆ ಶ್ರದ್ಧಾಂಜಲಿ ಅರ್ಪಿಸಿದರು.

ಭಕ್ತ ಕನಕದಾಸರ ಸ್ತಬ್ಧಚಿತ್ರಗಳ ತಯಾರಿ ವೀಕ್ಷಣೆ


ಮೈಸೂರಿನಲ್ಲಿ ನ.18ರಂದು ನಡೆಯಲಿರುವ 537ನೇ ಸಂತ ಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವ ಭವ್ಯ ಮೆರವಣಿಗೆಂಯ ಸ್ತಬ್ಧ ಚಿತ್ರಗಳ ತಯಾರಿ ಟೌನ್‌ಹಾಲ್‌ನಲ್ಲಿ ಭರದಿಂದ ಸಾಗುತ್ತಿದ್ದು, ಸಮಿತಿಯ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ವೀಕ್ಷಿಸಿದರು. ಈ ವೇಳೆ ಸಂಘಟನಾ ಕಾರ್ಯದರ್ಶಿಗಳಾದ ವಿಶ್ವನಾಥ್ (ವಿಶ್ವ), ದೀಪಕ್ ಪುಟ್ಟಸ್ವಾಮಿ, ಕಂಸಾಳೆ ರವಿ, ಮಹೇಶ್ ಉಪಸ್ಥಿತರಿದ್ದರು.

ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ


ಮೈಸೂರು ತಾಲೂಕಿನ ಡಿಎಂಜಿ ಹಳ್ಳಿ ಅರಿವು ಕೇಂದ್ರದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಆಚರಿಸಲಾಯಿತು. ಈ ವೇಳೆ ಪಂಚಾಯಿತಿ ಸದಸ್ಯ ಭಗವಂತ ಸ್ವಾಮಿ, ಸಿದ್ದಯ್ಯ, ಗ್ರಂಥಪಾಲಕ ಪುಟ್ಟೇಗೌಡ ಇನ್ನಿತರರಿದ್ದರು.

ಸರ್ಕಾರಿ ಶಾಲೆಯಲ್ಲಿ ಮಕ್ಕಳ ದಿನಾಚರಣೆ


ಮೈಸೂರಿನ ಕುವೆಂಪುನಗರದ ಸರ್ಕಾರಿ ಶಾಲೆಯಲ್ಲಿ ಗಿಡ ನೆಡುವ ಮೂಲಕ ಎಚ್.ವಿ.ರಾಜೀವ್ ಸ್ನೇಹ ಬಳಗದಿಂದ ಮಕ್ಕಳ ದಿನ ಆಚರಿಸಲಾಯಿತು. ಈ ವೇಳೆ ಹೆಚ್.ವಿ.ರಾಜೀವ್, ಆರ್.ಕುಮಾರ್, ಶಿಕ್ಷಕ ವೃಂದದವರು, ಮಕ್ಕಳು ಉಪಸ್ಥಿತರಿದ್ದರು.

ಅಂತರ ಕಾಲೇಜು ಪಂದ್ಯಾವಳಿಗಳಲ್ಲಿ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಸಾಧನೆ

ಮೈಸೂರು,ನ.17–ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಅಂತರ ಕಾಲೇಜು ಪಂದ್ಯಾವಳಿಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದಾರೆ.

ಮೈಸೂರು ಸಿಟಿ ಇಂಟರ್ ಕಾಲೇಜಿಯೇಟ್ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಅಥ್ಲೆಟಿಕ್ ಮೀಟ್‌ನಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಗಳಲ್ಲಿ ನಿತಿನ್ ಎಂ.ಎನ್ ಎರಡು ಚಿನ್ನದ ಪದಕಗಳನ್ನು ಪಡೆದಿದ್ದಾರೆ.

ಮೈಸೂರು ಸಿಟಿ ಇಂಟರ್ ಕಾಲೇಜಿಯೇಟ್ ಅಥ್ಲೆಟಿಕ್ ಮೀಟ್‌ನಲ್ಲಿ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಧನುಷ್ ಜಿ. ಕಂಚಿನ ಪದಕ, ವೇಟ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ರಾನ್ಸಿ ಎಸ್. ಕಂಚಿನ ಪದಕ, ಮೈಸೂರು ನಗರದ ಅಂತರ ಕಾಲೇಜು ಕರಾಟೆ ಸ್ಪರ್ಧೆಯ ಮಹಿಳಾ ವಿಭಾಗದೊಳಗೆ ವಿದ್ಯಾರ್ಥಿನಿ ಮಂದಾರ ಪಿ.ಯು ಕಂಚಿನ ಪದಕ ಪಡೆದರು. ತೇಜಸ್ ಬಿ.ಆರ್., ಮೈಸೂರು ನಗರದ ಕಾಲೇಜು ಕರಾಟೆ (ಕುಮಿಟೆ) ಸ್ಪರ್ಧೆಯಲ್ಲಿ ಒಂದು ಕಂಚಿನ ಪದಕಗಳನ್ನು ಪಡೆದರು. ಮೈಸೂರು ವಿಶ್ವವಿದ್ಯಾಲಯದ ಅಂತರಕಾಲೇಜು ಸ್ಪರ್ಧೆಗಳಲ್ಲಿ ಕಿಕ್ ಬಾಕ್ಸಿಂಗ್ (ಪಾಯಿಂಟ್ ಫೈಟ್)ನಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ವಿದ್ಯಾರ್ಥಿಯಾಗಿರುವ ಚಂದನ್ ಟಿ.ಪಿ., ಮೈಸೂರು ನಗರ ಅಂತರಕಾಲೇಜು ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಕರಾಟೆಯಲ್ಲಿ ಎರಡು ಕಂಚಿನ ಪದಕ ಮತ್ತು ಕರಾಟೆ (ಕುಮಿಟೆ) ನಲ್ಲಿ ಒಂದು ಚಿನ್ನದ ಪದಕವನ್ನು ಗಳಿಸಿದ್ದಾರೆ. ವಿದ್ಯಾರ್ಥಿ ರಾಕೇಶ್ ಚೌಹಾಣ್ ಮೈಸೂರು ವಿಶ್ವವಿದ್ಯಾನಿಲಯ ಅಂತರಕಾಲೇಜು ಕಿಕ್ ಬಾಕ್ಸಿಂಗ್ (ಪಾಯಿಂಟ್ ಫೈಟ್) ಸ್ಪರ್ಧೆಗಳಲ್ಲಿ ಬೆಳ್ಳಿ ಪದಕ ಪಡೆದರು. ಮೈಸೂರು ವಿಶ್ವವಿದ್ಯಾನಿಲಯ ಅಂತರಕಾಲೇಜು ಅತ್ಯುತ್ತಮ ಫಿಸಿಕ್ ಸ್ಪರ್ಧೆಯಲ್ಲಿ ವಿದ್ಯಾರ್ಥಿ ಕುಮಾರಸ್ವಾಮಿ ಗೌಡ ಸಿ.ಆರ್. ಕಂಚಿನ ಪದಕ ಪಡೆದರು. 2024–25ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ಇಂಟರ್ ಕಾಲೇಜಿಯೇಟ್ ಜಿಮ್ನಾಸ್ಟಿಕ್ಸ್ ಸ್ಪರ್ಧೆಯಲ್ಲಿ ವಿದ್ಯಾರ್ಥಿನಿ ಪ್ರಜ್ಞಾ ಜೆ. ಒಂದು ಬೆಳ್ಳಿ ಪದಕ ಮತ್ತು ಒಂದು ಕಂಚಿನ ಪದಕವನ್ನು ಗಳಿಸಿದ್ದಾರೆ.


ಅಂತರ ಕಾಲೇಜು ಪಂದ್ಯಾವಳಿಗಳಲ್ಲಿ ಸಾಧನೆ ಮಾಡಿದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳನ್ನು, ಸಂಸ್ಥೆ ವತಿಯಿಂದ ಅಭಿನಂದಿಸಲಾಯಿತು.

ಗುತ್ತಿಗೆ ಆಧಾರದ ಮೇಲೆ ವಿವಿಧ ಹುದ್ದೆಗಳ ನೇಮಕಕ್ಕೆ ನೇರ ಸಂದರ್ಶನ

ಮೈಸೂರು, ನ17–ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿನ ವಿವಿಧ ಕಾರ್ಯಕ್ರಮಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ 2024–25ನೇ ಸಾಲಿಗೆ ನೇಮಕ ಮಾಡಿಕೊಳ್ಳಲು ನೇರ ಸಂದರ್ಶನವನ್ನು ಡಿ.2ರಂದು ಬೆಳಿಗ್ಗೆ 10:30 ಗಂಟೆಯಿಂದ ಸಂಜೆ 4:30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಆವರಣದಲ್ಲಿ ಸದಸ್ಯ ಕಾರ್ಯದರ್ಶಿ ಸಮ್ಮುಖದಲ್ಲಿ ಏರ್ಪಡಿಸಲಾಗಿದೆ.

ಮಕ್ಕಳ ತಜ್ಞರು (01), ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು (01), ಅರವಳಿಕೆ ತಜ್ಞರು (03), ಮನೋವೈದ್ಯರು (01), ಎಸ್‌ಎನ್‌ಸಿಯು ವೈದ್ಯರು (01), ಎನ್.ಆರ್.ಸಿ ವೈದ್ಯರು (01), ವೈದ್ಯಾಧಿಕಾರಿಗಳು (ಐಸಿಯು/ಹೆಚ್‌ಡಿಯು) (14), ರಕ್ತನಿಧಿ ವೈದ್ಯಾಧಿಕಾರಿಗಳು (01), ಆರ್‌ಬಿಎಸ್‌ಕೆ ವೈದ್ಯರು (02), ನೇತ್ರ ಸಹಾಯಕರು (04), ಮನೋ ಸಾಮಾಜಿಕ ಕಾರ್ಯಕರ್ತರು (01), ಕಮ್ಯೂನಿಟಿ ಸ್ಟಾಫ್‌ನರ್ಸ್ (01), ಶುಶ್ರೂಷಕರು (ಹೆಚ್.ಡಿಯು/ಐ.ಸಿ.ಯು)03, ಶುಶ್ರೂಷಕರು (ಆರ್‌ಬಿಎಸ್‌ಕೆ) 01, ಶುಶ್ರೂಷಕರು (ಎನ್‌ಬಿಎಸ್‌ಯು–27 ಮತ್ತು ಎಸ್‌ಎನ್‌ಸಿಯು –01), ಜಿಲ್ಲಾ ಆಶಾ ಮೆಂಟರ್(01), ತಾಲೂಕು ಆಶಾ ಮೆಂಟರ್ (01), ಅರವಳಿಕೆ ತಜ್ಞರು (NUHM)01, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು (NUHM & ಆಯುಷ್ಮತಿ ಕಾರ್ನರ್) 02, ಶಸ್ತ್ರಚಿಕಿತ್ಸಕರು (ಆಯುಷ್ಮತಿ ಕಾರ್ನರ್) 01, ಪೂರ್ಣಕಾಲಿಕ ವೈದ್ಯರು (NUHM) 04, ವೈದ್ಯರು (ನಮ್ಮ ಕ್ಲಿನಿಕ್) 03, ಶುಶ್ರೂಷಕಿಯರು (ಮಹಿಳಾ ಅಭ್ಯರ್ಥಿಗಳು ಮಾತ್ರ) (NU HM) 02, ಔಷಧಿ ವಿತರಕರು (NU HM) 02, ಪ್ರಯೋಗ ಶಾಲಾ ತಂತ್ರಜ್ಞರು (NUHM) 01, ಆರೋಗ್ಯ ನಿರೀಕ್ಷಣಾಧಿಕಾರಿಗಳು (ನಮ್ಮ ಕ್ಲಿನಿಕ್) 09, ಫಿಜಿಷಿಯನ್(ಎನ್,ಪಿ–ಎನ್‌ಸಿಡಿ) 01, ಫಿಜಿಷಿಯನ್ (ಎನ್‌ಪಿಹೆಚ್‌ಸಿಇ) 01, ಫಿಜಿಷಿಯನ್ (ಎನ್‌ಪಿಪಿ,ಸಿ) 01, ವೈದ್ಯಾಧಿಕಾರಿಗಳು (ಎನ್‌ಪಿ –ಎನ್‌ಸಿಡಿ) 12, ಶುಶ್ರೂಷಕರು (ಎನ್‌ಪಿಪಿಸಿ) 02, ಶುಶ್ರೂಷಕರು (ಎನ್‌ಪಿ, ಹೆಚ್.ಸಿಇ) 01, ಬ್ಲಾಕ್ ಹೆಲ್ತ್ ಪಬ್ಲಿಕ್ ಎಪಿಡಮಾಲಜಿಸ್ಟ್ 03, ಬ್ಲಾಕ್ ಹೆಲ್ತ್ ಪಬ್ಲಿಕ್ ಲ್ಯಾಬ್–ಪ್ರಯೋಗಶಾಲಾ ತಂತ್ರಜ್ಞರು (01), ವೈದ್ಯರು (ಎನ್‌ಟಿಇಪಿ) (01), ಹಿರಿಯ ವೈದ್ಯರು (ಎನ್‌ಟಿಇಪಿ) 01, ಟಿಬಿಹೆಚ್‌ವಿ ((ಎನ್‌ಟಿಇಪಿ) 01 ಸೇರಿ ಒಟ್ಟು 115 ಹುದ್ದೆಗಳಿಗೆ ಆಸಕ್ತಿಯುಳ್ಳ ಅರ್ಹ ಅಭ್ಯರ್ಥಿಗಳು ಎಲ್ಲಾ ದಾಖಲಾತಿಗಳೊಂದಿಗೆ ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಸಂಪರ್ಕಿಬಹುದು.

ವಿದೇಶಿ ವ್ಯಾಸಂಗ ವೇತನಕ್ಕಾಗಿ ಅರ್ಜಿ

ಮೈಸೂರು: 2024–25ನೇ ಸಾಲಿನಲ್ಲಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪಿಹೆಚ್‌ಡಿ ಅಧ್ಯಯನ ಮಾಡುವ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ) ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದ್ದು, ಡಿ.5ರೊಳಗೆ ಅರ್ಜಿ ಸಲ್ಲಿಸಬೇಕು. https://bcwd. karnataka. gov.in, ಸಹಾಯವಾಣಿ ಸಂಖ್ಯೆ 8050 770004 ಅನ್ನು ಸಂಪರ್ಕಿಸಬಹುದು.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ತುಳಸಿ ಪೂಜೆ



ಮೈಸೂರು, ನ.17– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಯದುಗಿರಿ ಯತಿರಾಜ ಇದರ ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ತುಳಸಿ ಪೂಜೆಯನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ದೇವಸ್ಥಾನವನ್ನು ತಳಿರು ತೋರಣಗಳಿಂದ ಶೃಂಗಾರಗೊಳಿಸಲಾಗಿತ್ತು. ಸಂಜೆ ದೇವಸ್ಥಾನದ ಮುಖ್ಯಸ್ಥ ವಿದ್ವಾನ್ ಕೆ.ಆರ್. ಯೋಗನರಸಿಂಹನ್ (ಮುರುಳಿ ಅಯ್ಯಂಗಾರ್) ಇವರ ನೇತೃತ್ವದಲ್ಲಿ ಪೂಜಾ ವಿಧಿ–ವಿಧಾನಗಳು ನೆರವೇರಿದವು. ತದನಂತರ ಸ್ವಾಮಿಗೆ ನೈವೇದ್ಯ, ಮಹಾಮಂಗಳಾರತಿ, ಶಾತ್ತುಮೊರೈ ಹಾಗೂ ತೀರ್ಥ ಪ್ರಸಾದವನ್ನು ಬಂದ ಭಕ್ತಾದಿಗಳಿಗೆ ವಿತರಿಸಲಾಯಿತು. ಈ ವೇಳೆ ಪ್ರಧಾನ ಅರ್ಚಕರಾದ ತಾತಾಚಾರ್, ವೀರರಾಘವನ್ ಮತ್ತಿತರರಿದ್ದರು.

ಹುಟ್ಟುಹಬ್ಬದ ಅಭಿನಂದನೆ...


ಹೆರಿಟೇಜ್ ಹೋಟೆಲ್ ಮಾಲೀಕ ಬಾಬಣ್ಣ ಅವರಿಗೆ ರವಿಕುಮಾರ್ ಡೆಲ್ಲಿ, ಶ್ರೀಧರ, ಕೃಷ್ಣ, ದೀಪು, ಯೋಗೇಶ್, ರಾಮಚಂದ್ರ, ಸುಖೇಶ ಅವರುಗಳು ಹುಟ್ಟುಹಬ್ಬದ ಅಭಿನಂದನೆ ಸಲ್ಲಿಸಿದರು.

27ನೇ ಬೆಂಗಳೂರು ಟೆಕ್ ಶೃಂಗಸಭೆಗೆ ಬೆಂಗಳೂರು ಅರಮನೆ ಮೈದಾನ ಸಜ್ಜು

ಬೆಂಗಳೂರು, ನ.17– ಕರ್ನಾಟಕ ಸರ್ಕಾರದ ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಬಿಟಿ ಇಲಾಖೆಯು ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ಸ್ ಆಫ್ ಇಂಡಿಯಾ (ಎಸ್‌ಟಿಪಿಐ) ಬೆಂಗಳೂರು ಸಹಭಾಗಿತ್ವದೊಂದಿಗೆ ನ.19 ರಿಂದ 21 ರವರೆಗೆ ಆಯೋಜಿಸಿರುವ ಏಷ್ಯಾದ ಅತಿದೊಡ್ಡ ಟೆಕ್ ಶೃಂಗಸಭೆ– 27ನೇ ಬೆಂಗಳೂರು ಟೆಕ್ ಶೃಂಗಸಭೆಗೆ ಬೆಂಗಳೂರಿನ ಅರಮನೆ ಮೈದಾನ ಸಜ್ಜುಗೊಂಡಿದೆ.

ಬೆಂಗಳೂರು ಅರಮನೆ ಮೈದಾನದಲ್ಲಿ ನಡೆಯಲಿರುವ ಈ ಶೃಂಗಸಭೆ ಕುರಿತ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಮಾತನಾಡಿ, ಅನ್ಬೌಂಡ್ ಎಂಬ ಥೀಮ್ ನಡಿ ಆಯೋಜಿಸಿರುವ ಬೆಂಗಳೂರು ಟೆಕ್ ಶೃಂಗಸಭೆಯಲ್ಲಿ ಸ್ಟಾರ್ಟ್‌ಅಪ್‌ಗಳ ಸರ್ವತೋಮುಖ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡು ಜಾಗತಿಕ ಪಾಲುದಾರಿಕೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ತಿಳಿಸಿದರು.


ನವೆಂಬರ್ 19ರಿಂದ 21ರವರೆಗೆ ಆಯೋಜಿಸಿರುವ ಏಷ್ಯಾದ ಅತಿದೊಡ್ಡ ಟೆಕ್ ಶೃಂಗಸಭೆ– 27ನೇ ಬೆಂಗಳೂರು ಟೆಕ್ ಶೃಂಗಸಭೆಗೆ ಬೆಂಗಳೂರಿನ ಅರಮನೆ ಮೈದಾನ ಸಜ್ಜುಗೊಂಡಿರುವ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಮತ್ತು ಗ್ರಾಮೀಣಾಭಿವೃದ್ಧಿ–ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದರು.



ತಾಂತ್ರಿಕ ಉತ್ಕೃಷ್ಟತೆ, ನಾವೀನ್ಯತೆ ಮತ್ತು ಬೆಳವಣಿಗೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದು, ಸ್ಟಾರ್ಟ್‌ಅಪ್‌ಗಳ ಬೆಳವಣಿಗೆ ಮೂಲಕ ಕರ್ನಾಟಕದ ಹಿರಿಮೆ ಹೆಚ್ಚಿಸಲು ಆಯೋಜಿಸಿರುವ ಇಂತಹ ಅದ್ಭುತ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಭವಿಷ್ಯದ ಟೆಕ್ ಕರ್ನಾಟಕವನ್ನು ರೂಪಿಸಲು ಕೈಜೋಡಿಸಬೇಕೆಂದು ಕೋರುತ್ತೇನೆ ಎಂದು ತಿಳಿಸಿದರು.

ಟೆಕ್ ಶೃಂಗಸಭೆ–2024 ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸಚಿವ ಪ್ರಿಯಾಂಕ್ ಖರ್ಗೆ, ಜರ್ಮನಿಯ ಆರ್ಥಿಕ ವ್ಯವಹಾರ ಮತ್ತು ಫೆಡರಲ್ ಸಚಿವಾಲಯದ ಸ್ಟಾರ್ಟ್‌ಅಪ್‌ಗಳ ಆಯುಕ್ತ ಡಾ.ಅನ್ನಾ ಕ್ರಿಸ್ಟ್‌ಮನ್ ಮತ್ತು ಫ್ರಾನ್ಸ್‌ನ ಆರ್ಥಿಕ ಅಭಿವೃದ್ಧಿಯ ರಿಕವರಿ ವಿಭಾಗದ ಉಪಾಧ್ಯಕ್ಷೆ ಅಲೆಕ್ಸಾಂಡ್ರಾ ಡಬ್ಲಾಂಚೆ, ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಸಂತೋಷ್ ಕುಮಾರ್, ಸ್ವಿಗ್ಗಿ ಸಂಸ್ಥೆಯ ಸಹ–ಸ್ಥಾಪಕರು ಮತ್ತು ಸಿಇಒ ಶ್ರೀಹರ್ಷ ಮೆಜೆಟಿ, ಬಯೋಕಾನ್‌ನ ಕಾರ್ಯಕಾರಿ ಅಧ್ಯಕ್ಷರು ಮತ್ತು ಸಂಸ್ಥಾಪಕ ಡಾ. ಕಿರಣ್ ಮಜುಂದಾರ್–ಶಾ ಸೇರಿದಂತೆ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಪ್ರಮುಖ ಗಣ್ಯರು ಭಾಗವಹಿಸಲಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಸ್ವಿಟ್ಜರ್ಲೆಂಡ್ ಮತ್ತು ಫಿನ್‌ಲ್ಯಾಂಡ್‌ನೊಂದಿಗೆ ಎರಡು ತಿಳಿವಳಿಕೆ ಪತ್ರಗಳಿಗೆ ಸಹಿ ಮತ್ತು ಶಾರ್ಜಾ ಇನ್ನೋವೇಶನ್ ಅಥಾರಿಟಿ (ಯುಎಇ) ಯೊಂದಿಗೆ ಆಳವಾದ ಜಾಗತಿಕ ಸಹಯೋಗವನ್ನು ಉತ್ತೇಜಿಸುವ ಉದ್ದೇಶದ ಪತ್ರಕ್ಕೆ ಸಹಿ ಹಾಕಲಾಗುತ್ತದೆ.

ಟೆಕ್ ಶೃಂಗಸಭೆಯಲ್ಲಿ ಆಸ್ಟ್ರೇಲಿಯಾ, ಯುಕೆ, ಫ್ರಾನ್ಸ್, ಆಸ್ಟ್ರಿಯಾ, ಇಯು, ಡೆನ್ಮಾರ್ಕ್, ಫಿನ್‌ಲ್ಯಾಂಡ್, ಪೋಲೆಂಡ್, ಜಪಾನ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಇಸ್ರೇಲ್ ಮತ್ತು ಯುಎಸ್‌ಎ ಸೇರಿದಂತೆ 15 ಕ್ಕೂ ಹೆಚ್ಚು ದೇಶಗಳ ಉನ್ನತ ಮಟ್ಟದ ನಿಯೋಗಗಳು, ಸರ್ಕಾರಿ ಅಧಿಕಾರಿಗಳು, ಉದ್ಯಮದ ಮುಖಂಡರು, ನವೋದ್ಯಮಿಗಳು ಭಾಗವಹಿಸಲಿದ್ದಾರೆ.

ದೇಶ – ವಿದೇಶ

ಇಸ್ರೇಲ್ ಪ್ರಧಾನಿ ಹತ್ಯೆಗೆ ಮತ್ತೆ ಯತ್ನ: ನೆತನ್ಯಾಹು ನಿವಾಸದ ಮೇಲೆ ಬಾಂಬ್ ದಾಳಿ



ಇಸ್ರೇಲ್: ಇಸ್ರೇಲ್ ಮತ್ತು ಹಿಜ್ಬುಲ್ಲಾ ನಡುವಿನ ಕಾಳಗ ಮತ್ತಷ್ಟು ತಾರಕಕ್ಕೇರಿದ್ದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ಮನೆ ಮೇಲೆ ಹಿಜ್ಬುಲ್ಲಾ ಮತ್ತೊಮ್ಮೆ ದಾಳಿ ನಡೆಸಿದೆ. ಕೈಸ್ರಾದಲ್ಲಿರುವ ನೆತನ್ಯಾಹು ಅವರ ನಿವಾಸದ ಬಳಿ 2 ರಾಕೆಟ್‌ಗಳು ಬಿದ್ದಿದ್ದು, ದಾಳಿ ವೇಳೆ ನೆತನ್ಯಾಹು ಅಥವಾ ಅವರ ಕುಟುಂಬವು ನಿವಾಸದಲ್ಲಿ ಇರಲಿಲ್ಲ. ಯಾವುದೇ ರೀತಿಯ ಹಾನಿ ಸಂಭವಿಸಿಲ್ಲ. ಈ ಸಂಬಂಧ ಪ್ರತಿಕ್ರಿಯಿಸಿರುವ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್, ಎಲ್ಲ ಮಿತಿಗಳನ್ನು ಮೀರಿದ ಕೃತ್ಯವಿದು. ಇದನ್ನು ಸಹಿಸಲಾಗದು ಎಂದು ಹೇಳಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಪ್ರಧಾನಿ ನೆತನ್ಯಾಹು ಅವರ ಹತ್ಯೆಗೆ ಯತ್ನಿಸುತ್ತಿರುವ ಇರಾನ್ ಹಾಗೂ ಅದರ ಬೆಂಬಲಿತ ಪಡೆಗಳು ಈ ಕೃತ್ಯವೆಸಗಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಇಸ್ರೇಲಿ ಅಧ್ಯಕ್ಷ ಐಸಾಕ್ ಹೆರ್ಜೋಗ್ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದು, ಸಾರ್ವಜನಿಕ ವಲಯದಲ್ಲಿ ಹಿಂಸಾಚಾರ ಹೆಚ್ಚಳವಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ, ಇಂತಹ ಕೃತ್ಯ ಮುಂದುವರಿದರೆ ಸುಮ್ಮನಿರೋದಿಲ್ಲ ವಿರುದ್ಧ ವಿರೋಧಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

4 ಚುನಾವಣಾ ರ್‍ಯಾಲಿಗಳನ್ನು ದಿಢೀರ್ ರದ್ದುಗೊಳಿಸಿದ ಅಮಿತ್ ಶಾ



ಮಹಾರಾಷ್ಟ್ರ: ಮಣಿಪುರದಲ್ಲಿ ಅಸ್ಥಿರ ಪರಿಸ್ಥಿತಿಯ ನಡುವೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮಹಾರಾಷ್ಟ್ರದಲ್ಲಿ ತಮ್ಮ ಚುನಾವಣಾ ರ್‍ಯಾಲಿಗಳನ್ನು ರದ್ದುಗೊಳಿಸಿದ್ದಾರೆ. ಮೂಲಗಳ ಪ್ರಕಾರ, ಈಶಾನ್ಯ ರಾಜ್ಯದ ಪರಿಸ್ಥಿತಿಯನ್ನು ಪರಿಶೀಲಿಸಲು ಗೃಹ ಸಚಿವರು ಸಭೆ ನಡೆಸುವ ಸಾಧ್ಯತೆ ಇದೆ. ಇನ್ನು ಮಣಿಪುರದಲ್ಲಿ ನಡೆಯುತ್ತಿರುವ ಉದ್ವಿಗ್ನತೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರೀಯ ಮೀಸಲು ಪೊಲೀಸ್ ಪಡೆ ಮಹಾನಿರ್ದೇಶಕ ಅನೀಶ್ ದಯಾಳ್ ಸಿಂಗ್ ಅವರು ಮಣಿಪುರಕ್ಕೆ ಭೇಟಿ ನೀಡಲಿದ್ದಾರೆ ಎಂದು ಹೇಳಲಾಗುತ್ತಿದೆ.

ಶಾ ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ವಿದರ್ಭ ಪ್ರದೇಶದಲ್ಲಿ 4 ರ್‍ಯಾಲಿಗಳನ್ನು ನಡೆಸಬೇಕಿತ್ತು. ಅವರ ಸ್ಥಾನದಲ್ಲಿ ಈಗ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಮಾಜಿ ಸಚಿವೆ ಸ್ಮೃತಿ ಇರಾನಿ ರ್‍ಯಾಲಿಗಳಲ್ಲಿ ಭಾಗವಹಿಸಿದ್ದಾರೆ. ವಾಸ್ತವವಾಗಿ, ಮಣಿಪುರದ ಜಿರಿಬಾಮ್‌ನಿಂದ ಸೋಮವಾರದಿಂದ ನಾಪತ್ತೆಯಾಗಿದ್ದ 6 ಜನರ ಪೈಕಿ ಮಹಿಳೆ ಮತ್ತು ಇಬ್ಬರು ಮಕ್ಕಳ ಶವಗಳು ನದಿಯಲ್ಲಿ ತೇಲುತ್ತಿರುವುದು ಕಂಡುಬಂದಿದೆ. ಇದೀಗ ಭಾನುವಾರ ಬೆಳಗ್ಗೆ ಇಲ್ಲಿ ಮತ್ತೊಬ್ಬ ಮಹಿಳೆಯ ಶವ ಪತ್ತೆಯಾಗಿದೆ. ಮಣಿಪುರದಲ್ಲಿ ಕೋಪಗೊಂಡ ಗುಂಪು ಶನಿವಾರ ರಾತ್ರಿ ಇಂಫಾಲ್ ಕಣಿವೆಯ ವಿವಿಧ ಜಿಲ್ಲೆಗಳಲ್ಲಿ ಮೂವರು ಬಿಜೆಪಿ ಶಾಸಕರು ಮತ್ತು ಒಬ್ಬ ಕಾಂಗ್ರೆಸ್ ಶಾಸಕರ ಮನೆಗಳಿಗೆ ಬೆಂಕಿ ಹಚ್ಚಿದೆ.

ಸಂವಿಧಾನದಿಂದ 'ಜಾತ್ಯತೀತ' ಅಳಿಸಲು ಪ್ರಸ್ತಾವ: ಶೀಘ್ರವೇ ಬಾಂಗ್ಲಾದೇಶ 'ಇಸ್ಲಾಮಿಕ್' ರಾಷ್ಟ್ರ?

ಢಾಕಾ: ಬಾಂಗ್ಲಾದೇಶದಲ್ಲಿ ಶೇ.90ರಷ್ಟು ಜನಸಂಖ್ಯೆ ಮುಸ್ಲಿಮರಿದ್ದಾರೆ. ಹಾಗಾಗಿ ಸಂವಿಧಾನದಿಂದ ಜಾತ್ಯತೀತ ಎಂಬ ಪದ ತೆಗೆದು ಹಾಕಿರಿ. ಬಂಗಾಬಂಧು ಶೇಖ್ ಮುಜಿಬುರ್ ರೆಹಮಾನ್ ಅವರಿಗೆ ರಾಷ್ಟ್ರಪಿತ ಎಂದು ನೀಡಲಾಗಿರುವ ಗೌರವವನ್ನು ತೆಗೆದುಹಾಕಬೇಕು ಎಂದು ಬಾಂಗ್ಲಾದೇಶದ ಅಟಾರ್ನಿ ಜನರಲ್ ಮೊಹಮ್ಮದ್ ಅಸಾದುಜ್ಜಾಮನ್ ಕೋರ್ಟ್‌ನಲ್ಲಿ ಸಂವಿಧಾನಕ್ಕೆ 15ನೇ ತಿದ್ದುಪಡಿ ಸಂಬಂಧ ವಿಚಾರಣೆ ವೇಳೆ ತಮ್ಮ ಅಭಿಪ್ರಾಯ ಮಂಡಿಸಿದ್ದಾರೆ. ಈ ಬಗ್ಗೆ ವರದಿ ಮಾಡಿರುವ ಸ್ಥಳೀಯ ಮಾಧ್ಯಮಗಳು ಹಾಗೂ ಅಂತಾರಾಷ್ಟ್ರೀಯ ಸುದ್ದಿವಾಹಿನಿಗಳು, ಬಾಂಗ್ಲಾದೇಶವು ಶೀಘ್ರವೇ ಇಸ್ಲಾಮಿಕ್ ರಾಷ್ಟ್ರವಾಗುವ ಸಾಧ್ಯತೆಯಿದೆ ಎಂದು ವಿಶ್ಲೇಷಿಸುತ್ತಿವೆ. ಅಟಾರ್ನಿ ಜನರಲ್ ಮಂಡಿಸಿರುವ ಇಸ್ಲಾಮಿಕ್ ರಾಷ್ಟ್ರದ ಪರಿಕಲ್ಪನೆಗೆ ಮೊಹಮ್ಮದ್ ಯೂನಸ್ ನೇತೃತ್ವದ ಮಧ್ಯಂತರ ಸರಕಾರದ ಬೆಂಬಲವಿದೆ. ಜಮಾತ್–ಇ–ಇಸ್ಲಾಮಿ ಸಂಘಟನೆಯ ಅಜೆಂಡಾವನ್ನು ಸರಕಾರ ಜಾರಿಗೆ ತರಲು ಯತ್ನಿಸುತ್ತಿದೆ ಎಂದು ಕೆಲವು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಕೋರ್ಟ್‌ನಲ್ಲಿ ವಿಚಾರಣೆ ವೇಳೆ ಅಸಾದುಜ್ಜಾಮನ್ ಅವರು, ಈ ಹಿಂದೆ ದೇಶದ ಎಲ್ಲ ವಲಯಗಳಲ್ಲಿ ಅಲ್ಲಾಹು ಬಗ್ಗೆ ಸ್ಥಿರವಾದ ನಂಬಿಕೆ ಹಾಗೂ ವಿಶ್ವಾಸವಿತ್ತು.

ಆಮ್ ಆದ್ಮಿ ಪಕ್ಷಕ್ಕೆ ಹಿರಿಯ ನಾಯಕ ಕೈಲಾಶ್ ಗೆಹ್ಲೋಟ್ ರಾಜೀನಾಮೆ



ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆಗೆ ಇನ್ನು ಕೆಲವೇ ತಿಂಗಳುಗಳಷ್ಟೇ ಬಾಕಿಯಿದ್ದು, ಈ ನಡುವಲ್ಲೇ ಆಮ್ ಆದ್ಮಿ ಪಕ್ಷಕ್ಕೆ ಭಾರಿ ಹಿನ್ನಡೆಯುಂಟಾಗಿದೆ. ಪಕ್ಷದ ಹಿರಿಯ ನಾಯಕ ಕೈಲಾಶ್ ಗೆಹ್ಲೋಟ್ ಅವರು ಪಕ್ಷ ಹಾಗೂ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಕೈಲಾಶ್ ಗೆಹ್ಲೋಟ್ ಅವರು ಗೃಹ, ಸಾರಿಗೆ, ಐಟಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸೇರಿದಂತೆ ದಿಲ್ಲಿ ಸರಕಾರದಲ್ಲಿ ಪ್ರಮುಖ ಖಾತೆಗಳನ್ನು ನಿಭಾಯಿಸುತ್ತಿದ್ದರು. ಗೆಹ್ಲೋಟ್ ತಮ್ಮ ರಾಜೀನಾಮೆ ಪತ್ರದಲ್ಲಿ ಪಕ್ಷದಲ್ಲಿನ ಗಂಭೀರ ಸವಾಲುಗಳನ್ನು ಸೂಚಿಸಿದ್ದಾರೆ. ಇದಲ್ಲದೆ, ಎಎಪಿ ದೆಹಲಿ ಜನರಿಗೆ ನೀಡಿದ್ದ ಅನೇಕ ಭರವಸೆಗಳನ್ನು ಈಡೇರಿಸಿಲ್ಲ ಎಂದು ಉಲ್ಲೇಖಿಸಿದ್ದಾರೆ.

ಎಎಪಿ ಜನರ ಹಕ್ಕುಗಳಿಗಾಗಿ ಹೋರಾಡುವ ಬದಲು ತನ್ನದೇ ಕಾರ್ಯಸೂಚಿಗಾಗಿ ಹೋರಾಡುವುದರಲ್ಲಿ ನಿರತವಾಗಿದೆ. ಇದು ದೆಹಲಿ ಜನರಿಗೆ ಮೂಲಭೂತ ಸೇವೆಗಳನ್ನು ಒದಗಿಸುವ ನಮ್ಮ ಸಾಮರ್ಥ್ಯವನ್ನು ತೀವ್ರವಾಗಿ ದುರ್ಬಲಗೊಳಿಸಿದೆ. ನಾನು ದೆಹಲಿಯ ಜನರಿಗೆ ಸೇವೆ ಸಲ್ಲಿಸುವ ಬದ್ಧತೆಯೊಂದಿಗೆ ನನ್ನ ರಾಜಕೀಯ ಪ್ರಯಾಣವನ್ನು ಪ್ರಾರಂಭಿಸಿದ್ದೇನೆ. ಅದನ್ನು ಮುಂದುವರಿಸಲು ಬಯಸುತ್ತೇನೆ ಎಂದು ತಿಳಿಸಿದ್ದಾರೆ.

ಡೆನ್ಮಾರ್ಕ್‌ನ ವಿಕ್ಟೋರಿಯಾ ಕ್ಜೇರ್‌ಗೆ 2024ರ ವಿಶ್ವ ಸುಂದರಿ ಕಿರೀಟ



ಮೆಕ್ಸಿಕೋ: 2024ರ ಇಂಟರ್‌ನ್ಯಾಷನಲ್ ಮಿಸ್ ಯುನಿವರ್ಸ್ ಸ್ಪರ್ಧೆಯಲ್ಲಿ ವಿಶ್ವ ಸುಂದರಿ ಯಾರೆಂಬುದು ಘೋಷಣೆಯಾಗಿದೆ. ಡೆನ್ಮಾರ್ಕ್‌ನ 21 ವರ್ಷದ ವಿಕ್ಟೋರಿಯಾ ಕ್ಜೇರ್ ವಿಜೇತರಾಗಿ ವಿಶ್ವ ಸುಂದರಿ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಇಂಟರ್‌ನ್ಯಾಷನಲ್ ಮಿಸ್ ಯುನಿವರ್ಸ್ ಸ್ಪರ್ಧೆಯಲ್ಲಿ ಡೆನ್ಮಾರ್ಕ್ ಮೊದಲ ಬಾರಿಗೆ ಕಿರೀಟವನ್ನು ಪಡೆದುಕೊಳ್ಳುವ ಮೂಲಕ ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಮೆಕ್ಸಿಕೋದ ಮರಿಯಾ ಫೆರ್ನಾಂಡಾ ಬೆಲ್ಟ್ರಾನ್ ಮೊದಲ ರನ್ನರ್ ಅಪ್ ಆಗಿ, ನೈಜೀರಿಯಾದ ಸಿನಿದಿಮ್ಮಾ ಅಡೆಟ್ಶಿನಾ ಎರಡನೇ ರನ್ನರ್ ಅಪ್ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಭಾರತವನ್ನು ಪ್ರತಿನಿಧಿಸಿದ್ದ ರಿಯಾ ಸಿಂಘಾ ಅಂತಿಮ ಸುತ್ತಿನಲ್ಲಿ ಟಾಪ್ 12 ಸ್ಥಾನ ಪಡೆಯುವಲ್ಲಿ ವಿಫಲರಾಗಿದರು. ಮೆಕ್ಸಿಕೋ ನಗರದಲ್ಲಿ ನಡೆದ 73ನೇ ವಿಶ್ವ ಸುಂದರಿ ಸ್ಪರ್ಧೆಯಲ್ಲಿ ವಿವಿಧ ದೇಶಗಳಿಂದ 130 ಸುಂದರಿಯರು ಸ್ಪರ್ಧಿಸಿದ್ದರು. ಇದೀಗ 2024ರ ಮಿಸ್ ಯೂನಿವರ್ಸ್ ಇಂಡಿಯಾ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದ ರಿಯಾ ಸಿಂಘಾಗೆ ನಿರಾಶೆಯಾಗಿದೆ.

ಅಬ್ಬೂರು ಗೇಟ್‌ನಲ್ಲಿ ಕಾರಿನ ಮೇಲೆ ಕಾಡಾನೆ ದಾಳಿ



ಸಿದ್ದಾಪುರ ಸಮೀಪದ ಚನ್ನಂಗಿ ಅಬ್ಬೂರು ಗೇಟಿನ ಬಳಿ ಕಾಡಾನೆ ಕಾರಿನ ಮೇಲೆ ದಾಳಿ ನಡೆಸುತ್ತಿರುವುದು.

ಮಡಿಕೇರಿ, ನ.17–ಹಾಡಹಗಲೇ ಕಾಡಾನೆಗಳ ಹಿಂಡು ಕಾರಿನ ಮೇಲೆ ದಾಳಿ ನಡೆಸಿ, ಕಾರನ್ನು ಜಖಂಗೊಳಿಸಿದ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಚನ್ನಂಗಿ ಅಬ್ಬೂರು ಗೇಟ್ ಬಳಿ ನಡೆದಿದೆ.

ಕಾಫಿ ತೋಟದಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳು ಮರಿಗಳ ಸಹಿತ ಕಾಡಿನತ್ತ ತೆರಳುತ್ತಿದ್ದವು. ಈ ವೇಳೆ ರಸ್ತೆಯಲ್ಲೇ ನಡೆದು ಬರುತ್ತಿದ್ದ ಕಾಡಾನೆಗಳನ್ನು ಕಂಡು ವಾಹನ ಸವಾರರು ಮತ್ತು ತೋಟ ಕೆಲಸ ಮುಗಿಸಿ ಹಿಂದಿರುಗುತ್ತಿದ್ದ ಕಾರ್ಮಿಕರು ರಸ್ತೆಗಳಲ್ಲೇ ವಾಹನಗಳನ್ನು ಬಿಟ್ಟು ಸ್ಥಳದಿಂದ ಓಡಿ ಹೋಗಿದ್ದಾರೆ. ಈ ವೇಳೆ ರಸ್ತೆಬದಿಯಲ್ಲಿ ನಿಲ್ಲಿಸಿದ್ದ ಕಾರೊಂದರ ಮೇಲೆ ಕಾಡಾನೆ ದಾಳಿ ನಡೆಸಿ ಕಾರನ್ನು ಜಖಂಗೊಳಿಸಿದೆ.

ಮಾಹಿತಿ ಅರಿತು ಸ್ಥಳಕ್ಕೆ ಉಪ ವಲಯ ಅರಣ್ಯಾಧಿಕಾರಿ ಚೆನ್ನವೀರ್ ಹಾಗೂ ಚೆನ್ನಂಗಿ ವ್ಯಾಪ್ತಿಯ ಅರಣ್ಯ ಇಲಾಖೆ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಈ ವ್ಯಾಪ್ತಿಯಲ್ಲಿ ಕಾಡಾನೆಗಳ ಉಪಟಳ ಮಿತಿ ಮೀರಿದ್ದು, ಕಾಡಾನೆಗಳನ್ನು ಕಾಡಿಗೆ ಅಟ್ಟುವಂತೆ ಈ ಭಾಗದ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಓಂಕಾರೇಶ್ವರ ದೇವಾಲಯದಲ್ಲಿ ತೆಪ್ಪೋತ್ಸವ



ಮಡಿಕೇರಿ ಓಂಕಾರೇಶ್ವರ ದೇವಾಲಯದ ಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯಿತು.

ಮಡಿಕೇರಿ, ನ.17–ನಗರದ ಶ್ರೀ ಓಂಕಾರೇಶ್ವರ ದೇವಾಲಯದ ರೂಢಿ ಸಂಪ್ರದಾಯದಂತೆ ದೇವಾಲಯ ಕಲ್ಯಾಣಿಯಲ್ಲಿ ತೆಪ್ಪೋತ್ಸವ ನಡೆಯಿತು.

ದೇವಾಲಯ ಆವರಣದ ಕಲ್ಯಾಣಿಯಲ್ಲಿ ಪುಷ್ಪಾಲಂಕೃತ ತೆಪ್ಪದ ಮೇಲೆ ಬೆಳ್ಳಿ ಮೂರ್ತಿಯನ್ನು ಕೂರಿಸಿ ತೆಪ್ಪೋತ್ಸವ ನಡೆಸಲಾಯಿತು. ಇದಕ್ಕೂ ಮೊದಲು ದೇವಾಲಯದಲ್ಲಿ ವಿವಿಧ ಪೂಜಾ ಕಾರ್ಯ ನೆರವೇರಿಸಲಾಯಿತು. ದೇವಾಲಯ ಆವರಣದಲ್ಲೇ ಪಲ್ಲಕ್ಕಿ ಉತ್ಸವ ಮಾಡಲಾಯಿತು.

ನಂತರ ಅದೇ ಪಲ್ಲಕ್ಕಿಯಲ್ಲಿ ಈಶ್ವರನ್ನು ಕರೆ ತಂದು ತೆಪ್ಪದಲ್ಲಿ ಕೂರಿಸಿ ಕಲ್ಯಾಣಿಯಲ್ಲಿ ಉತ್ಸವ ಮಾಡಲಾಯಿತು. ಬೃಹತ್ ಕಲ್ಯಾಣಿಯಲ್ಲಿ ಮೂರು ಸುತ್ತು ತೆಪ್ಪೋತ್ಸವ ನಡೆಸಲಾಯಿತು. ವರ್ಷಕ್ಕೊಮ್ಮೆ ನಡೆಯುವ ತೆಪ್ಪೋತ್ಸವವನ್ನು ನೂರಾರು ಭಕ್ತರು ಕಣ್ತುಂಬಿಕೊಂಡರು.

ಮಾಯಮುಡಿ ಶಾಲೆ ಅಭಿವೃದ್ಧಿಗೆ ಸಹಕಾರ

● ಶಾಲೆಯ ಹಿರಿಯ ವಿದ್ಯಾರ್ಥಿ, ಸಚಿವ ಕೆ.ಜೆ.ಜಾರ್ಜ್ ಭರವಸೆ ● ಶಾಲಾ ಸಭಾಂಗಣ ಲೋಕಾರ್ಪಣೆ

ಗೋಣಿಕೊಪ್ಪ, ನ.17–ಮಾಯಮುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಭಿವೃದ್ಧಿಗೆ ನಾನು ಕೈಜೋಡಿಸುತ್ತೇನೆ ಎಂದು ಇಂಧನ ಸಚಿವ ಹಾಗೂ ಮಾಯಮುಡಿ ಶಾಲೆಯ ಹಿರಿಯ ವಿದ್ಯಾರ್ಥಿ ಕೆ.ಜೆ.ಜಾರ್ಜ್ ಭರವಸೆ ನೀಡಿದರು.

ಶಾಲೆಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ತಾವೇ ಕೊಡುಗೆ ನೀಡಿದ ಸಭಾಂಗಣವನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದ ಅವರು, ನಾನು ಈ ಶಾಲೆಯಲ್ಲಿ ಓದಿದ್ದರಿಂದ ರಾಜಕೀಯವಾಗಿ ಬೆಳೆಯಲು ಕಾರಣವಾಗಿದೆ. ಆದ್ದರಿಂದ ಶಾಲೆಯ ಅಭಿವೃದ್ಧಿಗೆ ಕೈಜೋಡಿಸಲಾಗುವುದು. ಶಾಲಾ ದಿನಗಳನ್ನು ಮೆಲುಕು ಹಾಕಿದ ಸಚಿವರು, 60 ವರ್ಷಗಳ ಹಿಂದೆ ಗ್ರಾಮದ ಹಿರಿಯರಾದ ಸಿ.ಪಿ.ಗಣಪತಿ ನನ್ನನ್ನು ಈ ಶಾಲೆಗೆ ಸೇರಿಸಿದವರು. ಅವರನ್ನು ಸದಾ ನೆನೆಯುತ್ತೇನೆ ಎಂದರು.

ಆಸಕ್ತಿಯಿಂದ ರಾಜಕೀಯಕ್ಕೆ ಸೇರಿದೆ. ಮಾಯಮುಡಿ ಶಾಲೆಯಲ್ಲಿ ಓದಿದ ಕಾರಣ ಈ ಮಟ್ಟಕ್ಕೆ ಬೆಳೆಯುವಂತಾಗಿದ್ದೇನೆ. ಚೆಪ್ಪುಡೀರ ನಂಜಪ್ಪ ಮಾಸ್ಟರ್ ನನಗೆ ಶಿಸ್ತು ಕಲಿಸಿದವರು. ಗದ್ದೆಯಿಂದ ಶಾಲೆಗೆ ನೀರು ತರುವ ಕಾಯಕದಿಂದ ನನಗೆ ದುಡಿಯುವುದು ಮೈಗೂಡಿಸಿಕೊಳ್ಳುವಂತಾಗಿದೆ. ಪ್ರಜಾಪ್ರಭುತ್ವದಲ್ಲಿ ಏನು ಬೇಕಾದರೂ ಆಗಬಹುದು. ವಿದ್ಯಾರ್ಥಿಗಳು ಕಲಿತು ತನ್ನದೇ ಆದ ಚಿಂತನೆಯಲ್ಲಿ ದೇಶಕ್ಕೆ ಸೇವೆ ನೀಡುವಂತಾಗಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಸಚಿವರು ಶಾಲೆಯ ಶತಮಾನೋತ್ಸವದ ವಿದ್ಯಾ ಕಾವೇರಿ ವಿಶೇಷ ಸಂಚಿಕೆ ಬಿಡುಗಡೆಗೊಳಿಸಿದರು. ಸಂಚಿಕೆ ಸಮಿತಿ ಅಧ್ಯಕ್ಷ ಸಣ್ಣುವಂಡ ಎಂ.ವಿಶ್ವನಾಥ್ ಗ್ರಾಮದ ಪರಿಚಯ, ಶಾಲೆ ನಡೆದು ಬಂದ ಹಾದಿ ತಿಳಿಸಿದರು. ಶಾಸಕ ಎ.ಎಸ್. ಪೊನ್ನಣ್ಣ ಕಾರ್ಯಕ್ರಮ ಉದ್ಘಾಟಿಸಿದರು. ಶಾಸಕ ಡಾ.ಮಂತರ್‌ಗೌಡ ಶಾಲೆಗೆ 1 ಲಕ್ಷ ಅನುದಾನ ನೀಡುವುದಾಗಿ ತಿಳಿಸಿದರು.



ಮಾಯಮುಡಿ ಸರ್ಕಾರಿ ಶಾಲೆ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಶಾಲೆಯ ಹಿರಿಯ ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸನ್ಮಾನ: ಶಾಲೆಯ ಹಿರಿಯ ಸಾಧಕ ವಿದ್ಯಾರ್ಥಿಗಳಾದ ಸಚಿವ ಕೆ.ಜೆ.ಜಾರ್ಜ್, ಕಂಜಿತಂಡ ಸ್ವಾತಿ, ಕಳ್ಳಿಚಂಡ ಪ್ರಸಾದ್, ಕಾಳಪಂಡ ಕಾಶಿ ಅಪ್ಪಯ್ಯ, ಚೆಪ್ಪುಡೀರ ಕೆ.ಮಾದಯ್ಯ, ಡಾ.ಸಿ.ಜಿ.ಕುಶಾಲಪ್ಪ, ಚೆಪ್ಪುಡೀರ ರಾಧಾ ಅಚ್ಚಯ್ಯ, ಚೆಪ್ಪುಡೀರ ಅರುಣ್ ಮಾಚಯ್ಯ ಹಾಗೂ ಐಚೇಟೀರ ಪೊನ್ನಪ್ಪ (ಮರಣೋತ್ತರ)ಹಾಗೂ ನಿವೃತ್ತ ಶಿಕ್ಷಕರಾದ ಪುಳ್ಳಂಗಡ ಜೋಯಪ್ಪ, ಬಾನಂಡ ನಂಜುಮಮಯ್ಯ, ಎಚ್.ಎಸ್.ನಂಜಮ್ಮ ಅವರನ್ನು ಸನ್ಮಾನಿಸಲಾಯಿತು. ಬಳಿಕ ಗೋಣಿಕೊಪ್ಪ ಕಾವೇರಿ ಕಾಲೇಜು ತಂಡದಿಂದ ಉಮ್ಮತ್ತಾಟ್ ಹಾಗೂ ಪೊನ್ನಂಪೇಟೆ ನಾಟ್ಯ ಕಲಾ ತಂಡದಿಂದ ಸ್ವಾಗತ ನೃತ್ಯ ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ತೀತೀರ ಧರ್ಮಜ, ಮಾಜಿ ಎಂಎಲ್‌ಸಿ ಅರುಣ್ ಮಾಚಯ್ಯ, ಮಾಯಮುಡಿ ಗ್ರಾಪಂ ಅಧ್ಯಕ್ಷ ಅಪಟ್ಟೀರ ಟಾಟು ಮೊಣ್ಣಪ್ಪ, ಶಾಲಾ ಶತಮಾನೋತ್ಸವ ಸಮಿತಿ ಅಧ್ಯಕ್ಷ ಕಾಳಪಂಡ ಟಿಪ್ಪು ಬಿದ್ದಪ್ಪ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಂಗಧಾಮಪ್ಪ, ವಿರಾಜಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ರವಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎನ್.ಸಿ.ಉಮೇಶ ಇದ್ದರು.

ದುಬಾರೆ ಅರಣ್ಯದಲ್ಲಿ ಕಾಡಾನೆ ಕಳೇಬರ ಪತ್ತೆ



ದುಬಾರೆ ಮೀಸಲು ಅರಣ್ಯದಲ್ಲಿ ಪತ್ತೆಯಾದ ಕಾಡಾನೆ ಕಳೇಬರ.


ಸಿದ್ದಾಪುರ: ಕುಶಾಲನಗರದ ದುಬಾರೆ ಮೀಸಲು ಅರಣ್ಯದ ಲಿಂಗಾಪುರ ಗೇಟ್ ಸಮೀಪದಲ್ಲಿ ಕಾಡಾನೆಯ ಕಳೇಬರ ಪತ್ತೆಯಾಗಿದೆ.

ಅಂದಾಜು 35 ವರ್ಷದ ಗಂಡಾನೆ ಮತ್ತೊಂದು ಆನೆಯ ತಿವಿತಕ್ಕೊಳಗಾಗಿ ಸ್ಥಳದಲ್ಲೇ ಮೃತಪಟ್ಟಿದೆ ಎಂದು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ವನ್ಯಜೀವಿ ವೈದ್ಯ ಡಾ. ಚೆಟ್ಟಿಯಪ್ಪ ಮರಣೋತ್ತರ ಪರೀಕ್ಷೆ ನಡೆಸಿದರು. ನಂತರ ಅರಣ್ಯದಲ್ಲೇ ಅಂತ್ಯಕ್ರಿಯೆ ಮಾಡಲಾಯಿತು.

ಎಸಿಎಫ್ ಗೋಪಾಲ್, ವಲಯ ಅರಣ್ಯಾಧಿಕಾರಿ ರತನ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿ ಪಿ.ಎಸ್ ಹಂಝು ಹಾಗೂ ಸಿಬ್ಬಂದಿ ಹಾಜರಿದ್ದರು.

ನ.21, ಯುವ ಅಭಿಯಾನ

ಮಡಿಕೇರಿ, ನ.17–ಜಿಲ್ಲಾ ತಂಬಾಕು



ನಿಯಂತ್ರಣ ಕೋಶದ ವತಿಯಿಂದ ನ.21 ರಂದು ಬೆಳಗ್ಗೆ 11 ಗಂಟೆಗೆ ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ತಂಬಾಕು ಮುಕ್ತ ಯುವ ಅಭಿಯಾನ ನಡೆಯಲಿದೆ ಎಂದು ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸರ್ವೇಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೊಳ್ಳಮ್ಮಗೆ ಪಿಹೆಚ್.ಡಿ

ಮಡಿಕೇರಿ, ನ.17– ಬೆಂಗಳೂರು ವಿಶ್ವ



ವಿದ್ಯಾಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಅತಿಥಿ ಉಪನ್ಯಾಸಕಿ ಪಿ.ಕೆ. ಬೊಳ್ಳಮ್ಮ ಅವರು ಮಂಡಿಸಿದ ಮೊಬೈಲ್ ಆಧಾರಿತ ಸುದ್ದಿ ವಿತರಣೆಯ ಆರಂಭದೊಂದಿಗೆ ಸುದ್ದಿ ಬಳಕೆಯ ಸ್ಥಿತಿಗತಿ: ಕೊಡಗು ಜಿಲ್ಲೆಯಲ್ಲೊಂದು ಅಧ್ಯಯನ ಎಂಬ ಪ್ರೌಢ ಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಪಿಹೆಚ್‌ಡಿ ಪದವಿ ನೀಡಿದೆ. ಬೊಳ್ಳಮ್ಮ ಅವರಿಗೆ ವಿದ್ಯುನ್ಮಾನ ಮಾಧ್ಯಮ ವಿಭಾಗದ ಸಹ ಪ್ರಾಧ್ಯಾಪಕ ಡಾ.ಟಿ.ಶ್ರೀಪತಿ ಅವರು ಮಾರ್ಗದರ್ಶನ ನೀಡಿದ್ದರು.

ನಾಳೆ ವಿರಾಜಪೇಟೆಗೆ ಬೈಕ್ ರ್‍ಯಾಲಿ ಆಗಮನ

ವಿರಾಜಪೇಟೆ, ನ.17–ನವೆಂಬರ್ 19ರಂದು ಮದರಾಸ್ (ಎನ್‌ಇಜಿ) ಇಂಜಿನಿಯರ್ ಗ್ರೂಪ್ ವತಿಯಿಂದ 244ನೇ ವರ್ಷದ ರೈಸಿಂಗ್ ದಿವಸವನ್ನು ಬೈಕ್ ರ್‍ಯಾಲಿ ಮೂಲಕ ಆಚರಿಸಲಾಗುವುದು ಎಂದು ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ.19ರಂದು ಬೆಳಗ್ಗೆ ಕೇರಳದ ಟ್ರಿವೆಂಡ್ರಂನಿಂದ ಬೈಕ್ ರ್‍ಯಾಲಿ ಹೊರಟು ಕಣ್ಣನೂರು ಮಾರ್ಗವಾಗಿ ಮಧ್ಯಾಹ್ನ 1 ಗಂಟೆಗೆ ವಿರಾಜಪೇಟೆಯ ತಾಲೂಕು ಮೈದಾನ ತಲುಪಲಿದೆ. ಈ ವೇಳೆ ಕೊಡಗು ಮಾಜಿ ಸೈನಿಕರ ಸಹಕಾರ ಸಂಘದಿಂದ ರ್‍ಯಾಲಿ ಸ್ವಾಗತಿಸಲಾಗುವುದು. ನಂತರ ನಡೆಯುವ ಕಾರ್ಯಕ್ರಮದಲ್ಲಿ ನಿವೃತ್ತ ಮೇಜರ್ ಜನರಲ್ ಬಿ.ಎ.ಕಾರ್ಯಪ್ಪ, ತಹಸೀಲ್ದಾರ್ ರಾಮಚಂದ್ರ, ಪುರಸಭೆ ಅಧ್ಯಕ್ಷರು, ಪೊಲೀಸ್ ಅಧಿಕಾರಿಗಳು, ಮಾಜಿ ಸೈನಿಕರು, ಎನ್‌ಸಿಸಿ, ಸ್ಕೌಟ್ಸ್ ಅಂಡ್ ಗೈಡ್ಸ್, ಶಾಲಾ–ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಪಿಂಚಣಿಯಲ್ಲಿ ದೋಷ ಹಾಗೂ ಸ್ಪರ್ಶ್ ತೊಂದರೆಗಳಿದ್ದರೆ ಮಾಜಿ ಸೈನಿಕರ ಅವಲಂಬಿತರು, ವೀರನಾರಿಯರು ಬಗೆಹರಿಸಿಕೊಳ್ಳಬಹುದು. ನಂತರ ರ್‍ಯಾಲಿ ಮೈಸೂರಿಗೆ ತೆರಳಿ ಕಾರ್ಯಕ್ರಮ ನಡೆಸಲಿದೆ. ಬಳಿಕ ಬೆಂಗಳೂರಿನ ತರಬೇತಿ ಕೇಂದ್ರ ತಲುಪಲಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಕೊಡಗು ಮಾಜಿ ಸೈನಿಕರ ಸಹಕಾರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕಾರ್ಯದರ್ಶಿ ಮಗ್ಗೇರ ನಂದಾ, ಖಜಾಂಚಿ ತೋರೆರ ಪೂವಯ್ಯ, ಪುಟ್ಟಿಚಂಡ ಮಾದಪ್ಪ ಉಪಸ್ಥಿತರಿದ್ದರು.

ಇಂದಿನಿಂದ ಪಾರ್ವತಾಂಬ ಜಾತ್ರಾ ಮಹೋತ್ಸವ

● ಹಸಗೂಲಿ ಗ್ರಾಮದಲ್ಲಿ ನಾಳೆ ರಥೋತ್ಸವ ● ಜಾನುವಾರುಗಳ ಪಂಜಿನ ಸೇವೆ

ಬೇಗೂರು, ನ.17–ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಹಸಗೂಲಿ ಗ್ರಾಮದಲ್ಲಿ ಶ್ರೀ ಪಾರ್ವತಾಂಬ ಜಾತ್ರಾ ಮಹೋತ್ಸವ ನ.18ರಿಂದ 20ರ ವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ಜಾತ್ರಾ ವಿಶೇಷ: ಕಾರ್ತಿಕ ಮಾಸದ ಮೂರನೇ ಸೋಮವಾರ ಜಾತ್ರೆಗೆ ಚಾಲನೆ ನೀಡಲಾಗುವುದು. ಗ್ರಾಮಸ್ಥರು ಒಟ್ಟಾಗಿ ಸೇರಿ ಗ್ರಾಮದಲ್ಲಿರುವ ದೇವಿಯ ವಿಗ್ರಹಕ್ಕೆ ಪೂಜೆ ಸಲ್ಲಿಸಿ, ಬುಟ್ಟಿಯಲ್ಲಿರಿಸಿಕೊಂಡು ಬಂಡೀಪುರ ರಾಷ್ಟ್ರೀಯ ಅರಣ್ಯ ವ್ಯಾಪ್ತಿಗೆ ಬರುವ ಕಸಗಲಪುರದ ಶ್ರೀ ಪಾರ್ವತಾಂಬ ದೇವಿಯ ಮೂಲ ದೇವಾಲಯಕ್ಕೆ ಕಾಲ್ನಡಿಗೆಯಲ್ಲಿ ತೆರಳಿ ಅಲ್ಲೇ ತಂಗಲಿದ್ದಾರೆ.

ಮಾರನೆಯ ದಿನ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ದೇವಿಯನ್ನು ರಥದಲ್ಲಿರಿಸಿ ರಥ ಎಳೆಯಲಾಗುತ್ತದೆ. ಬುಧವಾರ ಬೆಳಗ್ಗೆ ಪೂಜೆ ಸಲ್ಲಿಸುವ ಗ್ರಾಮಸ್ಥರು ಮತ್ತೆ ಗ್ರಾಮದಲ್ಲಿ ತೇರನ್ನು ಎಳೆಯಲಿದ್ದಾರೆ. ಗ್ರಾಮದ ಪ್ರತಿ ಮನೆಯವರು ಪೂಜೆ ಸಲ್ಲಿಸಲಿದ್ದಾರೆ.



ಅಲ್ಲಹಳ್ಳಿ ಮಾರಮ್ಮ ಜನುವಾರುಗಳನ್ನು ಕಾಪಾಡುತ್ತಾಳೆ ಎಂಬ ಪ್ರಸಿದ್ಧಿ ಹೊಂದಿರುವುದರಿಂದ ಜಾನುವಾರುಗಳನ್ನು ಸಿಂಗರಿಸಿ ಪಂಜಿನ ಸೇವೆ ನೆರವೇರಿಸುವುದರಿಂದ ಸಾವಿರಾರು ಜಾನುವಾರುಗಳು ಜಾತ್ರೆಯಲ್ಲಿ ಸೇರಲಿವೆ.

ಸಿಂಗಾರಗೊಂಡ ಗ್ರಾಮ

ಜಾತ್ರಾ ಮಹೋತ್ಸವದ ಅಂಗವಾಗಿ ಗ್ರಾಮದ ಪ್ರಮುಖ ಬೀದಿಗಳನ್ನು ವಿದ್ಯುತ್ ದೀಪ ಹಾಗೂ ತಳಿರು ತೋರಣಗಳಿಂದ ಸಿಂಗರಿಸಲಾಗಿದೆ. ಗ್ರಾಮದ ಎಲ್ಲಾ ಮನೆಗಳು ಸುಣ್ಣ–ಬಣ್ಣ ಬಳಿದು ಸಿಂಗಾರಗೊಂಡಿವೆ. ಗ್ರಾಮದ ಪ್ರತಿ ಮನೆಯಲ್ಲಿ ಹಬ್ಬದ ವಾತಾವರಣ ನಿರ್ಮಾಣಗೊಂಡಿದೆ. ಸಿಹಿತಿನಿಸು ಮತ್ತು ಮಕ್ಕಳ ಆಟಿಕೆ ವಸ್ತುಗಳ ಮಾರಾಟ ಅಂಗಡಿಗಳು ನಿರ್ಮಾಣಗೊಂಡಿವೆ.

ಸಂಚಿಹೊನ್ನಮ್ಮ, ದೇವಚಂದ್ರ ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ



ಚಾ.ನಗರ ಜಿಲ್ಲಾ ಕಸಾಪ ಕಚೇರಿಯಲ್ಲಿ ಭಾನುವಾರ ನಡೆದ ರಾಜ್ಯೋತ್ಸವ ಕಾರ್ಯಕ್ರಮವನ್ನು ಪ್ರೊ.ನಂಜುಂಡಸ್ವಾಮಿ ಹರದನಹಳ್ಳಿ ಉದ್ಘಾಟಿಸಿದರು.

ಚಾಮರಾಜನಗರ, ನ17–ಸಂಚಿಹೊನ್ನಮ್ಮ ಹಾಗೂ ಮಲೆಯೂರು ದೇವಚಂದ್ರ ಅವರು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದು ಪ್ರೊ.ನಂಜುಂಡಸ್ವಾಮಿ ಹರದನಹಳ್ಳಿ ಹೇಳಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ, ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ 50 ದಿನಗಳವರೆಗೆ ಆಯೋಜಿಸಿರುವ ಕನ್ನಡ ರಾಜ್ಯೋತ್ಸವದ 16ನೇ ದಿನದ ಕಾರ್ಯಕ್ರಮದಲ್ಲಿ ಯಳಂದೂರಿನ ಸಂಚಿಹೊನ್ನಮ್ಮ, ಮಲೆಯೂರು ದೇವಚಂದ್ರ ಕುರಿತು ಮಾತನಾಡಿದ ಅವರು, 12ನೇ ಶತಮಾನದಲ್ಲಿ ಅಕ್ಕಮಹಾದೇವಿ ಮತ್ತಿತರ ವಚನಗಾರ್ತಿಯರನ್ನು ಬಿಟ್ಟರೆ, ಬೇರೆ ಯಾವ ಮಹಿಳೆಯರು ಕನ್ನಡದಲ್ಲಿ ಕೃತಿ ರಚಿಸಿದ ನಿದರ್ಶನಗಳಿಲ್ಲ. 18 ಶತಮಾನದಲ್ಲೇ ಚಿಕ್ಕದೇವರಾಯರ ಅರಮನೆ ಪರಿಸರದಲ್ಲಿ ಹೊನ್ನಮ್ಮ, ಶೃಂಗಾರಮ್ಮ, ಚೆಲುವಾಂಬೆ ಅವರು ಕವಯಿತ್ರಿಯಾಗಿದ್ದರು. ಶೃಂಗಾರಮ್ಮ ಬರೆದ ಪದ್ಮಿನಿ ಕಲ್ಯಾಣ, ಚೆಲುವಾಂಬೆ ಬರೆದ ವರನಂದಿ ಕಲ್ಯಾಣ ವೆಂಕಟಾಚಲ ಮಹಾತ್ಮ, ಆದರೆ, ಹೊನ್ನಮ್ಮ ಕಾವ್ಯಶಕ್ತಿಯೇ ಪ್ರಖ್ಯಾತಿ ಹೊಂದಿದೆ ಎಂದರು.

ಹೊನ್ನಮ್ಮನಿಗೆ ಸಂಚಿಯ ಹೊನ್ನಮ್ಮ ಎನ್ನುವುದು ಪೂರ್ತಿಯಾದ ಹೆಸರು. ಸಂಚಿ ಎಂದರೆ ಚೀಲ ಹೊನ್ನಮ್ಮ ಎಲೆಯಡಕೆಯ ಚೀಲವನ್ನು ಹಿಡಿದು ಅರಮನೆಯಲ್ಲಿ ರಾಜ–ರಾಣಿಯರ ಸಮೀಪವರ್ತಿಯಾಗಿ ಕೆಲಸ ಮಾಡಿಕೊಂಡಿದ್ದರು. ಸಿಂಗರಾಯನಿಂದ ವ್ಯಾಸಂಗ ಪಡೆದು ಹದಿಬದೆಯ ಧರ್ಮ ಎಂಬ ಕಾವ್ಯವನ್ನು ಬರೆದು ಕವಯಿತ್ರಿಯಾದರು. ಅವರ ಬರವಣಿಗೆ ಮಾತ್ರ ಅಚ್ಚಗನ್ನಡ ಸೊಗಸಿನಿಂದ ಕೂಡಿದೆ. ಸಂಚಿಹೊನ್ನಮ್ಮ ಯಳಂದೂರಿನಲ್ಲಿ ಹುಟ್ಟಿದ್ದರು ಎಂದರು.

ಚಾಮರಾಜನಗರ ತಾಲೂಕಿನ ಮಲೆಯೂರು ಗ್ರಾಮದ ನಿವಾಸಿಯಾಗಿದ್ದ ದೇವಚಂದ್ರ 1770 ರಿಂದ 1841ರ ವರೆಗೆ ಬದುಕಿದ್ದರು. ಅವರು ಜೈನ ಕವಿಯಾಗಿದ್ದರು. ಅವರು ಪ್ರಥಮ ಗ್ರಂಥ ಪೂಜ್ಯವಾದ ಚರಿತೆಯನ್ನು 1792ರಲ್ಲಿ ರಚಿಸಿದರು. ಮಲೆಯೂರು ದೇವಚಂದ್ರ ಹಾಗೂ ಯಳಂದೂರಿನ ಸಂಚಿಹೊನ್ನಮ್ಮ ಅವರ ಬಗ್ಗೆ ಜಿಲ್ಲೆಯ ಯುವ ಪೀಳಿಗೆಗೆ ತಿಳಿಸುವ ಒಳ್ಳೆಯ ಕೆಲಸವಾಗಿದೆ ಎಂದು ತಿಳಿಸಿದರು.

ಕನ್ನಡ ಮಹಾಸಭಾ ಅಧ್ಯಕ್ಷ ಶ್ರೀನಿವಾಸಗೌಡ ಮಾತನಾಡಿದರು. ಮುತ್ತುರಾಜು, ರವಿಚಂದ್ರ ಪ್ರಸಾದ್ ಕಹಳೆ, ಶಾ. ಮುರಳಿ, ಪಣ್ಯದಹುಂಡಿ ರಾಜು, ಲಿಂಗರಾಜು, ನಂಜುಂಡಶೆಟ್ಟಿ, ತಮಿಳು ಸಂಘದ ಜಗದೀಶ್, ಶಿವಲಿಂಗ ಮೂರ್ತಿ, ಚಾ.ಸಿ.ಸಿದ್ದರಾಜು ಹಾಜರಿದ್ದರು.

ಎಸ್.ಶುಭಿತ್‌ಗೆ ಚಿನ್ನದ ಪದಕ



ವಿಶ್ವ ಕರಾಟೆ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗಳಿಸಿದ ಚಾಮರಾಜನಗರದ ಸೇವಾ ಭಾರತಿ ಪಬ್ಲಿಕ್ ಶಾಲೆಯ ಎಸ್.ಶುಭಿತ್.

ಚಾಮರಾಜನಗರ, ನ.17–ನಗರದ ಸೇವಾ ಭಾರತಿ ಪಬ್ಲಿಕ್ ಶಾಲೆಯ 3ನೇ ತರಗತಿ ವಿದ್ಯಾರ್ಥಿ ಎಸ್.ಶುಭಿತ್ ಗೋವಾದಲ್ಲಿ ನಡೆದ 24ನೇ ವಿಶ್ವ ಕರಾಟೆ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗಳಿಸಿದ್ದಾನೆ.

ಈತನನ್ನು ಕರಾಟೆ ಶಿಕ್ಷಕ ಕೆ.ಜಿ. ಮುರಳಿ, ಮೈಸೂರು ಪೆಂಕಾಕ್ ಸಿಲಾತ್ ಅಧ್ಯಕ್ಷ ಮಹದೇವು, ಶುಭಿತ್ ತಂದೆ ಸುರೇಶ್ ಹಾಗೂ ತಾಯಿ ನಳಿನಿ ಅಭಿನಂದಿಸಿದ್ದಾರೆ.

ನಾಳೆ ಮಾದಕ ವ್ಯಸನ ಅರಿವು

ಚಾಮರಾಜನಗರ: ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ನೆಹರು ಯುವ ಕೇಂದ್ರ, ಜೈ ಭುವನೇಶ್ವರಿ ಕನ್ನಡ ಯುವ ವೇದಿಕೆ ಸಹಯೋಗದಲ್ಲಿ ಮಾದಕ ವ್ಯಸನ ಅರಿವು ಕಾರ್ಯಕ್ರಮವನ್ನು ನ.19ರಂದು ಬೆಳಗ್ಗೆ 11 ಗಂಟೆಗೆ ನಗರದ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಪ್ರಾಂಶುಪಾಲ ಜಿ.ವಿನಯಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಇಂದು ನಗರದಲ್ಲಿ ಕನಕ ಜಯಂತಿ ಆಚರಣೆ

ಚಾಮರಾಜನಗರ, ನ.17–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಕನಕದಾಸ ಜಯಂತಿಯನ್ನು ನ.18ರಂದು ನಗರದಲ್ಲಿ ಆಚರಿಸಲಾಗುವುದು.

ಬೆಳಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರ ಆವರಣದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಮಧ್ಯಾಹ್ನ 12 ಗಂಟೆಗೆ ವರನಟ ಡಾ.ರಾಜ್ ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ.



ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ರಾಜ್ಯ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

ಪ್ರವಾಸಿ ಬಸ್ ಮಾಲೀಕರಿಗೆ ಗುರುತಿನ ಚೀಟಿ ವಿತರಣೆ...



ಚಾಮರಾಜನಗರದ ಖಾಸಗಿ ಹೋಟಲ್‌ನಲ್ಲಿ ನಡೆದ ಮೈಸೂರು ಜಿಲ್ಲಾ ಪ್ರವಾಸಿ ಬಸ್ ಮಾಲೀಕರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಸಂಘದ ಅಧ್ಯಕ್ಷ ಪೃಥ್ವಿರಾಜ್ ಸದಸ್ಯರಿಗೆ ಗುರುತಿನ ಚೀಟಿ, ವಾಹನ ಬ್ಯಾಡ್ಜ್ ವಿತರಿಸಿದರು. ಸಂಘದ ಗೌರವಾಧ್ಯಕ್ಷ ಸೋಮಣ್ಣ, ಉಪಾಧ್ಯಕ್ಷ ರಾಜಣ್ಣ, ಚಾಮರಾಜನಗರ ಜಿಲ್ಲಾ ಉಪಾಧ್ಯಕ್ಷ ಪ್ರಜ್ವಲ್, ಕಾರ್ಯದರ್ಶಿ ಕಂಡಕ್ಟರ್ ಸೋಮನಾಯಕ, ಸಹ ಕಾರ್ಯದರ್ಶಿ ರವಿ, ಶಶಿಕಾಂತ್, ಮಹದೇವ ನಾಯಕ, ನವೀನ್, ಹನೂರು ಮಲ್ಲೇಶ್, ಶಿವು, ಜಿಯಾವುಲ್ಲಾ, ಮೋಹನ್, ಅಕ್ರಂ ಪಾಷ, ರಾಜೀವ, ಮಧು ಇದ್ದರು.

ನಾಳೆ ಕರ್ನಾಟಕ ದಸಂಸ ಜಿಲ್ಲಾ ಸದಸ್ಯರ ಸಭೆ

ಸುದ್ದಿಗೋಷ್ಠಿಯಲ್ಲಿ ದಸಂಸ ರಾಜ್ಯ ಸಂಘಟನಾ ಸಂಚಾಲಕ ಕೆ.ಸಿದ್ದರಾಜು ದೊಡ್ಡಿಂದುವಾಡಿ ಮಾತನಾಡಿದರು.



ಚಾಮರಾಜನಗರ, ನ.17– ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಮಟ್ಟದ ಸರ್ವ ಸದಸ್ಯರ ಸಭೆ ಹಾಗೂ ಜಿಲ್ಲಾ ಸಮಿತಿ ಪುನರ್ ರಚನೆ ಕಾರ್ಯಕ್ರಮವನ್ನು ನ.19ರಂದು ನಗರದ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಕೆ.ಸಿದ್ದರಾಜು ದೊಡ್ಡಿಂದುವಾಡಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯನ್ನು ಸಮಿತಿ ರಾಜ್ಯಾಧ್ಯಕ್ಷ ಮಾವಳ್ಳಿ ಶಂಕರ್ ಉದ್ಘಾಟಿಸಲಿದ್ದಾರೆ. ರಾಜ್ಯ ಸಮಿತಿ ಸದಸ್ಯರಾದ ಇಂದಿರಾ ಕೃಷ್ಣಪ್ಪ ಪುಷ್ಪಾರ್ಚನೆ ಮಾಡಲಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಉಡುಪಿ ಪ್ರಾದೇಶಿಕ ನಿರ್ದೇಶಕ ಡಾ.ಕೆ.ಪಿ. ಮಹಾಲಿಂಗು ಕಲ್ಕುಂದ ಹಾಗೂ ಚಾಮರಾಜನಗರ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಪ್ರಾಧ್ಯಾಪಕ ಜಿ.ಗುರುರಾಜ್ ಯರಗನಹಳ್ಳಿ ಅವರು ದಲಿತ ಸಾಹಿತ್ಯ ಮತ್ತು ದಲಿತ ಚಳವಳಿ ಕುರಿತು ಮಾತನಾಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಚಾಲಕರಾದ ಕೆ.ವೀರ ವಿ.ಎಸ್.ದೊಡ್ಡಿ ಒಡೆಯರಪಾಳ್ಯ, ಹಿಂಡಯ್ಯ ಮಾಂಬಳ್ಳಿ ನಾಗಣ್ಣ ಹನೂರು, ಮಹೇಶ್ ಕಾಳನಹುಂಡಿ, ಹನೂರು ತಾಲೂಕು ಸಂಚಾಲಕ ಮಾದೇಶ್ ಭೈರನತ್ತ, ಸಂಘಟನಾ ಸಂಚಾಲಕ ಮುರುಗೇಶ್, ಕೊಳ್ಳೇಗಾಲ ತಾಲೂಕು ಸಂಚಾಲಕ ಚಿಕ್ಕದೊಡ್ಡಯ್ಯ ಕೊತ್ತನೂರು, ಯಳಂದೂರು ತಾಲೂಕು ಸಂಚಾಲಕ ಆರ್.ರಾಚಪ್ಪ, ಈರತಯ್ಯ ಕೊತ್ತನೂರ ಹಾಜರಿದ್ದರು.

ಒಂದನೇ ಪುಟದಿಂದ

ಸಹಕಾರಕ್ಕೆ ಸದಾ ಸಹಕಾರಿ

ಈ ಅಧಿಕಾರ ವಿಕೇಂದ್ರೀಕರಣದಿಂದ ಗ್ರಾಮೀಣ ಆರ್ಥಿಕತೆ ಗಟ್ಟಿಯಾಯಿತು. ಇದೇ ಮಹಾತ್ಮಗಾಂಧಿಯವರ ಗ್ರಾಮ ಸ್ವರಾಜ್ಯದ ಆಶಯವೂ ಆಗಿದೆ ಎಂದರು.

ಪಂಚಾಯ್ತಿ, ಸೊಸೈಟಿ, ಶಾಲೆ ಈ ಮೂರೂ ಪ್ರತೀ ಗ್ರಾಮಗಳಲ್ಲಿ ಇರಲೇಬೇಕು. ಆಗಲೇ ಗ್ರಾಮಗಳ ಪ್ರಗತಿ ಸಾಧ್ಯ ಎನ್ನುವುದು ಮಹಾತ್ಮ ಗಾಂಧಿಯವರ ಆಶಯವಾಗಿತ್ತು ಎಂದರು. ರಾಜೀವ್ ಗಾಂಧಿಯವರು ಸಂವಿಧಾನಕ್ಕೆ ತಿದ್ದುಪಡಿ ತಂದು ಅಧಿಕಾರ ವಿಕೇಂದ್ರೀಕರಣ ಜಾರಿ ಮಾಡಿ ಮಹಿಳೆಯರು, ಹಿಂದುಳಿದವರು, ದಲಿತರ ಕೈಗೆ ಅಧಿಕಾರ ಸಿಗುವಂತೆ ಮಾಡಿದ್ದನ್ನು ಈ ಸಂದರ್ಭದಲ್ಲಿ ಸಿಎಂ ಸ್ಮರಿಸಿದರು.

ಸಹಕಾರ ರಾಜ್ಯಕ್ಕೆ ಸೇರಿದ್ದು: ಸಹಕಾರ ಕ್ಷೇತ್ರ ರಾಜ್ಯ ವ್ಯಾಪ್ತಿಗೆ ಸೇರಿದ್ದು. ಆದರೆ ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರದಲ್ಲಿ ಸಹಕಾರ ಇಲಾಖೆ ಆರಂಭಿಸಿದರು. ಇದಕ್ಕೆ ಅಮಿತ್ ಶಾ ಅವರೇ ಸಚಿವರು. ಇದು ಕೇಂದ್ರದ ವ್ಯಾಪ್ತಿಗೆ ಬರುವ ವಿಷಯ ಅಲ್ಲ. ಇದರಿಂದಾಗಿ ನಮಗೆ ನಬಾರ್ಡ್‌ನಿಂದ ಬರುವ ರೈತರ ಪಾಲಿನ ನೆರವು ಕಡಿತಗೊಂಡಿದೆ. ಒಮ್ಮೆಲೇ ಶೇ.58 ರಷ್ಟು ನಬಾರ್ಡ್ ನೆರವು ಕಡಿತಗೊಂಡಿದೆ. ಇದು ನಮ್ಮ ರೈತರಿಗೆ ಆದ ಬಹಳ ದೊಡ್ಡ ಅನ್ಯಾಯ. ರೈತರ ಬಗ್ಗೆ ಬಿಜೆಪಿ ಭಾಷಣ ಮಾತ್ರ ಚನ್ನಾಗಿ ಮಾಡುತ್ತದೆ. ಬರೀ ಭಾಷಣದಿಂದ ರೈತರ ಬದುಕನ್ನು ಉದ್ಧಾರ ಮಾಡಲು ಸಾಧ್ಯವಿಲ್ಲ. ಆದ್ದರಿಂದ ನಬಾರ್ಡ್‌ನಿಂದ ನಮಗೆ ಆದ ಅನ್ಯಾಯವನ್ನು ಪ್ರತಿಯೊಬ್ಬರು ಪ್ರತಿಭಟಿಸಬೇಕು ಎಂದು ಕರೆ ನೀಡಿದರು. ಸಹಕಾರ ಮಹಾಮಂಡಳದ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರದ ನೆರವು ನೀಡಬೇಕು ಎನ್ನುವ ಬೇಡಿಕೆ ಇದೆ. ಈ ಬೇಡಿಕೆ ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಸ್ವಿಮ್ಮಿಂಗ್‌ಪೂಲ್‌ನಲ್ಲಿ ಜಲಸಮಾಧಿ

ದುರಂತ ಅಂತ್ಯ ಕಂಡವರಾಗಿದ್ದು, ಇವರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಮನಕಲಕುವ ದೃಶ್ಯ ಸಿಸಿ ಕ್ಯಾಮರಾ ಹಾಗು ಅವರ ಐ ಪೋನ್‌ನಲ್ಲಿ ಸೆರೆಯಾಗಿದೆ.

ಈ ಮೂವರೂ ಗೆಳತಿಯರು ಪರೀಕ್ಷೆ ಮುಗಿದ ಸಂಭ್ರಮದಲ್ಲಿ ಮೂವರು ಗೆಳತಿಯರು ವಾರಾಂತ್ಯ ರಜೆ ಕಳೆಯಲು 4 ದಿನಗಳ ಮಂಗಳೂರಿನ ಪ್ರವಾಸಕ್ಕಾಗಿ ಶುಕ್ರವಾರ (ನ.15) ರಾತ್ರಿಯಷ್ಟೇ ಮೈಸೂರಿನಿಂದ ರೈಲಿನಲ್ಲಿ ಮಂಗಳೂರಿಗೆ ಪ್ರಯಾಣ ಬೆಳೆಸಿದ್ದರು. ಶನಿವಾರ ಮಂಗಳೂರಿನ ಸೋಮೇಶ್ವರ ಗ್ರಾಮದ ಬಟ್ಟಪ್ಪಾಡಿ ಅಡ್ಡ ರಸ್ತೆಯಲ್ಲಿರುವ ಪೆರಿಬೈಲ್ ಬಳಿ ಸಮುದ್ರದ ಕಿನಾರೆಯಲ್ಲಿರುವ ವಾಸ್ಕೋಸ್ ರೆಸಾರ್ಟ್‌ನಲ್ಲಿ ಕೊಠಡಿ ಪಡೆದು ವಾಸ್ತವ್ಯ ಹೂಡಿದ್ದರು. ವಿವಿಧ ಸ್ಥಳಗಳನ್ನು ವೀಕ್ಷಣೆ ಮಾಡಿ ಶನಿವಾರ ರಾತ್ರಿ ರೆಸಾರ್ಟ್‌ನಲ್ಲಿಯೇ ಊಟ ಮಾಡಿ ಮಲಗಿದ್ದರು.

ಘಟನೆ ವಿವರ: ಶನಿವಾರ ರಾತ್ರಿ ರೆಸಾರ್ಟ್‌ನ ಸೌಂದರ್ಯವನ್ನು ಪೋಷಕರಿಗೆ ವೀಡಿಯೋ ಕಾಲ್ ಮೂಲಕ ತೋರಿಸಿದ್ದ ಯುವತಿಯರು ಭಾನುವಾರ ಯಾವೆಲ್ಲಾ ಸ್ಥಳ ವೀಕ್ಷಿಸ ಬಹುದು ಎಂದು ಆಲೋಚನೆ ಮಾಡಿ ಮಲಗಿದ್ದರು. ಬೆಳಿಗ್ಗೆ ನಿದ್ರಾ ಮಂಪರಿನಿಂದ ಎದ್ದ ಮೂವರು ರೆಸಾರ್ಟ್‌ನಲ್ಲೇ ಕಾಫಿ ಸೇವಿಸಿ ಸಮುದ್ರದ ದಡ ಸೊಬಗನ್ನು ವೀಕ್ಷಿಸಿ ಸಂಭ್ರಮಿಸಿದ್ದರು.

ನಂತರ ರೆಸಾರ್ಟ್‌ನ ಒಂದು ಬದಿಯಲ್ಲಿದ್ದ ಈಜುಕೊಳಕ್ಕೆ ಮೂವರು ಯುವತಿಯರು ಇಳಿದಿದ್ದಾರೆ. ಈ ವೇಳೆ ಯುವತಿಯೊಬ್ಬಳು ತನ್ನ ಬಳಿ ಇದ್ದ ಐ-ಫೋನ್‌ನಲ್ಲಿ ವೀಡಿಯೋ ರೆಕಾರ್ಡಿಂಗ್ ಆನ್ ಮಾಡಿ ಈಜುಕೊಳದ ಬದಿಯಲ್ಲಿಟ್ಟು ಬೆಳಿಗ್ಗೆ 10.04 ನಿಮಿಷಕ್ಕೆ ಈಜುಕೊಳಕ್ಕೆ ಇಳಿದಿದ್ದಾರೆ. ಕೇವಲ 4-5 ನಿಮಿಷ ಮೂವರು ನೀರಿನಲ್ಲಿಯೇ ಆಟವಾಡಿದ್ದಾರೆ.

ಮೂವರು ಯುವತಿಯರ ಅಂತಿಮ ಕ್ಷಣದ ವಿಡಿಯೋ ಮನಕಲುಕವಂತಿದೆ. ಬೀಚ್ ರೆಸಾರ್ಟ್‌ನ ಈಜುಕೊಳದಲ್ಲಿ ಆಟವಾಡುತ್ತಿದ್ದ ಮೈಸೂರಿನ ನಿಶ್ಚಿತ, ಪಾರ್ವತಿ ಹಾಗೂ ಕೀರ್ತನಾ ಕೊನೆಯ ಕ್ಷಣದಲ್ಲಿನ ಘಟನೆ ನಿಜಕ್ಕೂ ಬೆಚ್ಚಿ ಬೀಳಿಸುತ್ತಿದೆ. ಈಜುಕೊಳದಲ್ಲಿ ಸಹಾಯಕ್ಕಾಗಿ ಹಾಗೂ ವಿಶ್ರಾಂತಿಗಾಗಿ ಗಾಳಿ ತುಂಬಿದ ಟ್ಯೂಬ್‌ಗಳನ್ನು ಹಾಕಲಾಗಿತ್ತು. ಆದರೆ ಟ್ಯೂಬ್‌ಗಳು ಆಳ ನೀರಿನ ಮೇಲ್ಭಾಗದಲ್ಲಿತ್ತು. ಟ್ಯೂಬ್ ಮೇಲೆ ವಿಶ್ರಾಂತಿ ಪಡೆಯುವ ಅಥವಾ ಟ್ಯೂಬ್ ಬಳಸಿ ಮತ್ತಷ್ಟು ಆಟವಾಡುವಾ ಆಲೋಚನೆಯಲ್ಲಿ ಓರ್ವ ಯುವತಿ ಟ್ಯೂಬ್ ತರಲು ನೀರಿನಲ್ಲಿ ನಡೆದುಕೊಂಡು ಸಾಗಿದ್ದಾಳೆ.

ಟ್ಯೂಬ್ ಹಿಡಿದು ವಾಪಸ್ ತರಲು ಸಾಧ್ಯವಾಗಿಲ್ಲ. ಹೀಗಾಗಿ ಟ್ಯೂಬನ್ನು ಅಲ್ಲೇ ಬಿಟ್ಟಿದ್ದಾಳೆ. ಇದೇ ವೇಳೆ ಟ್ಯೂಬ್ ತರಲು ಹೋದ ಯುವತಿಯ ಹಿಂಭಾಗದಲ್ಲಿದ್ದ ಓರ್ವ ಯುವತಿ ನೀರಿನಲ್ಲೇ ಆಯ ತಪ್ಪಿದ್ದಾಳೆ. ಕೈಕಾಲು ಬಡಿದುಕೊಳ್ಳಲು ಆರಂಭಿಸಿದ್ದಾಳೆ. ಇದೇ ವೇಳೆ ಪಕ್ಕದಲ್ಲಿದ್ದ ಯುವತಿ ನೆರವಿಗೆ ಧಾವಿಸಿದ್ದಾಳೆ. ಕೈಚಾಚಿ ಯುವತಿಯನ್ನು ರಕ್ಷಿಸಲು ಮುಂದಾಗಿದ್ದಾಳೆ. ಆದರೆ ಮುಳುಗುತ್ತಿದ್ದ ಯುವತಿಯನ್ನು ರಕ್ಷಿಸಲು ಸಾಧ್ಯವಾಗಿಲ್ಲ. ಇಷ್ಟೇ ಅಲ್ಲದೇ ನೆರವಿಗೆ ಕೈಚಾಚಿದ ಯುವತಿ ಕೂಡ ನೀರಿನಲ್ಲಿ ಮುಳುಗಲು ಆರಂಭಿಸಿದ್ದಾಳೆ. ಈ ವೇಳೆ ಮತ್ತಷ್ಟು ಗಾಬರಿಗೊಂಡ ಮೂರನೇ ಯುವತಿ ಇಬ್ಬರನ್ನು ರಕ್ಷಿಸಲು ಕೈ ನೀಡಿದ್ದಾಳೆ. ಪರಿಣಾಮ ಮೂವರು ನೀರಿನಲ್ಲಿ ಮುಳುಗಿದ್ದಾರೆ. ಬದುಕುಳಿಯಲು ಹಲವು ಪ್ರಯತ್ನ ಮಾಡಿದರೂ ಯುವತಿಯರಿಗೆ ಸಾಧ್ಯವಾಗಿಲ್ಲ.

ಈಜುಕೊಳದ ನೀರಿನಲ್ಲಿ ಮುಳುಗುವ ವೇಳೆ ಮೂವರು ಯುವತಿಯರಿಗೆ ದಿಕ್ಕು ತೋಚದಂತಾಗಿದೆ. ಅಂತಿಮ ಕ್ಷಣದಲ್ಲಿ ರಕ್ಷಣೆಗೆ ಕೂಗಿ ಕೊಂಡರೂ ಅವರ ಕೂಗು ರೆಸಾರ್ಟ್ ಸಿಬ್ಬಂದಿಗಳ ಗಮನಕ್ಕೆ ಬಂದಿಲ್ಲ. ಇದರಿಂದ ಅವಾಯಕ ಮೂವರು ಯುವತಿಯರು ಕೆಲವೇ ನಿಮಿಷಗಳಲ್ಲಿ ಈಜುಕೊಳದಲ್ಲಿ ಮುಳುಗಿ ಧಾರುಣವಾಗಿ ಮೃತಪಟ್ಟಿದ್ದಾರೆ.

ಸಿಸಿ ಕ್ಯಾಮರಾ, ಮೊಬೈಲ್‌ನಲ್ಲಿ ದೃಶ್ಯ ಸೆರೆ: ಈಜುಕೊಳಕ್ಕೆ ಇಳಿಯುವ ಸಂದರ್ಭದಲ್ಲಿ ಓರ್ವ ಯುವತಿ ತನ್ನ ಐ-ಫೋನ್‌ನಲ್ಲಿ ವೀಡಿಯೋ ರೆಕಾರ್ಡಿಂಗ್ ಆನ್ ಮಾಡಿ ದಡದ ಮೇಲೆ ಇಟ್ಟಿದ್ದು, ಘಟನೆಯ ಸಂಪೂರ್ಣ ಮಾಹಿತಿ ಸೆರೆ ಹಿಡಿದಿದೆ. ಅಲ್ಲದೇ ಈಜು ಕೊಳದ ಬಳಿ ರೆಸಾರ್ಟ್ ವತಿಯಿಂದ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲೂ ಮೂವರು ಯುವತಿಯರು ಈಜುಕೊಳದಲ್ಲಿ ಆಟವಾಡಿ ನಂತರ ನೀರಿನಲ್ಲಿ ಮುಳುಗಿ ಮೃತಪಡುತ್ತಿರುವ ಸಂಪೂರ್ಣ ಚಿತ್ರಣ ದಾಖಲಾಗಿದೆ. 5 ನಿಮಿಷದೊಳಗೆ ಮೂವರು ಯುವತಿಯರು ಈಜುಕೊಳದ ತಳಭಾಗ ಸೇರಿ ಮೃತಪಟ್ಟಿರುವ ದೃಶ್ಯವುಳ್ಳ ವೀಡಿಯೋ ಕ್ಲಿಪ್ಪಿಂಗ್ ಅನ್ನು ಉಲ್ಲಾಳದ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ದೌಡಾಯಿಸಿದ ಪೊಲೀಸರು: ರೆಸಾರ್ಟ್‌ನ ಈಜುಕೊಳದಲ್ಲಿ ಮೂವರು ಯುವತಿಯರು ವಿಷಯ ತಿಳಿಯುತ್ತಿದ್ದಂತೆ ಉಲ್ಲಾಳದ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ಮಾಡಿದರು. ಈ ವೇಳೆ ಅಲ್ಲಿಯೇ ಇದ್ದ ಯುವತಿಯರ ಮೊಬೈಲ್‌ನಲ್ಲಿ ರೆಕಾರ್ಡ್ ಆಗುತ್ತಿರುವ ದೃಶ್ಯವನ್ನು ಗಮನಿಸಿದರು. ಅಲ್ಲದೇ ಸಿಸಿ ಕ್ಯಾಮರಾದ ದೃಶ್ಯಾವಳಿಗಳನ್ನು ಪರಿಶೀಲಿಸಿದ ಬಳಿಕ ಮೂವರು ಯುವತಿಯರ ಸಾವಿಗೆ ನಿಖರ ಕಾರಣ ತಿಳಿದು ಬಂತು.

ಪೋಷಕರಿಗೆ ಮಾಹಿತಿ: ಪ್ರವಾಸಕ್ಕೆಂದು ತೆರಳಿ ಮೃತಪಟ್ಟ ಯುವತಿಯರ ಮನೆಗೆ ಉಲ್ಲಾಳ ಪೊಲೀಸರು ಮಾಹಿತಿ ನೀಡಿ, ಮಂಗಳೂರಿಗೆ ಬರುವಂತೆ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮೂವರು ಯುವತಿಯರ ಪೋಷಕರು ಭಾನುವಾರ ಬೆಳಗ್ಗೆ 11.30ರ ವೇಳೆಗೆ ಪ್ರಯಾಣ ಬೆಳೆಸಿ ಸಂಜೆ ವೇಳೆಗೆ ಮಂಗಳೂರು ತಲುಪಿದ್ದಾರೆ.

ಸೋಮವಾರ ಮನೆಗೆ ಬರುತ್ತೇನೆ ಎಂದಿದ್ದರು

"ಬಾಲ್ಯದ ಸ್ನೇಹಿತೆಯರೊಂದಿಗೆ ನನ್ನ ಸಹೋದರಿ ಶುಕ್ರವಾರ ಸಂಜೆಯಷ್ಟೇ ಮಂಗಳೂರು ಪ್ರವಾಸಕ್ಕೆ ತೆರಳಿದ್ದರು. ಬೆಳಗ್ಗೆಯಷ್ಟೇ ತಂದೆಗೆ ಕರೆ ಮಾಡಿ ಸೋಮವಾರ ವಾಪಸ್ ಬರು ವುದಾಗಿ ತಿಳಿಸಿದ್ದರು. ಆದರೆ ಈ ಘಟನೆ ಸಂಭವಿಸಿದೆ.

- **ದರ್ಶನ್**, ನಿಶಿತಾ ಸಹೋದರ.

ವೀಡಿಯೋ ಕಾಲ್ ಮಾಡಿದ್ದಳು

"ರೆಸಾರ್ಟ್‌ನಲ್ಲಿ ಸ್ನೇಹಿತೆಯರೊಂದಿಗೆ ಇರುವುದನ್ನು ಶನಿವಾರ ರಾತ್ರಿ ವೀಡಿಯೋ ಕಾಲ್ ಮೂಲಕ ನಮಗೆ ತೋರಿಸಿ ನಾಳೆ ಬೆಳಗ್ಗೆ ಮೈಸೂರಿಗೆ ಬರುತ್ತೇನೆ ಎಂದು ನನ್ನ ಮಗಳು ಪಾರ್ವತಿ ತೋರಿಸಿದ್ದಳು. ಆದರೆ ಇಂದು ಬೆಳಗ್ಗೆ ಈಜುಕೊಳದಲ್ಲಿ ಮೃತಪಟ್ಟಿರುವ ಸುದ್ದಿ ತಿಳಿದು ಆಘಾತವಾಗಿದೆ. ನೀರಿನಲ್ಲಿ ಮುಳುಗುತ್ತಿದ್ದ ಸ್ನೇಹಿತೆಯರನ್ನು ರಕ್ಷಣೆ ಮಾಡಲು ಹೋಗಿ ಮೃತಪಟ್ಟಿದ್ದಾಳೆ.

-**ಮಂಜುಳ**, ಪಾರ್ವತಿ ತಾಯಿ

ಎಚ್ಚರಿಕೆಯ ಗಂಟೆ

ಮಂಗಳೂರು ರೆಸಾರ್ಟ್‌ನ ಈಜುಕೊಳದ ದುರಂತ ಮೈಸೂರು ನಗರ ಹಾಗೂ ಹೆಚ್.ಡಿ.ಕೋಟೆ, ಹುಣಸೂರು, ಪಿರಿಯಾಪಟ್ಟಣ ಸೇರಿದಂತೆ ಜಿಲ್ಲೆಯ ವಿವಿಧೆಡೆ ಇರುವ ರೆಸಾರ್ಟ್‌ಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ. ಈಜುಕೊಳದ ಆಳ, ಅಗಲ, ರಕ್ಷಣಾ ಸಾಮಗ್ರಿಗಳು, ರಕ್ಷಾಕವಚ ಸೇರಿದಂತೆ ಅಗತ್ಯ ಸಲಕರಣೆಗಳಿಲ್ಲದೇ ಪ್ರವಾಸಿಗರ ಜೀವದಲ್ಲಿ ಚೆಲ್ಲಾಟವಾಡುತ್ತಿರುವ ಆರೋಪ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಸಂಬಂಧಪಟ್ಟ ಪೊಲೀಸರು ರೆಸಾರ್ಟ್‌ಗಳಲ್ಲಿ ಕೈಗೊಂಡಿರುವ ಸುರಕ್ಷಿತ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR SALE
30X40 South East Corner Ground 2 BHK, 1st 1 room Teacher's Layout Near Devegowda Circle Mysore
9980951235

MUDA Site for SALE
ಇನ್ಫೋಸಿಸ್ ಪಕ್ಕದ "K.B.L ಸಿಲಿಕಾನ್ ಸಿಟಿ" ಲೇಔಟ್ನಲ್ಲಿ ಸೈಟುಗಳು ಲಭ್ಯ. ಬೆಲೆ – 45 ಲಕ್ಷ
Mob: 9886048471

HOME APPLIANCES SERVICE
ಫ್ರಿಡ್ಜ್, ವಾಶಿಂಗ್ ಮೆಶೀನ್, ಮೈಕ್ರೋವೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ವಾಟರ್ ಪ್ಯೂರಿಫೈಯರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas 9379699229

"ಶೋಭಾ ಡೆವಲಪರ್ಸ್"
ಸೈಟುಗಳು ಮಾರಾಟಕ್ಕಿವೆ @ "ಶೋಭ ರಿಟ್ರೀಟ್" ಲೇಔಟ್, ಬೋಗಾದಿ ರಸ್ತೆ, ಮೈಸೂರು.
Mob: 9886048471

FULLY FURNISHED FLAT FOR SALE
East Facing Ground Floor at Vijayanagar 3rd stage.
9353990365

ಕೆಲಸಕ್ಕೆ ಬೇಕಾಗಿದ್ದಾರೆ
ಮೆಡಿಕಲ್ ಸ್ಟೋರ್‌ನಲ್ಲಿ ಅನುಭವವಿರುವ ಮತ್ತು ಕಂಪ್ಯೂಟರ್ ನಾಲೆಡ್ಜ್ ಇರುವ ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
99010 80314

TNI TECHNOLOGIES
Dr. Rajkumar Road & Bogadi, MYSORE
100% Job Oriented Courses
SAP FICO/MM/SD/HR
TALLY With GST
AutoCAD, 3DSMAX
WEB DESIGN
Java/Python Full Stack
8951208347



Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

JOB OPPORTUNITY
Only for Retired Persons, Rtd., Foreign Returnees and highly educated home makers. Contact:
7406833379
9902508150

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಮನೆ ಭೋಗ್ಯಕ್ಕಿದೆ
ವಸಂತ ನಗರ, ಅತಿಥಿ ಎನ್‌ಕ್ಲೇವ್, ಪೂರ್ವ ದಿಕ್ಕಿನ ಮನೆ.
Mob: 93421 25063

MUDA APPROVED SITES FOR SALE
30x40
Near Infosys & BEML
Call Now @ 88614 40528 / 97314 00249

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಮನೆ ಭೋಗ್ಯಕ್ಕಿದೆ
G/F, F/F, S/F
2 BHK,W/F
MANDI MOHALLA, NEAR MEGA MOBILES, MYSORE-1
7204503944, 7019423505

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ KRS ರಸ್ತೆಯ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲು ಪುರುಷರು Helpers (7th, 8th, 9th or 10th Pass) ಬೇಕಾಗಿದ್ದಾರೆ. ಒಳ್ಳೆಯ ವೇತನ ಹಾಗೂ ಇ.ಎಸ್.ಐ., ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9611238376
7795794028

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ House Keeping Field Officer Security Field Officer ಬೇಕಾಗಿದ್ದಾರೆ.
9538886328

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸೈಟುಗಳು ಮಾರಾಟಕ್ಕಿವೆ
ಇಲವಾಲ ಬೈಪಾಸ್ ರಸ್ತೆಯ ಭೂಮಿಕ ಬಡಾವಣೆಗೆ ಹೊಂದಿಕೊಂಡಂತಿರುವ 'ವೈಶಾಖ ಲೇಕ್ ವ್ಯೂ' ಬಡಾವಣೆಯಲ್ಲಿ ಅತೀ ಕಡಿಮೆ ಬೆಲೆಗೆ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ
6360633036, 9606981213

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

Wanted Accountant
Experienced Full time ACCOUNTANT
Tally prime / E filling / GST filling work etc
Freshers Not allowed.
@ Bannimantap. Contact
8618312269

ಬೇಕಾಗಿದ್ದಾರೆ
ಕೌಂಟರ್ (Parcel packing), ಸರ್ವೀಸ್ (Waiter - supplier) & South Assistant (Cutting Grinding, Helper).
ಸ್ಥಳ: ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂ ದಲ್ಲಿ ಉಜ್ಜೀವನ್ ಬ್ಯಾಂಕ್ ಮುಂದೆ. ಸಂಪರ್ಕಿಸಿ:
7899028086

ಪ್ರಮಾಣ ಪತ್ರ
ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು, ಕಾಮಗೆರೆ ಗ್ರಾಮ, ಕೊಂಗರಹಳ್ಳಿ, ಮನೆ ನಂ. 53ಎ ಮೇನ್ ರೋಡ್ ಇಲ್ಲಿ ವಾಸವಾಗಿರುವ ಮಧು. ಎಂ. ಆದ ನಾನು ಪ್ರಮಾಣೀಕರಿಸುವುದೇನೆಂದರೆ, ಆಧಾರ್ ಕಾರ್ಡ್, ಪಾನ್‌ಕಾರ್ಡ್, ಅಂಕ ಪಟ್ಟಿಗಳಲ್ಲಿ ನನ್ನ ಹೆಸರು ಮಧು ಎಂ. ಎಂದು ನಮೂದಾಗಿರುತ್ತದೆ. ಆದರೆ ಕೋಟಾಕ್ ಮಹೀಂದ್ರ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ನನ್ನ ಹೆಸರು ಎಂ. ಮಧು ಎಂದು ನಮೂದಾಗಿರುತ್ತದೆ. ಮಧು ಎಂ. ಮತ್ತು ಎಂ. ಮಧು ಎಂಬ ಎರಡೂ ಹೆಸರುಗಳು ನನ್ನದೇ ಎಂದು ನೋಟರಿ ಸಿ.ಆರ್. ಸೀತಾರಾಂ ರವರ ಎದುರು ಪ್ರಮಾಣೀಕರಿಸುತ್ತೇನೆ.
ಸಹಿ/– ಮಧು. ಎಂ.

ಬೇಕಾಗಿದ್ದಾರೆ
* ಹೌಸ್‌ಕೀಪಿಂಗ್ ಹುಡುಗರು
* ಸೆಕ್ಯೂರಿಟಿ ಗಾರ್ಡ್
ಹೋಟೆಲ್ ಉದ್ಯಮದಲ್ಲಿ ಅನುಭವಹೊಂದಿರಬೇಕು. ಪ್ರತಿಷ್ಠಿತ ಹೋಟೆಲ್ (ಲಾಡ್ಜ್), 30 ರೂಮುಗಳಿದ್ದು, ಸಂತ ಫಿಲೋಮಿನಾ ಚರ್ಚ್ ಹತ್ತಿರ, ಅಶೋಕ ರಸ್ತೆ, ಮೈಸೂರಿನಲ್ಲಿರುವ ಹೋಟೆಲ್‌ಗೆ ಬೇಕಾಗಿದ್ದಾರೆ. ಸಂಪರ್ಕಿಸಿ:
6363477213, 9538651845

ಮಾರ್ಕೆಟಿಂಗ್ ಗಾಗಿ
BE / Diploma ಎಜುಕೇಷನ್ ಹೊಂದಿರುವ ಹುಡುಗರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
Mob: 9606487762
ತಿಂಗಳಿಗೆ 15,000 – 50,000

ಬೇಕಾಗಿದ್ದಾರೆ
ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು, ಯುವಕ/ ಯುವತಿಯರು, ಮಹಿಳೆಯರು, ವಿಧವೆಯರು/ ವಿಚ್ಛೇದಿತೆಯರು ಹೋಮ್ ನರ್ಸ್ ಕೆಲಸಕ್ಕೆ ಬೇಕಾಗಿದ್ದಾರೆ. ನಮ್ಮಲ್ಲೇ ಕಡ್ಡಾಯವಾಗಿ ಉಳಿದು ಕೊಳ್ಳುವವರಿಗೆ ಮಾತ್ರ ಅವಕಾಶ. (ಮಹಿಳಾ ಅಡುಗೆ ಭಟ್ಟರು ಕೂಡ ಬೇಕಾಗಿದ್ದಾರೆ). ಸಂಬಳ 15,000 ರಿಂದ 20,000ವರೆಗೆ. ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ
9591547239, 9632039123

SITE FOR SALE
40x60
North face, Shakti Nagar, (Behind Sub Registrar Office).
9886653351, 9986984268
Contact buyers only. BROKERS EXCUSE

WANTED BRIDE
Boy: 29 years. Bharadwaja, Smartha Brahmin, B.E. - CS, Qualy-3 Technologies Dept., Bangalore.
9902989922, 6360461507

FOR SALE
1. 20x30, 30x40, Sites @ Bogadi, Rainbow School
2. 40x50 SE Crnr 2BHK 4 Houses Near ISKCON Temple
3. 20x30 Site at Vijaya Nagar 4th Stage.
4. Commercial Properties @ Kuvempu Nagar, Saraswati Puram & More.
5. 20x30, Sites & House near Yelwala 30x40 Sites attached to Brahmins Lyt
PRAKRUTHI PROPERTIES
95386 90359, 90359 90359

Wanted Tele Callers and trainers immediately
9686631051

ಸುವರ್ಣಾವಕಾಶ
ಪ್ರಸಿದ್ಧ ಷೋರೂಂ ಮತ್ತು ಕಂಪನಿ ವರ್ಕ್ ಫ್ರಂ ಹೋಂ ಕೆಲಸಕ್ಕೆ ಯುವಕರು ಮತ್ತು ಯುವತಿಯರು ತಕ್ಷಣ ಬೇಕಾಗಿದ್ದಾರೆ. ಗ್ಯಾರೆಂಟಿ ಕೆಲಸ 100%
9035022290
9902246741

ಮನೆ ಮಾರಾಟಕ್ಕಿದೆ
20x30 Corner ಶ್ರೀರಾಂಪುರ
30x40 Duplex ಶ್ರೀರಾಂಪುರ
30x40 ಶ್ರೀರಾಂಪುರ
9908711654

28x40 S/W ಕಾರ್ನರ್ ಸೈಟು ಮಾರಾಟಕ್ಕಿದೆ.
DTCP "A" ಖಾತೆ
15 ಲಕ್ಷದ 25 ಸಾವಿರಗಳು
GSS ಲೇಔಟ್ ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9742198093

ನಿವೃತ್ತರಿಗೆ ವಿಶೇಷ ಅವಕಾಶದ ಸದಿವಕಾಶ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶ ಬಿಸಿನೆಸ್ ವಲಯ ಹಾಗೂ ಗೃಹಿಣಿಯರಿಗೂ ಅವಕಾಶ Salary + PF + ESI + ಇನ್ಸೆಂಟೀವ್ ವಿದೇಶ ಪ್ರಯಾಣ ಅವಕಾಶ. ಬೇಕಾಗುವ ದಾಖಲಾತಿಗಳು 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್ ಮೊದಲನೇ ಪೇಜ್, 5) ವಿದ್ಯಾರ್ಹತೆ ದಾಖಲಾತಿ ಸ್ಥಳ ಮಯೂರ ಹೊಯ್ಸಳ ಹೋಟೆಲ್ ಮೆಟ್ರೋಪೋಲ್ ಹೋಟೆಲ್ ಎದುರು, ದಿ.19–11–24, ಬೆ:11.00 ಗಂಟೆಗೆ (ಊಟದ ವ್ಯವಸ್ಥೆ ಇದೆ.) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
9611198345, 9663136318
9900251230

VACANCIES FOR SCRUBNURSE
9343055819

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್‌ಗಳು
ಸ್ಥಳ: ಹೂಟಗಳ್ಳಿ, ಮೈಸೂರು ಸಿಟಿ ವಿದ್ಯಾರಣ್ಯಪುರಂ, ಕೆ.ಆರ್.ಎಸ್‌ರಸ್ತೆ
9686422400
9242406261

ಕೆಲಸಕ್ಕೆ ಬೇಕಾಗಿದ್ದಾರೆ
ಲೇಡಿಸ್ PG ಯಲ್ಲಿ ಅಡುಗೆ ಹೆಲ್ಪರ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. PG ಯಲ್ಲೇ ಉಳಿಯಬೇಕು.
9986622769

ಸುವರ್ಣಾವಕಾಶ
ವಿಶೇಷವಾಗಿ ಸರ್ಕಾರದಿಂದ ನಿವೃತ್ತಿ ಹೊಂದಿರುವ ಹಾಗೂ ಸ್ವಯಂ ನಿವೃತ್ತಿ ಹೊಂದಿರುವ ಸರ್ಕಾರಿ ನೌಕರರಿಗೆ, ಖಾಸಗಿ ಬೋಧಕ ವೃಂದದವರಿಗೆ ಆಸಕ್ತಿ ಇರುವ ಇತರೆ ಅಭ್ಯರ್ಥಿಗಳಿಗೆ ಆಫೀಸರ್ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಫಿಕ್ಸಡ್ ತಿಂಗಳ ಸಂಬಳ ಇ.ಎಸ್.ಐ, ಪಿ.ಎಫ್ ಸಂಪರ್ಕಿಸಿ:
8183072085
9164903535

TEACHERS WANTED
PUC, D.Ed, BA, B.Sc, B.Ed, MA, M.Sc, English Fluency Teachers.
WANTED
Sadviveka English Medium School Vijayanagar 4th Stage, Basavanapura Mysore-32
-L.E.Manjunatha, Secretary
9986567404

ಸೈಟು ಮಾರಾಟಕ್ಕಿದೆ
30x40 ಹಳೆ ಕೆಸರೆ ಟೀಚರ್ ಕಾಲೋನಿಯಲ್ಲಿ ಉತ್ತರದಿಕ್ಕಿನ ಖಾಲಿ ನಿವೇಶನ ಮಾರಾಟಕ್ಕಿದೆ
9916906600

JOB ORIENTED
Management Course
Short Term 100% Placement
Learn from Professionals
- TALLY ACCOUNTS
- GST ACCOUNTS
- OFFICE MANAGEMENT
- TAXATION, ESI & PF WOR
9972209967

REPAIR SERVICES
ಎಲ್ಲಾ ವಿಧವಾದ ಗೃಹ ಉಪಯೋಗಿ ಎಲೆಕ್ಟ್ರಿಕ್ ಮತ್ತು ಗ್ಯಾಸ್ ಉಪಕರಣಗಳನ್ನು ಉತ್ತಮ ಬಿಡಿ ಭಾಗಗಳನ್ನು ಬಳಸಿ ರಿಪೇರಿ ಮಾಡಲಾಗುತ್ತದೆ. ವಿವರಗಳಿಗಾಗಿ ಸಂಪರ್ಕಿಸಿ: ಈಶ್ವರಿ ಎಲೆಕ್ಟ್ರಿಕಲ್ಸ್, ವಿದ್ಯಾರಣ್ಯಪುರ, ಮೈಸೂರು
9353267509

ಕೆಲಸ ಖಾಲಿ ಇದೆ ಬೇಕಾಗಿದ್ದಾರೆ
ಗಾರೆ ಕೆಲಸ, ಪೈಂಟಿಂಗ್ ಕೆಲಸ Computer ಕೆಲಸ ಎಲೆಕ್ಟ್ರಿಷನ್ ಕೆಲಸ ಪ್ಲಂಬಿಂಗ್ ಕೆಲಸ ಟೈಲ್ಸ್ ಕೆಲಸ ಖಾಲಿ ಇದೆ.
8618253781

WANTED
For a Reputed Company
1. Interior Designer
2. Receptionist Cum Office Assistant
Contact: 7022354141

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ESI, PF ನೊಂದಿಗೆ ಉಚಿತ ವಸತಿ ಮತ್ತು ಆಹಾರ ಸೌಲಭ್ಯವಿರುತ್ತದೆ.
ಸ್ಥಳ: ಬಂಡಿಪಾಳ್ಯ, ಮೈಸೂರು
9739294107

SITES FOR SALE
30x40 University Layout Lingambudi
30x50 Site in Prashantanagar Dadadahalli
9900154322

ಬೇಕಾಗಿದ್ದಾರೆ
1) ಅನುಭವವುಳ್ಳ ಇಬ್ಬರು ಅರ್ಚಕರುಗಳು ಬೇಕಾಗಿದ್ದಾರೆ
2) ಒಬ್ಬರು ಗುಮಾಸ್ತರು ಬೇಕಾಗಿದ್ದಾರೆ
3) ಒಬ್ಬರು ದೇವಸ್ಥಾನದಲ್ಲಿ ಅರ್ಚನೆ ಚೀಟಿ ಕೊಡುವುದಕ್ಕೆ ಮತ್ತು ಸೀರೆ ಮಾರಾಟ ಮಾಡುವುದಕ್ಕೆ ಹೆಂಗಸರು/ ಗಂಡಸರು ಬೇಕಾಗಿದ್ದಾರೆ.
4) ಇಬ್ಬರು ಹೆಂಗಸರುಗಳು ದೇವಸ್ಥಾನದಲ್ಲಿ ಸ್ವಚ್ಛತಾ ಕಾರ್ಯ ಮಾಡಲು ಬೇಕಾಗಿರುತ್ತಾರೆ.
ಸಂಪರ್ಕಿಸಬೇಕಾದ ವಿಳಾಸ: ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ, ಚಾಮುಂಡಿವನಂ, ವಿದ್ಯಾರಣ್ಯಪುರಂ, ಮೈಸೂರು–08
ಮೊ: 9448053321

WANTED
Parttime/Fulltime Receptionist for a Doctor's Clinic in Kuvempunagar, with the Knowledge of Excel & Tally
9663376393

REQUIRED FOR A REPUTED DISTRIBUTING COMPANY @ HEBBAL INDUSTRIAL AREA
For MARKETING - MALE CANDIDATE
Qualification: Dip-Mechanic, ITI & BSc
1-2 Years Experience.....
9972029007
9448246695

JOB'S IN MYSORE
ಯುವತಿಯರು Age(18-22) Project Manager ಗಳಾಗಿ 10th,Puc, BBM ಯಾದ Earn (10,400/- ರಿಂದ 18500/- PM, Only Freshers ಪರಸ್ಥಳದರಿಗೆ ಮಾತ್ರ, ವಸತಿ ವಿವರಗಳೊಂದಿಗೆ ನೇರ ಸಂಪರ್ಕಿಸಿ ಯಾವುದೇ ಶುಲ್ಕವಿರುವುದಿಲ್ಲ.
Call Kavya
9342827788

ಕಳೆದಿರುತ್ತದೆ
ಶಾಂತಲಕ್ಷ್ಮಿ W/o ಸುರೇಂದ್ರಗುಪ್ತ SKPT ರಸ್ತೆ ಹನೂರು ಕೊಳ್ಳೇಗಾಲ ತಾಲ್ಲೂಕು ಚಾಮರಾಜನಗರ ಜಿಲ್ಲೆ ಇವರಿಗೆ ಸೇರಿದ ಮೂಲ ಪ್ರತಿ ಖಾತೆ 232,N-16,16/1 ಮೊಹಿದ್ದಿನ್ ಸಾಬ್ ರಸ್ತೆ ನಜರ್‌ಬಾದ್ ಮೊಹಲ್ಲಾ, ಮೈಸೂರು–570010 ಮೂಲ ಪ್ರತಿ ಕಳೆದಿರುತ್ತದೆ. ಸಿಕ್ಕಿದಲ್ಲಿ ಸಂಪರ್ಕಿಸಿರಿ
6360798626
8147811702

ಬೇಕಾಗಿದ್ದಾರೆ
ಕಂಪ್ಯೂಟರ್ ಅಂಗಡಿಯಲ್ಲಿ DTP ಮತ್ತು Online ಅರ್ಜಿ ಹಾಕಲು ನುರಿತ ಮಹಿಳೆ ಬೇಕಾಗಿದ್ದಾರೆ. 2 ವರ್ಷದ ಅನುಭವ ಇರುವವರಿಗೆ ಆದ್ಯತೆ. ಸಂಬಳ– 12000
ಸಮಯ: 9am to 6pm
ಸ್ಥಳ: ಮೈಸೂರು
9480918242

ಮನೆ ಮಾರಾಟಕ್ಕಿದೆ
ಮೈಸೂರು ನಗರದಲ್ಲಿನ ರಾಮಕೃಷ್ಣನಗರ ಇ & ಎಫ್ ಬ್ಲಾಕ್ 4ನೇ ಸಿ ಕ್ರಾಸ್ (ಪೊಲೀಸ್ ಠಾಣೆ ಹಿಂಭಾಗದ ರಸ್ತೆಯಲ್ಲಿ)ನಲ್ಲಿ ಮೂಡದಿಂದ ಮಂಜೂರಾಗಿರುವ 12x33 ಅಡಿ ನಿವೇಶನದಲ್ಲಿ ಹೊಸದಾಗಿ ಮನೆ ಕಟ್ಟಿ 2 ವರ್ಷ ಆಗಿರುವ ಇಂಡಿಪೆಂಡೆಂಟ್ 1BHK ಮನೆ ಮಾರಾಟಕ್ಕಿದೆ.
8277678007
9739925015

ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 45
ಸಂಬಳ: 17000+ESI+PF=22000
ಒಳಗೊಂಡುWeek Off ಹಾಗೂ 3 Shift ಗಳು ಇರುತ್ತದೆ.
ಹೆಚ್ಚಿನ ಮಾಹಿತಿಗಾಗಿ ಬೆಳಿಗ್ಗೆ 9 ಗಂಟೆಗೆ ಬಂದು ಸಂಪರ್ಕಿಸಿ
ಸ್ಥಳ: CIPET ಕಾಲೇಜ್ ಹತ್ತಿರ, ಮೇಟಗಳ್ಳಿ, ರಿಂಗ್ ರೋಡ್, ಮೈಸೂರು
9986874574

ವಾಣಿಜ್ಯ ನಿವೇಶನಗಳು ಮಾರಾಟಕ್ಕಿದೆ
1) 45x60 ಉತ್ತರ ಮುಖಿ ಆದಿಚುಂಚನಗಿರಿ 80 ಅಡಿ ರಸ್ತೆ, KSRTC ಡಿಪೋ ಹತ್ತಿರ N ಬ್ಲಾಕ್ ಕುವೆಂಪುನಗರ, ಮೈಸೂರು
2) 50x80 ಪಶ್ಚಿಮ ಮುಖಿ, ಅಪೋಲೋ ಆಸ್ಪತ್ರೆ ಹತ್ತಿರ, ಆದಿಚುಂಚನಗಿರಿ ಮುಖ್ಯ ರಸ್ತೆ 80 ಅಡಿ ರಸ್ತೆ ಕುವೆಂಪುನಗರ ಮೈಸೂರು
9448166798

ಮೈಸೂರು ಮಿತ್ರ 45 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ವೈಭವದ ಶ್ರೀಕಂಠೇಶ್ವರಸ್ವಾಮಿ ಚಿಕ್ಕಜಾತ್ರಾ ಮಹೋತ್ಸವ



ಶ್ರೀಕಂಠೇಶ್ವರ ಸ್ವಾಮಿಯವರ ಚಿಕ್ಕಜಾತ್ರಾ ರಥೋತ್ಸವ ವೈಭವಯುತವಾಗಿ ನೆರವೇರಿತು.

ರಥೋತ್ಸವ ಸೊಬಗು ಕಂಡು ಪುಳಕಿತರಾದ ಭಕ್ತವೃಂದ, ನಾಳೆ ತೆಪ್ಪೋತ್ಸವ

ನಂಜನಗೂಡು, ನ.17– ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯವರ ಚಿಕ್ಕಜಾತ್ರಾ ಮಹೋತ್ಸವ ಭಾನುವಾರ ಸಾವಿರಾರು ಭಕ್ತರ ಉದ್ಘೋಷ, ಜಯಘೋಷ, ಜೈಕಾರದ ನಡುವೆ ವೈಭವಯುತವಾಗಿ ನೆರವೇರಿತು.

ಜಾತ್ರಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಸಂಭ್ರಮ, ಸಡಗರದಿಂದ ಪಾಲ್ಗೊಂಡು ರಥೋತ್ಸವಗಳ ವೈಭವ ಕಂಡು ಭಕ್ತಿಯಿಂದ ಹಣ್ಣು ದವನ ಎಸೆದು ಹರಕೆ ತೀರಿಸಿದರು.

ಚಿಕ್ಕಜಾತ್ರಾ ಮಹೋತ್ಸವ ಅಂಗವಾಗಿ ಮುಂಜಾನೆ 4 ಗಂಟೆಯಿಂದಲೇ ದೇವಾಲಯದಲ್ಲಿ ಪಾರ್ವತಿ ಸಮೇತ ಶ್ರೀಕಂಠೇಶ್ವರ ಸ್ವಾಮಿ ಅವರಿಗೆ ಕ್ಷೀರಾಭಿಷೇಕ, ಫಲಪಂಚಾಮೃತಾಭಿಷೇಕ ಹಾಗೂ ಮಹಾನ್ಯಾಸ ಪೂರ್ವಕವಾಗಿ ರುದ್ರಾಭಿಷೇಕ ನೆರವೇರಿಸಲಾಯಿತು. ನಂತರ ದೇವಾಲಯದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಪ್ರಾತಃಕಾಲ ಪೂಜೆ, ನಿತ್ಯೋತ್ಸವ ಹಾಗೂ ಸಂಗಮ ಕಾಲ ಪೂಜೆ, ಮಧ್ಯಾಹ್ನ ಕಾಲ ಪೂಜೆಯೊಂದಿಗೆ ಮಹಾಮಂಗಳಾರತಿ ನೆರವೇರಿಸಿದ ಬಳಿಕ ದೇವಾಲಯದ ಒಳಾವರಣದಲ್ಲಿ ಗಣಪತಿ ಪೂಜೆ, ನವಗ್ರಹ ಪೂಜೆ, ಸ್ವಾಮಿಯವರ ಉತ್ಸವ ನೆರವೇರಿಸಿದ ನಂತರ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿ, ಬೆಳಗ್ಗೆ 10.45 ರಿಂದ 11.30 ಗಂಟೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ರಥಗಳಲ್ಲಿ ದೇವರ ಉತ್ಸವಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ನಂತರ ಮಹಾಮಂಗಳಾರತಿ ನೆರವೇರಿಸುವುದರೊಂದಿಗೆ ಶಾಸಕ ದರ್ಶನ್ ರಥದ ಹಗ್ಗ ಎಳೆಯುವ ಮೂಲಕ ರಥೋತ್ಸಕ್ಕೆ ಚಾಲನೆ ನೀಡಿದರು.

ಮೊದಲಿಗೆ ಮಹಾಗಣಪತಿ ಮತ್ತು ಚಂಡಿಕೇಶ್ವರ ರಥ, ಪಾರ್ವತಿ ಸಮೇತ ಶ್ರೀಕಂಠೇಶ್ವರ ರಥ, ಕೊನೆಯದಾಗಿ ಮನೋನ್ಮಣಿ ಅಮ್ಮನವರ ರಥೋತ್ಸವಗಳನ್ನು ರಥ ಬೀದಿಯಲ್ಲಿ ಎಳೆಯಲಾಯಿತು. ಮೂರೂ ರಥಗಳು ಯಾವುದೇ ಅಡ್ಡಿ ಆತಂಕವಿಲ್ಲದೆ 1.2 ಕಿಮೀ ದೂರ ಕ್ರಮಿಸಿ 12 ಗಂಟೆಗೆ ಸ್ವಸ್ಥಾನ ತಲುಪಿದವು.

ಉತ್ಸವಮೂರ್ತಿಗೆ ವಜ್ರ, ವೈಢೂರ್ಯ, ಕಿರೀಟ ಧಾರಣೆ, ಮುತ್ತು ಹವಳಗಳಿಂದ ಮತ್ತು ಬಣ್ಣ ಬಣ್ಣದ ಹೂಗಳಿಂದ ಶೃಂಗರಿಸಲಾಗಿತ್ತು. ದೇವಾಲಯದ ಸುತ್ತಮುತ್ತ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ರಥ ಸಂಚರಿಸುವಾಗ ರಸ್ತೆಯ ಇಕ್ಕೆಲಗಳಲ್ಲಿ ನಿಂತಿದ್ದ ಭಕ್ತರು ದೇವರ ದರ್ಶನ ಪಡೆದು ಹಣ್ಣು-ಧವನ ಎಸೆದು ಹರಕೆ ತೀರಿಸಿ ಭಕ್ತಿ ಮೆರೆದರು.

ನಂತರ ಹಂಸವಾಹನ ಉತ್ಸವ, ಸಂಜೆ ನಟೇಶ ಉತ್ಸವಗಳು ಜರುಗುವ ಮೂಲಕ ರಥೋತ್ಸವ ಯಶಸ್ವಿಯಾಯಿತು. ನ.19ರಂದು ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ನಡೆಯಲಿದ್ದು, ನಂತರ ಶಯನೋತ್ಸವ ಜರುಗುವುದರೊಂದಿಗೆ ಚಿಕ್ಕಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ. ಚಿಕ್ಕಜಾತ್ರಾ ಮಹೋತ್ಸವದ ಅಂಗವಾಗಿ ವಿವಿಧ ಸಂಘ ಸಂಸ್ಥೆಗಳು ಪ್ರಸಾದ ವಿತರಣೆ ಮಾಡಿದವು. ದೇವಾಲಯದ ದಾಸೋಹ ಭವನದಲ್ಲಿ ವಿಶೇಷವಾಗಿ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ರಥೋತ್ಸದ ವೇಳೆ ದೇವಾಲಯದ ಇಓ ಜಗದೀಶ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ನಗರ ಸಭಾಧ್ಯಕ್ಷ ಶ್ರೀಕಂಠ ಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್, ನಗರಸಭಾ ಸದಸ್ಯರಾದ ಗಾಯಿತ್ರಿ, ಗಂಗಾಧರ್, ಯೋಗೇಶ್, ಮುಖಂಡರಾದ ಶ್ರೀಧರ್, ಗೋವಿಂದರಾಜು, ದೇವಾಲಯದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಹಾಗೂ ಅರ್ಚಕ ವೃಂದ, ಸಿಬ್ಬಂದಿ ಇದ್ದರು.

ಕಟ್ಟಡ ಕಾರ್ಮಿಕರ ಕಲ್ಯಾಣಕ್ಕೆ ಕಾಂಗ್ರೆಸ್ ಸರ್ಕಾರ ಬದ್ಧ

ಕಾರ್ಮಿಕರಿಗೆ ಟೂಲ್‌ಕಿಟ್ ವಿತರಿಸಿದ ಶಾಸಕ ದರ್ಶನ್



ಕಾರ್ಮಿಕರಿಗೆ ಶಾಸಕ ದರ್ಶನ್ ಟೂಲ್ ಕಿಟ್ ವಿತರಿಸಿದರು.

ನಂಜನಗೂಡು, ನ.17– ದೇಶವನ್ನು ಸುಭದ್ರವಾಗಿ ಕಟ್ಟುವಲ್ಲಿ ರೈತರು ಮತ್ತು ಯೋಧರ ಪಾತ್ರ ಎಷ್ಟು ಮುಖ್ಯವೋ, ಕಾರ್ಮಿಕರ ಶ್ರಮವೂ ಅಷ್ಟೇ ಮುಖ್ಯ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರದ ನಾಗಮ್ಮ ಶಾಲಾವರಣದಲ್ಲಿರುವ ಶಿಕ್ಷಕರ ಭವನದಲ್ಲಿ ಕಾರ್ಮಿಕರ ಇಲಾಖೆ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಟೂಲ್ ಕಿಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಕಟ್ಟಡ ಕಾರ್ಮಿಕರ ಕಲ್ಯಾಣಕ್ಕೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದ್ದು, ಸಿಎಂ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಕಟ್ಟಡ ಕಾರ್ಮಿಕರಿಗಾಗಿ ಹಲವು ಕಲ್ಯಾಣ ಕಾರ್ಯಕ್ರಮ ರೂಪಿಸಿದ್ದಾರೆ. ಅಲ್ಲದೇ ಸರ್ಕಾರದಿಂದ ಪಿಂಚಣಿ ಸೌಲಭ್ಯ, ಅಪಘಾತ ಪರಿಹಾರ, ವೈದ್ಯಕೀಯ ಸಹಾಯಧನ, ತಾಯಿ ಮಗು ಸಹಾಯ ಹಸ್ತ, ಹೆರಿಗೆ ಸೌಲಭ್ಯ, ಮದುವೆ ಸಹಾಯಧನ, ಪ್ರಮುಖ ವೈದ್ಯಕೀಯ ವೆಚ್ಚ ಸಹಾಯಧನ, ಶೈಕ್ಷಣಿಕ ಸಹಾಯ ಧನ, ವಿದ್ಯಾರ್ಥಿ ವೇತನ ಸೌಲಭ್ಯ, ಟೂಲ್ ಕಿಟ್ ವಿತರಣೆ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಜೊತೆಗೆ ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರದ 5 ಗ್ಯಾರಂಟಿ ಯೋಜನೆಗಳು ಬಡವರ, ಶ್ರಮಿಕರ ಬದುಕನ್ನು ಕೊಡುವಂತಹ ಕೆಲಸವಾಗಿದೆ. ಈ ಕಾರ್ಯಕ್ರಮದ ಮೂಲಕ 50 ಫಲಾನುಭವಿಗಳಿಗೆ ಮೇಶನ್ ಕಿಟ್, 40 ಜನರಿಗೆ ವೆಲ್ಡಿಂಗ್ ಕಿಟ್, 25 ಜನರಿಗೆ ಎಲೆಕ್ಟ್ರಿಕ್ ಕಿಟ್‌ಗಳನ್ನು ವಿತರಿಸಲಾಗಿದೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಸರ್ಕಾರದ ಸೌಲಭ್ಯಗಳನ್ನು ಪಡೆಯುವ ಜೊತೆಗೆ ಅವುಗಳನ್ನು ಸದ್ಬಳಕೆ ಮಾಡಿಕೊಂಡು ವೃತ್ತಿಯಲ್ಲಿ ಕೌಶಲ್ಯ ವೃದ್ಧಿಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಕಾರ್ಮಿಕ ಇಲಾಖೆ ಉಪ ಆಯುಕ್ತೆ ವೀಣಾ ಮಾತನಾಡಿ, ಕಾರ್ಮಿಕರು ಸರ್ಕಾರದ ಸೌಲಭ್ಯಗಳನ್ನು ಪಡೆಯಲು ನೀವು ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸಬೇಡಿ. ಬದಲಾಗಿ ತಾಲೂಕು ಕಾರ್ಮಿಕ ಅಧಿಕಾರಿ ಮತ್ತು ಜಿಲ್ಲಾ ಕಾರ್ಮಿಕ ಅಧಿಕಾರಿಗಳನ್ನು ಭೇಟಿಯಾಗಿ ನಿಮ್ಮ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು ಎಂದರು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಜಿಲ್ಲಾ ಕಾರ್ಮಿಕ ಅಧಿಕಾರಿ ಚೇತನ್, ತಾಲೂಕು ಕಾರ್ಮಿಕ ಅಧಿಕಾರಿ ಅಂಬಿಕಾ, ತಾಪಂ ಮಾಜಿ ಅಧ್ಯಕ್ಷ ನಾಗೇಶ ರಾಜ್, ನಗರಸಭಾ ಸದಸ್ಯ ಗಾಯತ್ರಿ, ಮುಖಂಡರಾದ ದೊರೆಸ್ವಾಮಿ ನಾಯಕ, ತೇಜಸ್ ಸೇರಿದಂತೆ ಇತರರಿದ್ದರು.

ಮುಂಬರುವ ಬೆಳಗಾವಿ ಚಳಿಗಾಲದ ಅಧಿವೇಶನಕ್ಕೆ ಮುತ್ತಿಗೆ

ರೈತ ಏಕೀಕರಣ ಸಮಿತಿ ರಾಜ್ಯಾಧ್ಯಕ್ಷ ಪಚ್ಚೆ ನಂಜುಂಡಸ್ವಾಮಿ ಮಾಹಿತಿ



ರೈತ ಏಕೀಕರಣ ಸಮಿತಿ ರಾಜ್ಯಾಧ್ಯಕ್ಷ ಪಚ್ಚೆ ನಂಜುಂಡಸ್ವಾಮಿ ಮಾತನಾಡಿದರು.

ಪಿರಿಯಾಪಟ್ಟಣ, ನ.17– ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಇರುವ ವಿವಿಧ ರೈತ ಸಂಘಗಳನ್ನು ಒಗ್ಗೂಡಿಸಿ ಏಕೀಕರಣ ಮಾಡುವ ಜೊತೆಗೆ ಬೆಳಗಾವಿಯ ಚಳಿಗಾಲದ ಅಧಿವೇಶನಕ್ಕೆ ರೈತರೊಂದಿಗೆ ಮುತ್ತಿಗೆ ಹಾಕಲಾಗುವುದು ಎಂದು ರೈತ ಏಕೀಕರಣ ಸಮಿತಿ ರಾಜ್ಯಾಧ್ಯಕ್ಷ ಪಚ್ಚೆ ನಂಜುಂಡಸ್ವಾಮಿ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಾದ್ಯಂತ 75ಕ್ಕೂ ಹೆಚ್ಚು ರೈತ ಸಂಘಟನೆಗಳಿದ್ದು, ರೈತರ ಹಿತ ಕಾಪಾಡುವ ದೃಷ್ಟಿಯಿಂದ ಎಲ್ಲಾ ಸಂಘಟನೆಗಳನ್ನು ಒಗ್ಗೂಡಿಸಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತ ಸಂಘದ ಏಕೀಕರಣ ಮಾಡುವ ಸದುದ್ದೇಶದಿಂದ ನ.12 ಸಭೆ ನಡೆಸಲಾಗಿದೆ. ಸಭೆಯಲ್ಲಿ ಮುಕ್ತವಾಗಿ ಏಕೀಕರಣದ ಉದ್ದೇಶ ಹಾಗೂ ಹೋರಾಟದ ರೂಪರೇಷೆಗಳನ್ನು ಚರ್ಚಿಸಲಾಗಿದೆ. ಈ ಬಗ್ಗೆ ತಾಲೂಕಿನ ರೈತರಿಗೆ ಅರಿವು ಮೂಡಿಸಲಾಗುವುದು. ಅಲ್ಲದೇ 31 ಜಿಲ್ಲೆಯ ಒಂದು ಲಕ್ಷಕ್ಕೂ ಹೆಚ್ಚು ರೈತರನ್ನು ಒಗ್ಗೂಡಿಸಿ ರೈತ ವಿರೋಧಿ ನೀತಿಯ ವಕ್ಫ್, ಕಬ್ಬು ಬೆಳೆಗಾರರ, ತಂಬಾಕು ಬೆಳೆಗಾರರ ಸಮಸ್ಯೆ ಸೇರಿದಂತೆ ರೈತರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಬೆಳಗಾವಿ ಚಳಿಗಾಲದ ಅಧಿವೇಶಕ್ಕೆ ಮುತ್ತಿಗೆ ಹಾಕಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ರೈತ ಏಕೀಕರಣ ಒಕ್ಕೂಟದ ವಿವಿಧ ಸಂಘಟನೆ ಮುಖಂಡರಾದ ಶರಣಪ್ಪ ದೊಡ್ಡಮನಿ, ನಾಗೇಶ್, ರಫಿ ಉಲ್ಲಾ, ಫಯಾಜ್, ಕುಮಾರ್ ಸೇರಿದಂತೆ ಅನೇಕರಿದ್ದರು.

ಇಂದು ಕನಕ ಜಯಂತಿ

ತಿ.ನರಸೀಪುರ, ನ.17– ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಕುರುಬರ ಸಂಘದ ಸಂಯುಕ್ತಾಶ್ರಯದಲ್ಲಿ ನ.18ರಂದು ಮಧ್ಯಾಹ್ನ 12 ಗಂಟೆಗೆ ಪಟ್ಟಣದ ಮಿನಿ ವಿಧಾನಸೌಧದ ಎದುರು ಕನಕದಾಸ ಜಯಂತಿ ಆಯೋಜಿಸಲಾಗಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕುರುಬರ ಸಂಘದ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಎಂಎಲ್‌ಸಿಗಳಾದ ಡಾ.ಯತೀಂದ್ರ, ಡಾ.ತಿಮ್ಮಯ್ಯ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಎಂ.ಎಸ್.ಮಹದೇವಸ್ವಾಮಿ, ಪುರಸಭಾ ಅಧ್ಯಕ್ಷೆ ವಸಂತ ಶ್ರೀಕಂಠ, ಉಪಾಧ್ಯಕ್ಷ ರಾಜೇಶ್ವರಿ ರಾಘವೇಂದ್ರ, ಸದಸ್ಯರು, ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್, ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಸೇರಿದಂತೆ ತಾಲೂಕಿನ ಅಧಿಕಾರಿ ವರ್ಗ, ತಾಲೂಕಿನ ಎಲ್ಲಾ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಸಂಘ ಸಂಸ್ಥೆಗಳ ಅಧ್ಯಕ್ಷರು, ಉಪಾಧ್ಯಕ್ಷರು, ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಡಿ.25ಕ್ಕೆ, ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ



ಸುದ್ದಿಗೋಷ್ಠಿಯಲ್ಲಿ ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ಮಾತನಾಡಿದರು.

ತಿ.ನರಸೀಪುರ, ನ.17– ವಾಟಾಳು ಮಠದ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ 76ನೇ ಹುಟ್ಟುಹಬ್ಬದ ಅಂಗವಾಗಿ ಡಿ.25ರಂದು ಶ್ರೀಶಾರದ ಡ್ಯಾನ್ಸ್ ಅಕಾಡೆಮಿ ವತಿಯಿಂದ 3ನೇ ವರ್ಷದ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ ಆಯೋಜಿಸಲಾಗಿದೆ ಎಂದು ವಿದ್ಯೋದಯ ಕಾಲೇಜಿನ ಉಪನ್ಯಾಸಕ ಮೂಗೂರು ಕುಮಾರಸ್ವಾಮಿ ತಿಳಿಸಿದರು.

ಪಟ್ಟಣದ ವಿವೇಕಾನಂದ ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.25 ರಂದು 76 ವಸಂತಕ್ಕೆ ಪಾದಾರ್ಪಣೆ ಮಾಡಲಿರುವ ಡಾ.ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ ಹುಟ್ಟು ಪ್ರಯುಕ್ತ ಪಟ್ಟಣದ ಶ್ರೀಮಹದೇಶ್ವರ ಕಲ್ಯಾಣ ಮಂಟಪದಲ್ಲಿ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆ ಹಮ್ಮಿಕೊಳ್ಳಲಾಗಿದ್ದು ನೃತ್ಯಗಾರರು ಇದರ ಸದುಪಯೋಗಪಡಿಸಿಕೊಳ್ಳುವಂತೆ ಮನವಿ ಮಾಡಿದರು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ 50 ಸಾವಿರ ರೂ., ದ್ವಿತೀಯ 30 ಸಾವಿರ, ತೃತೀಯ ಬಹುಮಾನ 20 ಸಾವಿರ ರೂ. ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸುವ ನೃತ್ಯ ಕಲಾವಿದರಿಗೆ ಯಾವುದೇ ವಯೋಮಿತಿ ನಿಗದಿ ಮಾಡಿಲ್ಲ. ತೀರ್ಪುಗಾರರ ತೀರ್ಮಾನವೇ ಅಂತಿಮ ಎಂದು ತಿಳಿಸಿದರು. ಶ್ರೀಶಾರದ ಡ್ಯಾನ್ಸ್ ಅಕಾಡೆಮಿ ಅಧ್ಯಕ್ಷೆ ಪುಷ್ಪ ಸುನೀಲ್ ಮಾತನಾಡಿ, ಸ್ಪರ್ಧೆಯಲ್ಲಿ ಭಾಗವಹಿಸುವ ನೃತ್ಯ ಕಲಾವಿದರಿಗೆ ಎಲ್ಲಾ ಭಾಷೆಯ ಗೀತೆಗಳಿಗೆ ಆದ್ಯತೆ ನೀಡಲಾಗಿದ್ದು, ಗ್ರೂಪ್ ಡ್ಯಾನ್ಸ್‌ಗೆ ಅವಕಾಶ ಕಲ್ಪಿಸಲಾಗಿದೆ. ಪ್ರವೇಶ ಶುಲ್ಕ 4 ಸಾವಿರ ರೂ.ಗಳನ್ನು ಪಾವತಿ ಮಾಡಿ ತಂಡದ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದರು.

ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗುವ ಡಿಕೆಡಿ ಮತ್ತು ಸುವರ್ಣ ವಾಹಿನಿಯ ಡ್ಯಾನ್ಸ್ ಡ್ಯಾನ್ಸ್ ಕಾರ್ಯಕ್ರಮದ ಕೊರಿಯೋಗ್ರಾಫರ್‌ಗಳಾದ ಪವನ್ ಕುಮಾರ್ ಅಲಿಯಾಸ್ ಪವನ್ ಮಾಸ್ಟರ್ ಹಾಗೂ ಪ್ರಮೋದ್ ಕುಮಾರ್ ಅಲಿಯಾಸ್ ಕ್ಯಾಟ್ ಮಾಸ್ಟರ್ ಅವರು ತೀರ್ಪುಗಾರರಾಗಿ ಭಾಗವಹಿಸಲಿದ್ದಾರೆ. ಆಸಕ್ತ ನೃತ್ಯ ಕಲಾವಿದರು ಹೆಚ್ಚಿನ ಮಾಹಿತಿಗೆ ಮೊ: 9611555419 ಹಾಗೂ 9380768447 ಸಂಪರ್ಕಿಸುವಂತೆ ತಿಳಿಸಿದರು.

ಶಿಬಿರಾರ್ಥಿಗಳು ಸೇವಾ ಮನೋಭಾವ ರೂಢಿಸಿಕೊಳ್ಳಿ



ವಾರ್ಷಿಕ ವಿಶೇಷ ಶಿಬಿರವನ್ನು ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ಉದ್ಘಾಟಿಸಿದರು.

ತಿ.ನರಸೀಪುರ, ನ.17– ಶಿಬಿರಾರ್ಥಿಗಳು ಸೇವಾ ಮನೋಭಾವ ರೂಢಿಸಿಕೊಂಡು ವ್ಯಕ್ತಿತ್ವ ವಿಕಸನಕ್ಕೆ ಹೆಚ್ಚು ಮಹತ್ವ ನೀಡಬೇಕು ಎಂದು ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ಸಲಹೆ ನೀಡಿದರು. ತಾಲೂಕಿನ ಹನುಮನಾಳು ಗ್ರಾಮದಲ್ಲಿ ಬನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಆಯೋಜಿಸಿದ್ದ ವಾರ್ಷಿಕ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಬಾಲ್ಯದಿಂದಲೇ ಕ್ರೀಡೆ ಮತ್ತು ಇನ್ನಿತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಅಲ್ಲದೇ ಚೆನ್ನಾಗಿ ಓದಿ ಊರು ಮತ್ತು ತಾಲೂಕಿಗೆ ಕೀರ್ತಿ ಬರಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಗೂಳಿಗೌಡ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಮರೀಗೌಡ, ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಬಿ.ಸಿ.ನಂದೀಶ್, ಸದಸ್ಯರಾದ ಮಹದೇವು, ಹನುಮನಾಳು ಗ್ರಾಪಂ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷೆ ಶಿವಮ್ಮ, ಪಿಡಿಓ ಸೌಮ್ಯಲತಾ, ಗ್ರಾಪಂ ಮಾಜಿ ಸದಸ್ಯ ದಯಾನಂದ, ಶಿಬಿರಾಧಿಕಾರಿ ಧರಣೇಶ್, ಕಾಲೇಜಿನ ಉಪನ್ಯಾಸಕ ವರ್ಗ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆ.ಆರ್.ನಗರ, ನ.17– ಸರ್ಕಾರದಿಂದ 1 ಕೋಟಿ ರೂ. ಮಂಜೂರು ಮಾಡಿಸಿ ಮಾವತ್ತೂರು ಗ್ರಾಮದ ಸಮಗ್ರ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ಭರವಸೆ ನೀಡಿದರು.

ತಾಲೂಕಿನ ಮಾವತ್ತೂರು ಗ್ರಾಮದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಂಜೂರಾದ 30 ಲಕ್ಷ ರೂ. ವೆಚ್ಚದಲ್ಲಿ ಪರಿಶಿಷ್ಟ ಕಾಲೋನಿಯಲ್ಲಿ ಸಿಸಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಮಗಾರಿಯನ್ನು ಗ್ರಾಮಸ್ಥರು ಗುಣಮಟ್ಟದಲ್ಲಿ ಮಾಡಿಸಿಕೊಳ್ಳಬೇಕು ಎಂದರು.

ಗ್ರಾಮದ ಯುವಕರ ಬೇಡಿಕೆಯಂತೆ ಗ್ರಾಮದಲ್ಲಿ ಏ.14ರೊಳಗೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಿಸಿ ಜಯಂತಿಯಂದು ಲೋಕಾರ್ಪಣೆ ಮಾಡಲಾಗುತ್ತದೆ ಎಂದು ಭರವಸೆ ನೀಡಿದರು.

ಗ್ರಾಮ ಪರಿಮಿತಿಯ ಎಲ್ಲಾ ರಸ್ತೆಗಳು ಹದಗೆಟ್ಟಿರುವುದು ನನ್ನ ಗಮನದಲ್ಲಿದ್ದು, ಕೂಡಲೇ ಮುಖ್ಯಮಂತ್ರಿಗಳಿಂದ ವಿಶೇಷ ಅನುದಾನ ತಂದು ಸಂಪೂರ್ಣ ಅಭಿವೃದ್ಧಿ ಪಡಿಸಲಾಗುವುದು. ಅಲ್ಲದೆ ಗ್ರಾಮದ ಅಂಬೇಡ್ಕರ್ ಸಮುದಾಯ ಭವನಕ್ಕೆ 25 ಲಕ್ಷ ರೂ. ಅನುದಾನ ನೀಡಿ ಕಾಮಗಾರಿ ಪೂರ್ಣಗೊಳಿಸಲು ಬದ್ಧನಿದ್ದೇನೆ ಎಂದು ತಿಳಿಸಿದರು.

ಈ ವೇಳೆ ಗ್ರಾಪಂ ಸದಸ್ಯರಾದ ದೇವಯ್ಯ, ಲೋಹಿತ್, ಭವ್ಯ, ಮಾಜಿ ಸದಸ್ಯ ಉಮೇಶ್, ಸೋಮಯ್ಯ, ಮುಖಂಡರಾದ ಗಣೇಶ್, ಶಿವಯ್ಯ, ಹರೀಶ್, ರಾಮು, ಮಂಜುನಾಥ್ ಅಣ್ಣಯ್ಯ, ರಂಗೇಶ್ ಕುಮಾರ್, ವಿಜಯ್, ರಾಮಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ಮಹದೇವ್, ಉದಯಶಂಕರ್, ವಕ್ತಾರ ಸೈಯದ್ ಜಾಬೀರ್, ಪಿಡಿಓ ಧನಂಜಯ್ ಇನ್ನಿತರರಿದ್ದರು.

ಅಂಬೇಡ್ಕರ್ ಸಮುದಾಯ ಭವನಕ್ಕೆ ಭೂಮಿ ಹಸ್ತಾಂತರ



ಮೈಸೂರು ತಾಲೂಕಿನ ಜಯಪುರದಲ್ಲಿ ನೂತನ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣಕ್ಕೆ ಜಿಲ್ಲಾಧಿಕಾರಿ ಆದೇಶದ ಮೇರೆಗೆ ಜಯಪುರ ನಾಡಕಚೇರಿ ಅಧಿಕಾರಿಗಳು ಸರ್ವೆ ನಂ.227ರಲ್ಲಿರುವ 1 ಎಕರೆ ಒಂದು ಗುಂಟೆ ಸರ್ಕಾರಿ ಭೂಮಿಯನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಿದರು. ಈ ವೇಳೆ ತಹಸೀಲ್ದಾರ್ ಮಹೇಶ್ ಕುಮಾರ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಶಿವಣ್ಣ ಉಪ ತಹಸೀಲ್ದಾರ್ ಎಂ.ನಿಂಗಪ್ಪ, ಕಂದಾಯ ಅಧಿಕಾರಿ ಲೋಹಿತ್, ವಿಎ ಪ್ರದೀಪ್ ಸಿಂಗ್, ಮುಖಂಡ ಸ್ವಾಮಿ, ನಾಗೇಶ್ ಇದ್ದರು.

ನಾಳೆ ಬಿಜೆಪಿ ಕಾರ್ಯಾಗಾರ

ನಂಜನಗೂಡು, ನ.17– ತಾಲೂಕಿನ ಆಲತ್ತೂರು ಹುಂಡಿ ಗ್ರಾಮದ ಮಹದೇಶ್ವರ ರೈಸ್ ಮಿಲ್ ಆವರಣದಲ್ಲಿ ನ.19ರಂದು ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅಧ್ಯಕ್ಷತೆಯಲ್ಲಿ ವರುಣ ಕ್ಷೇತ್ರದ ಬಿಜೆಪಿ ಸಂಘಟನಾ ಪೂರ್ವ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ. ಬಿಜೆಪಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಾಗಾರ ಯಶಸ್ವಿಗೊಳಿಸಬೇಕು ಎಂದು ವರುಣ ಕ್ಷೇತ್ರದ ಬಿಜೆಪಿ ಸಂಚಾಲಕ ಮಹದೇವಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರನ ಹೊಸಹಳ್ಳಿಯಲ್ಲಿ ಬಿರ್ಸಾಮುಂಡ ಜಯಂತಿ



ವೀರನ ಹೊಸಹಳ್ಳಿಯಲ್ಲಿ ಬಿರ್ಸಾ ಮುಂಡ ಜಯಂತಿ ಆಚರಿಸಲಾಯಿತು

ಹುಣಸೂರು, ನ.17– ತಾಲೂಕಿನ ವೀರನ ಹೊಸಹಳ್ಳಿ ವನ್ಯಜೀವಿ ವಲಯದ ಮಂಟಳ್ಳಿ ಕಾಡಿನ ಬಸವೇಶ್ವರ ಸನ್ನಿಧಿಯಲ್ಲಿ ಆದಿವಾಸಿ ಕಣ್ಮಣಿ, ಸ್ವಾತಂತ್ರ ಹೋರಾಟಗಾರ ಭಗವಾನ್ ಬಿರ್ಸಾ ಮುಂಡ ಅವರ 150ನೇ ಜಯಂತಿ ಯನ್ನು ಹುಣಸೂರು, ಹೆಚ್.ಡಿ.ಕೋಟೆ ಆದಿವಾಸಿಗಳು ಆಚರಿಸಿದರು.

ವೀರನ ಹೊಸಹಳ್ಳಿ ಹಾಡಿ ಮುಖಂಡ ಪುಟ್ಟಯ್ಯ ಬಸವೇಶ್ವರನಿಗೆ ಪೂಜೆ ಸಲ್ಲಿಸಿ, ಬಿರ್ಸಾ ಮುಂಡ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಭಗವಾನ್ ಬಿರ್ಸಾ ಮುಂಡ ಅವರು ಬ್ರಿಟಿಷರ ವಸಾಹತು ಅರಣ್ಯ ಕಾನೂನು ವಿರೋಧಿಸಿ ಅರಣ್ಯಗಳು ಆದಿವಾಸಿ ಜನಸಮುದಾಯಗಳ ಆಶ್ರಯ ತಾಣಗಳೇ ಹೊರತು ಸರ್ಕಾರಿ ಸ್ವತ್ತಲ್ಲ ಎಂದು 1890ರಲ್ಲಿ ಹೋರಾಟ ಪ್ರಾರಂಭಿಸಿ ಅರಣ್ಯ ಹಕ್ಕು ರಕ್ಷಣೆ ಹಾಗೂ ಸ್ವಯಂ ನಿರ್ಣಯದ ಹಕ್ಕು ಸೇರಿದಂತೆ ಸ್ವಾತಂತ್ರಕ್ಕಾಗಿ ಹಲವು ಹೋರಾಟ ನಡೆಸಿದರು ಎಂದರು.

ಬುಡಕಟ್ಟು ಕೃಷಿಕರ ಸಂಘದ ಅಧ್ಯಕ್ಷ ಜಯಪ್ಪ ಮಾತನಾಡಿ, ಬಿರ್ಸಾ ಮುಂಡ ತನ್ನ ಹದಿಹರೆಯದಲ್ಲಿಯೇ ಜನರ ಪರ ನಿಂತು ಬ್ರಿಟಿಷ್ ವಸಾಹತು ಸರ್ಕಾರದ ಅರಣ್ಯ ಕಾನೂನು ವಿರೋಧಿಸಿ 7 ವರ್ಷಗಳ ಕಾಲ ಅರಣ್ಯದಲ್ಲೇ ಆದಿವಾಸಿ ಸೈನ್ಯ ಕಟ್ಟಿ ಬ್ರಿಟಿಷರಿಗೆ ಸಿಂಹ ಸ್ವಪ್ನವಾದದ್ದು ನಮಗೆ ಪ್ರೇರಣೆ. ಅವರ ಜಯಂತಿಯನ್ನು ವೀರನ ಹೊಸಹಳ್ಳಿ ಅರಣ್ಯದಲ್ಲಿ ನಡೆಯುತ್ತಿರುವುದು ಸಮಂಯೋಚಿತವಾಗಿದೆ ಎಂದರು.

ಆದಿವಾಸಿ ಪಾರ್ಲಿಮೆಂಟರಿ ಸಮಿತಿ ಮುಖಂಡ ಹರ್ಷ ಮಾತನಾಡಿ, ತಿರಸ್ಕರಿಸಿರುವ ಅರಣ್ಯ ಹಕ್ಕು ಅರ್ಜಿಗಳನ್ನು ಪುನರ್ ಪರಿಗಣಿಸಿ ವೈಯಕ್ತಿಕ ಹಾಗೂ ಸಾಮೂಹಿಕ ಅರಣ್ಯ ಹಕ್ಕನ್ನು ಉಪ ವಿಭಾಗ ಹಾಗೂ ಜಿಲ್ಲಾ ಅರಣ್ಯ ಹಕ್ಕು ಸಮಿತಿಗಳು ಮಾನ್ಯ ಮಾಡಬೇಕೆಂದು ಆಗ್ರಹಿಸಿದರು.

ಕಾನೂನು ಸೇವಾ ಪ್ರಾಧಿಕಾರದ ಮಾಜಿ ಸದಸ್ಯ ವಿಠಲ್ ಮಾತನಾಡಿ, ಮುಖ್ಯಮಂತ್ರಿಗಳು ನ.12ರಂದು ಕೆರೆಹಾಡಿಗೆ ಭೇಟಿ ನೀಡಿ ಆದಿವಾಸಿಗಳ ಅರಣ್ಯ ಹಕ್ಕುಗಳಿಗೆ ಅಡ್ಡಿಪಡಿಸ ದಂತೆ ಕ್ರಮ ವಹಿಸಲಾಗುವುದು ಎಂದು ಹೇಳಿರುವುದರಿಂದ ಜಿಲ್ಲೆಯ 12ಸಾವಿರ ಆದಿವಾಸಿ ಕುಟುಂಬಗಳಿಗೂ ಅರಣ್ಯ ಹಕ್ಕು ಮಾನ್ಯ ಮಾಡಿ ಗೌರವದ ಬದುಕಿಗೆ ದಾರಿ ಮಾಡಿಕೊಡಬೇಕೆಂದರು.

ಡೀಡ್ ಶ್ರೀಕಾಂತ್ ಮಾತನಾಡಿದರು. ಅರಣ್ಯ ಹಕ್ಕು ಕಾಯ್ದೆ ಸರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಹಾಗೂ ಉಪ ವಿಭಾಗದ ಅರಣ್ಯ ಹಕ್ಕು ಸಮಿತಿಗಳ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಿಗೆ ವಲಯ ಅರಣ್ಯ ಅಧಿಕಾರಿಗಳ ಮೂಲಕ ಮನವಿ ಸಲ್ಲಿಸಲಾಯಿತು. ನಂಗ ಕಾಡು ನಂಗ ಹಕ್ಕು ಎಂದು ಘೋಷಣೆ ಕೂಗಿ ಬಿರ್ಸಾ ಮುಂಡರಿಗೆ ಜೈಕಾರ ಕೂಗಿದರು. ಕಾಡಿನ ಪರಿಸರದಲ್ಲಿ ಪೂಜೆಗಿಟ್ಟ ಹಣ್ಣು, ಕಾಯಿ, ಅವಲಕ್ಕಿ ಸೇವನೆ ಮಾಡಿ, ಕಾಡು ನೆಲ್ಲಿಕಾಯಿ ರುಚಿ ಹೀರುತ್ತಾ ಕಾಡಿಂದ ಹೊರಬಂದು ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು.

ಕಾಡು ಪ್ರವೇಶಕ್ಕೂ ಮುನ್ನ ವೀರನ ಹೊಸಹಳ್ಳಿ ಆಶ್ರಮ ಶಾಲೆ ಮಕ್ಕಳು ಹಾಗೂ ಶಿಕ್ಷಕರ ಜೊತೆಗೂಡಿ ಬಿರ್ಸಾಮುಂಡ ಜಯಂತಿ ಆಚರಿಸಿ ಪೂಜೆ ಸಲ್ಲಿಸಿ ಕೇಂದ್ರ ಸರ್ಕಾರ ಈ ದಿನವನ್ನು ಜನಜಾತಿ/ಆದಿವಾಸಿ ಗೌರವ ದಿವಸ ಎಂದು ಘೋಷಿಸಿದೆ ಎಂದು ತಿಳಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಿರ್ಸಾಮುಂಡ ಬಗ್ಗೆ ಬರೆದಿರುವ ಲೇಖನ ಓದಲು ತಿಳಿಸಲಾಯಿತು.

ಉನ್ನತ ಶಿಕ್ಷಣ ಪಡೆದು ಸಮುದಾಯದ ಅಭಿವೃದ್ಧಿಗೆ ಶ್ರಮಿಸಿ

ವಿದ್ಯಾರ್ಥಿಗಳಿಗೆ ತಾಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಸಿದ್ದರಾಜು ಸಲಹೆ



ನಾಯಕ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ.

ಹೆಚ್.ಡಿ.ಕೋಟೆ, ನ.17– ನಾಯಕ ಸಮುದಾಯದ ಮಕ್ಕಳು ಉನ್ನತ ವ್ಯಾಸಂಗ ಮಾಡುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಾಲೂಕು ನಾಯಕ ನೌಕರರ ಸಂಘದ ಅಧ್ಯಕ್ಷ ಸಿದ್ದರಾಜು ತಿಳಿಸಿದರು.

ಪಟ್ಟಣದ ಆರ್.ಕೆ.ಕನ್ವೆನ್ಷನ್ ಹಾಲ್‌ನಲ್ಲಿ ತಾಲೂಕು ನಾಯಕ ನೌಕರರ ಸಂಘದಿಂದ ಆಯೋಜಿಸಿದ್ದ ಕೋಟೆ, ಸರಗೂರು ತಾಲೂಕಿನ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಮುದಾಯದಲ್ಲಿ ಹೆಚ್ಚು ಬಡ ಕುಟುಂಬಗಳಿದ್ದು, ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದಾರೆ. ಆದರೂ ಸಾಕಷ್ಟು ಮಕ್ಕಳು ವಿದ್ಯಾಭ್ಯಾಸದಲ್ಲಿ ಉನ್ನತ ಅಂಕ ಗಳಿಸಿ ಯಶಸ್ಸು ಗಳಿಸಿದ್ದಾರೆ. ಅಂತಹ ಮಕ್ಕಳನ್ನು ನಮ್ಮ ನಾಯಕ ನೌಕರರ ಸಂಘದಿಂದ ಗುರುತಿಸಿ ಸನ್ಮಾನಿಸಿ, ಗೌರವಿಸುವ ಕಾರ್ಯವನ್ನು ಪ್ರತಿ ವರ್ಷ ಹಮ್ಮಿಕೊಂಡು ಬರುತ್ತಿದ್ದು, ಇದರಿಂದ ಮಕ್ಕಳಲ್ಲಿ ಸ್ಫೂರ್ತಿ ಹೆಚ್ಚುತ್ತದೆ ಎಂದರು.

ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು ಮಾತನಾಡಿ, ಸಮುದಾಯದ ಮಕ್ಕಳು ಉತ್ತಮ ಅಂಕ ಪಡೆದು ಸಾಧನೆ ಮಾಡಿ ಪ್ರತಿಭಾ ಪುರಸ್ಕಾರ ಪಡೆದಿರುವುದು ಸಂತಸದ ವಿಚಾರ. ತಾಲೂಕಿನ ವಿದ್ಯಾರ್ಥಿ ಚಿದಾನಂದ ಅವರು ಐಎಫ್‌ಎಸ್, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆಗೊಂಡು ತಾಲೂಕಿಗೆ ಕೀರ್ತಿ ತಂದಿದ್ದರು. ಅವರ ಆದರ್ಶ ವ್ಯಕ್ತಿತ್ವವನ್ನು ಮಾದರಿಯನ್ನಾಗಿಟ್ಟುಕೊಂಡು ಉನ್ನತ ಮಟ್ಟಕ್ಕೆ ಹೋಗಲು ಮುಂದಾಗಿ ಎಂದರು.

ಮೈಸೂರು ವಿವಿಯಲ್ಲಿ ಪರಿಶಿಷ್ಟ ಪಂಗಡದ 17 ವಿದ್ಯಾರ್ಥಿಗಳಿಗೆ ಫೆಲೋಶಿಪ್ ಬಂದಿರಲಿಲ್ಲ. ನಾನು ಸದಸ್ಯನಾದ ಮೇಲೆ ಪ್ರತಿ ತಿಂಗಳು ತಲಾ 23 ಸಾವಿರದಂತೆ 10 ತಿಂಗಳ ಫೆಲೋಶಿಪ್ ಮಂಜೂರು ಮಾಡಿಸಿದ್ದೇನೆ ಎಂದರು.

ಸಮುದಾಯದ ಮಕ್ಕಳು ಉನ್ನತ ಮಟ್ಟದ ಸಂದರ್ಶನಗಳಲ್ಲಿ ಭಾಗವಹಿಸುವ ಸಂದರ್ಭ ಸಮಸ್ಯೆಗಳು ಕಂಡು ಬಂದಲ್ಲಿ ನಮ್ಮನ್ನು ಹಾಗೂ ಶಾಸಕ ಅನಿಲ್ ಅವರನ್ನು ಸಂಪರ್ಕಿಸಿ ಎಂದು ಮನವಿ ಮಾಡಿದರು. ಈ ವೇಳೆ ಎಸ್‌ಎಸ್‌ಎಲ್‌ಸಿ ಯಲ್ಲಿ 95%, ಪಿಯುಸಿ 90%, ಪದವಿಯಲ್ಲಿ 85%, ಬಿಇ ವಿಭಾಗದಲ್ಲಿ ಎಸ್.ಬಿ. ಯಶಸ್ವಿನಿ. 8.86, ಎಂಎ ಕನ್ನಡ ವಿಭಾಗದಲ್ಲಿ ಗೋಲ್ಡ್ ಮೆಡಲ್ ಪಡೆದ ಎಸ್.ಬಿ.ಕಾವ್ಯ ಸೇರಿದಂತೆ ಒಟ್ಟು 16 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ನಾಯಕ ಸಂಘದ ಗೌರವಾಧ್ಯಕ್ಷ ಚಿಕ್ಕನಾಯಕ, ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ, ಉಪಾಧ್ಯಕ್ಷ ಲಿಂಗರಾಜು, ವಿನಾಯಕ ಸಂಘದ ಅಧ್ಯಕ್ಷ ಮಹದೇವಪ್ಪ, ಕಾರ್ಯದರ್ಶಿ ಕೆಂಪನಾಯಕ, ಖಜಾಂಚಿ ಶ್ರೀನಿವಾಸ್, ಚನ್ನನಾಯಕ, ಶಿವಪ್ಪ, ಶಿಕ್ಷಣ ಸಂಯೋಜಕ ಚಿಕ್ಕನಾಯಕ, ಎನ್‌ಜಿಓ ಖಜಾಂಚಿ ರವಿ, ಎಚ್.ಬಿ. ಜೋತಿ, ವೆಂಕಟ ಸುಬ್ಬನಾಯಕ, ಹೆಚ್.ಕೆ.ಚಂದ್ರ ಶೇಖರ್, ಶಿವಲಿಂಗನಾಯಕ, ನಾಗನಾಯಕ, ಪೋಷಕರು, ಸಂಘದ ಸದಸ್ಯರು ಭಾಗವಹಿಸಿದ್ದರು.

ವಿಶೇಷಚೇತನ ಮಕ್ಕಳು ಮನುಕುಲದ ನಕ್ಷತ್ರಗಳು

'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ರೋಟರಿ ಮೈಸೂರು ವಿಶೇಷ ಚೇತನ ಮಕ್ಕಳಿಗೆ ಭಾನುವಾರ ಆಯೋಜಿಸಿದ್ದ 'ತಾರೆ ಜಮೀನ್ ಪರ್' 9ನೇ ಆವೃತ್ತಿ ಕಾರ್ಯಕ್ರಮವನ್ನು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಉದ್ಘಾಟಿಸಿದರು.

ಮೈಸೂರು, ನ.17(ಬಿಎಲ್‌ಯು)– ವಿಶೇಷಚೇತನ ಮಕ್ಕಳು ಮನುಕುಲದ ನಕ್ಷತ್ರಗಳು ಎಂದು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ರೋಟರಿ ಮೈಸೂರು (ಜೋನ್ 7) ವಿಶೇಷಚೇತನ ಮಕ್ಕಳಿಗೆ ಆಯೋಜಿಸಿದ್ದ 'ತಾರೆ ಜಮೀನ್ ಪರ್' 9ನೇ ಆವೃತ್ತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶೇಷ ಚೇತನ ಮಕ್ಕಳ ಸೃಜನಶೀಲತೆಯನ್ನು ಪ್ರಶಂಸಿಸಿದರು.

ರೋಟರಿ ಮೈಸೂರು ಸಂಸ್ಥೆ ಸತತ 9ನೇ ಬಾರಿಗೆ ಈ ಕಾರ್ಯಕ್ರಮ ಆಯೋಜಿಸುತ್ತಿರುವ ಬಗ್ಗೆ ಶ್ಲಾಘನೆ ವ್ಯಕ್ತಪಡಿಸಿದ ಡಾ.ಕೆ.ಬಿ.ಗಣಪತಿ, ಕಳೆದ ಎಂಟು ವರ್ಷಗಳ ಹಿಂದೆ ಆರಂಭವಾದ 'ತಾರೆ ಜಮೀನ್ ಪರ್' ಕಾರ್ಯಕ್ರಮ ರೋಟರಿಯನ್ ಬಿ.ಎಸ್.ರವಿಕುಮಾರ್ ಅವರ ಕನಸಿನ ಕೂಸು ಎಂದು ಹೇಳಿದರು.

ನಾನು ನಿಮಗೆ ಪರಿಚಯವಾದಂತೆ ಮೈಸೂರು ಸ್ಟಾರ್ ಆಗಿರಬಹುದು. ಆದರೆ ಈ ವಿಶೇಷಚೇತನ ಮಕ್ಕಳು ಮನುಕುಲದ ನಿಜವಾದ ಸ್ಟಾರ್‌ಗಳು ಹೇಳಿದರು. ರೋಟರಿ ಮೈಸೂರು 78 ವರ್ಷಗಳ ಹಳೆಯ ಸೇವಾ ಸಂಸ್ಥೆಯಾಗಿದ್ದು, ಹಲವು ಕಾರ್ಯಕ್ರಮಗಳ ಭಾಗವಾಗಿದೆ. ರೋಟರಿ ಮೈಸೂರ್‌ನ ಎರಡು ಸಂಸ್ಥೆಗಳು ಶಿಕ್ಷಣಕ್ಕಾಗಿ ಸಕ್ರಿಯ ಸೇವೆ ಸಲ್ಲಿಸುತ್ತಿವೆ. ವಿಶೇಷಚೇತನ ಮಕ್ಕಳಿಗೆ 5,000 ಕ್ಕೂ ಹೆಚ್ಚು ಪರಿಕರ (ಫಿಟ್‌ಮೆಂಟ್)ಗಳನ್ನು ವಿತರಣೆ ಮಾಡಿದೆ. ಅಷ್ಟೆ ಅಲ್ಲದೆ ರೋಟರಿ ಮೈಸೂರು ಚಂದ್ರಕಲಾ ಆಸ್ಪತ್ರೆಯಲ್ಲಿ ರಕ್ತನಿಧಿ ಸ್ಥಾಪಿಸಿದೆ. ವಿಶೇಷ ಚೇತನ ಮಕ್ಕಳಿಗಾಗಿ ಈ ಸಂಯೋಜಿತ ಶಾಲೆ ಸ್ಥಾಪಿಸಿದೆ ಎಂದು ಸಂಸ್ಥೆಯ ಸೇವಾ ಕಾರ್ಯವನ್ನು ಡಾ.ಕೆ.ಬಿ.ಗಣಪತಿ ಪ್ರಶಂಸಿಸಿದರು.

ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ವಿಶೇಷಚೇತನ ಮಕ್ಕಳಿಗೆ ನೃತ್ಯ, ಹಾಡುಗಾರಿಕೆ, ಸಂಗೀತ, ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಬೆಳಿಗ್ಗೆಯಿಂದ ಸಂಜೆ ತನಕ ನಡೆದ ಕಾರ್ಯಕ್ರಮದಲ್ಲಿ ಮೈಸೂರಿನ 18 ಸಂಸ್ಥೆಗಳ 785 ವಿಶೇಷಚೇತನ ಮಕ್ಕಳು ಉತ್ಸಾಹದಿಂದ ಭಾಗವಹಿಸಿದ್ದರು.

ಜನಪ್ರಿಯ ಕನ್ನಡ ಮತ್ತು ಹಿಂದಿ ಹಾಡುಗಳಿಗೆ ನೃತ್ಯ ಪ್ರದರ್ಶಿಸಿದ ವಿಶೇಷ ಚೇತನ ಮಕ್ಕಳ ಸೃಜನಶೀಲತೆ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿತು. ಕೆಲವು ಮಕ್ಕಳು ಫ್ಯಾನ್ಸಿ ಡ್ರೆಸ್ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಈ ವೇಳೆ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಎಸ್‌ಆರ್‌ಪಿ ಮೈಸೂರು ಸೌತ್ ಸ್ಕೂಲ್, ವಿಸ್ಡಂ ಸ್ಕೂಲ್, ಜೆಎಸ್‌ಎಸ್ ಸಹನ ಸ್ಪೆಷಲ್ ಅಂಡ್ ಇಂಟಿಗ್ರೇಟೆಡ್ ಸ್ಕೂಲ್, ಮೈತ್ರಿ ಚಾರಿಟೆಬಲ್ ಟ್ರಸ್ಟ್, ಜೆಎಂಜೆ ಸ್ಪೆಷಲ್ ಸ್ಕೂಲ್, ಸಹರಾ ವಿಶೇಷಚೇತನ ಮಕ್ಕಳ ಶಾಲೆ, ಆಸೀನಾ ಶಾಲೆ, ಎಂ.ಜೆ. ಸೂಫಿ ಸ್ಮಾರಕ ಶಾಲೆ, ಮಾತೃ ಮಂಡಲಿ ಶಿಶು ವಿಕಾಸ ಕೇಂದ್ರ, ವಿಕಲಚೇತನರ ಅಭ್ಯುದಯ ಸೇವಾ ಸಂಸ್ಥೆ, ಸ್ನೇಹ ಕಿರಣ್ ಸೊಸೈಟಿ, ಅರುಣೋದಯ ವಿಶೇಷಚೇತನರ ಶಾಲೆ, ಕರುಣಾಮಯಿ ವಿಶೇಷಚೇತನರ ಶಾಲೆ, ತುಳಿರ್ ಚಾರಿಟೆಬಲ್ ಟ್ರಸ್ಟ್, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ನಿರೀಕ್ಷೆ ವಿಶೇಷ ಚೇತನ ಶಾಲೆ ಮತ್ತು ಗ್ರೇಸ್ ಓಪನ್ ಸ್ಕೂಲ್ ಅಂಡ್ ಟ್ರೈನಿಂಗ್ ಸೆಂಟರ್ ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರೋಟರಿ ಮೈಸೂರು ಅಸಿಸ್ಟೆಂಟ್ ಗೌವರ್ನರ್ ರೋ.ಚೇತನ್ ವಿಶ್ವನಾಥ್, ಅಧ್ಯಕ್ಷ ರೋ.ಎನ್.ಪ್ರವೀಣ್, ಕಾರ್ಯದರ್ಶಿ ರೋ. ಕೆ.ಎನ್.ಸುಹಾಸ್, ತಾರೆ ಜಮೀನ್ ಪರ್ ಅಧ್ಯಕ್ಷ ರೋ.ಬಿ.ಎಸ್.ರವಿಕುಮಾರ್, ಕಮ್ಯೂನಿಟಿ ಸರ್ವಿಸ್ ನಿರ್ದೇಶಕ ರೋ.ಕೆ.ಸಿ. ಪೊನ್ನಣ್ಣ ವೇದಿಕೆಯಲ್ಲಿ ಉಪಸ್ಥಿತರಿದ್ದರು.


ಮೈಸೂರಿನ ಮಾನಸ ಗಂಗೋತ್ರಿಯ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ರೋಟರಿ ಮೈಸೂರು ವಿಶೇಷ ಚೇತನ ಮಕ್ಕಳಿಗೆ ಭಾನುವಾರ ಆಯೋಜಿಸಿದ್ದ ತಾರೆ ಜಮೀನ್ ಪರ್ ಕಾರ್ಯಕ್ರಮದಲ್ಲಿ ವಿಶೇಷಚೇತನ ಮಕ್ಕಳು ನೃತ್ಯ ಪ್ರದರ್ಶಿಸಿದರು.

ರಾಸಾಯನಿಕಯುಕ್ತ ಆಹಾರ ತ್ಯಜಿಸಿ; ಉತ್ತಮ ಆರೋಗ್ಯಕ್ಕೆ ಕರೆ

ನಿವೃತ್ತ ವಿಜ್ಞಾನಿ ಪಿ.ಎಸ್.ಬಾಲಕೃಷ್ಣನ್ ರಚಿತ 'ಸಿರಿಧಾನ್ಯಗಳ ಐಸಿರಿ'ಪುಸ್ತಕ ಬಿಡುಗಡೆ



ಮೈಸೂರು, ನ17(ಎಸ್‌ಪಿಎನ್)– ನಗರ ಪ್ರದೇಶದ ಜನತೆ ರಾಸಾಯನಿಕಯುಕ್ತ ಆಹಾರ ಪದಾರ್ಥಗಳನ್ನು ತ್ಯಜಿಸಿ ಉತ್ತಮ ಆರೋಗ್ಯಕ್ಕಾಗಿ ದೇಶಿ ಆಹಾರ ಪದಾರ್ಥಗಳ ಸೇವನೆಗೆ ಒತ್ತು ನೀಡಬೇಕು ಎಂದು ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಸಲಹೆ ನೀಡಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಕಸಾಪ ಭವನದಲ್ಲಿ ಹಿಮಾಲಯ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಹಿಮಾಲಯ ಪ್ರಕಾಶನ ಹೊರತಂದಿರುವ, ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಪಿ.ಎಸ್.ಬಾಲಕೃಷ್ಣನ್ ರಚಿತ 'ಸಿರಿಧಾನ್ಯಗಳ ಐಸಿರಿ'ಕೃತಿ ಬಿಡುಗಡೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ರೈತರು ತಮ್ಮ ಜಮೀನಿನಲ್ಲಿ ಹೆಚ್ಚಿನ ಇಳುವರಿಗಾಗಿ ರಾಸಾಯನಿಕ ಬಳಸಿ ಆಹಾರ ಪದಾರ್ಥಗಳನ್ನು ಬೆಳೆಯುತ್ತಾರೆ. ಈ ಆಹಾರ ಪದಾರ್ಥಗಳನ್ನು ಉಪಯೋಗಿಸುವ ನಗರ ಪ್ರದೇಶದ ಜನರು ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ಇತರೆ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಇದನ್ನು ಪ್ರಾರಂಭದಲ್ಲೇ ತಡೆಗಟ್ಟಬೇಕಾದರೆ, ಸಿರಿಧಾನ್ಯಗಳ ಸೇವನೆ ಅಗತ್ಯ ಸಿರಿಧಾನ್ಯಗಳ ಉಪಯುಕ್ತೆಯನ್ನು ವಿಜ್ಞಾನಿ ಪಿ.ಎಸ್.ಬಾಲಕೃಷ್ಣನ್ ರಚಿತ, ಸಿರಿಧಾನ್ಯಗಳ ಐಸಿರಿ' ಕೃತಿ ಎಲ್ಲರೂ ಓದುವ ಪುಸ್ತಕವಾಗಿದೆ ಎಂದರು.

ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ (ಭೂಮಿಪುತ್ರ) ಮಾತನಾಡಿ, ಮಾನವನ ಅತಿಯಾದ ಆಸೆಯಿಂದ ಜಗತ್ತಿನ ಹವಾಮಾನದಲ್ಲಿ ವಿಪರೀತ ಬದಲಾವಣೆಯಾಗುತ್ತಿದೆ ಇದರಿಂದ ಮಣ್ಣಿನ ಫಲವತ್ತತೆ ಕಡಿಮೆಯಾಗುತ್ತಿದೆ. ಇದರಿಂದ ಎಚ್ಚೆತ್ತುಕೊಳ್ಳದಿದ್ದರೆ, ಮುಂದೆ ದೊಡ್ಡ ಅನಾಹುತ ಸಂಭವಿಸಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ, ಆಹಾರ ತಜ್ಞೆ ನಂದಿನಿ ಮೂರ್ತಿ, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಬಾಲಕೃಷ್ಣನ್ ಅವರ ಪತ್ನಿ ಸುಧಾ, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ್ ಉಪಸ್ಥಿತರಿದ್ದರು. ಈ ವೇಳೆ ಸಿಎಫ್‌ಟಿಆರ್‌ಐ ನಿವೃತ್ತ ವಿಜ್ಞಾನಿ ಪಿ.ಎಸ್.ಬಾಲಕೃಷ್ಣನ್ ಹಾಗೂ ಪತ್ನಿ ಸುಧಾ ಅವರನ್ನು ಸನ್ಮಾನಿಸಲಾಯಿತು.

ಅನ್ಯಾಯದ ವಿರುದ್ಧ ಪ್ರತಿಭಟಿಸಬೇಕಾದ ವಿದ್ಯಾವಂತರೇ ಹತಾಶ ಮನೋಭಾವ ಹೊಂದಿದ್ದಾರೆ

ಹಿರಿಯ ಸಾಹಿತಿ ಪ್ರೊ. ಕಾಳೇಗೌಡ ನಾಗವಾರ ವಿಷಾದ

ಮೈಸೂರು, ನ.17(ಎಂಟಿವೈ)– ಆಳುವವರಿಂದಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸಬೇಕಾದ ಜನರು ಹಣೆಬರಹ ಸರಿಯಿಲ್ಲ ಎಂದು ಸುಮ್ಮನಾಗುತ್ತಿರುವುದು ಶೋಚನೀಯ ಎಂದು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ವಿಷಾದಿಸಿದ್ದಾರೆ.


ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗಚಾವಡಿಯಲ್ಲಿ ಭಾನುವಾರ ಮದ್ದೂರು ದೊರೆಸ್ವಾಮಿ ರಚಿಸಿರುವ 'ಹಂಬಲದ ಹಣತೆ' ಕೃತಿಯನ್ನು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಬಿಡುಗಡೆ ಮಾಡಿದರು.

ಮೈಸೂರಿನ ರಂಗಾಯಣದ ಬಿ.ವಿ. ಕಾರಂತ ರಂಗಚಾವಡಿಯಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಮದ್ದೂರು ದೊರೆಸ್ವಾಮಿ ರಚಿಸಿರುವ 'ಹಂಬಲದ ಹಣತೆ' ಕೃತಿಯನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಅನ್ಯಾಯದ ವಿರುದ್ಧ ಪ್ರತಿಭಟಿಸಬೇಕಾದ ವಿದ್ಯಾವಂತರೇ ಹತಾಶ ಮನೋಭಾವ ಪ್ರದರ್ಶಿಸುತ್ತಿದ್ದಾರೆ. ಹಣೆಬರಹ ಸರಿಯಿಲ್ಲ ಎನ್ನುವ ಮೌಢ್ಯಕ್ಕೆ ವಿದ್ಯಾವಂತರೇ ಒಳಗಾಗುತ್ತಿರುವುದು ನಾಚಿಕೆಗೇಡಿನ ಸಂಗತಿ ಎಂದು ಕಿಡಿಕಾರಿದರು.


ಇತ್ತೀಚಿನ ದಿನಗಳಲ್ಲಿ ಆಡಳಿತ ನಡೆಸುವವರ ನೀಚತನದಿಂದಾಗಿ ಜನರು ಸಂಕಷ್ಟದ ಸ್ಥಿತಿಗೆ ತುತ್ತಾಗುವಂತಾಗಿದೆ. ಆಳುವವರಿಂದ ತಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತದೆ ಗೋಳಾಡುತ್ತಿದ್ದಾರೆ. ಓದು–ಬರಹ ಗೊತ್ತಿಲ್ಲದ ಅನಕ್ಷರಸ್ಥರಿರಲಿ, ಹೆಚ್ಚಿನ ವಿದ್ಯಾಭ್ಯಾಸ ಮಾಡಿರುವ ಕಲಿತಿರುವವರೇ ಮೌಢ್ಯವನ್ನು ಬಲವಾಗಿ ನಂಬುತ್ತಿದ್ದಾರೆ. ದೇಶದ ಬಹುತೇಕ ರಾಜಕಾರಣಿಗಳು ಮಾಡಿರುವ ಅನಾಚಾರ–ಅಪರಾಧಗಳಿಂದ ರಕ್ಷಣೆ ಮಾಡಲು ಆಯಾ ಜಾತಿಗಳ ಮಠಾಧೀಶರು ಮುಂದೆ ಬರುತ್ತಾರೆ. ಇದು ಅತ್ಯಂತ ನೋವಿನ ಸಂಗತಿ. ಮಂಟೇಸ್ವಾಮಿ ಮತ್ತು ಮಾದಪ್ಪ ಕಾವೇರಿ ಕಣಿವೆಯ ದಲಿತ ಸಮುದಾಯಕ್ಕೆ ಸೇರಿದವರು. ಇವರನ್ನು ಉತ್ತರದಿಂದ ಬಂದವರು ಎಂದು ಎಲ್ಲರೂ ಹೇಳುತ್ತಾರೆ. ಮಂಟೇಸ್ವಾಮಿ, ಮಾದಪ್ಪ ಉತ್ತರದಿಂದ ಬಂದವರೋ ಅಥವಾ ನಮ್ಮ ನಾಡಿನಲ್ಲಿಯೇ ಜನಿಸಿದ ಚೇತನಗಳೋ ಎಂಬುದರ ಬಗ್ಗೆ ಸಂಶೋಧನೆ ನಡೆಯಬೇಕು ಎಂದು ಅಭಿಪ್ರಾಯಪಟ್ಟರು.

ಈ ಹಿಂದೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಜಾತಿಯ ಕಾರಣಕ್ಕಾಗಿ ನಮ್ಮನ್ನೂ ಶಾಲೆಗೆ ಸೇರಿಸುತ್ತಿರಲಿಲ್ಲ ಎಂದು ಅಳಲು ತೋಡಿಕೊಂಡಿದ್ದರು. ಆದರೆ, ಅವರು ಮುಖ್ಯಮಂತ್ರಿ, ಪ್ರಧಾನಮಂತ್ರಿಯಂತಹ ಸಾಂವಿಧಾನಿಕ ಹುದ್ದೆಯಲ್ಲಿದ್ದಾಗ ಜಾತಿ ವ್ಯವಸ್ಥೆಯ ವಿರುದ್ಧ ಯಾವುದೇ ಕಠಿಣ ಕಾನೂನು ಕ್ರಮ ಜಾರಿಗೊಳಿಸಲು ಪ್ರಯತ್ನಿಸಲಿಲ್ಲ. ಕೇವಲ ಕಣ್ಣೀರು ಸುರಿಸುವುದು ತರವಲ್ಲ. ದಲಿತರ ಕೇರಿಗೆ ಹೋಗಿ ಪವಿತ್ರನಾಗಿ ಬಂದೆ ಎಂದು ಹೇಳಿದ ಹನ್ನೆರಡನೇ ಶತಮಾನದ ಬಸವಣ್ಣನವರನ್ನು ಹೆಚ್ಚು ಕಾಲ ಬದುಕಲು ಬಿಡಲಿಲ್ಲ. ಪ್ರಸ್ತುತ ಬಸವಣ್ಣನವರನ್ನು ಒಂದು ಜಾತಿಗೆ ಸೀಮಿತಗೊಳಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಚಿಂತಕ ನಾ.ದಿವಾಕರ ವಹಿಸಿದ್ದರು. ಕೃತಿಯ ಲೇಖಕ ಮದ್ದೂರು ದೊರೆಸ್ವಾಮಿ, ವಾಣಿಜ್ಯ ತೆರಿಗೆಗಳ ಇಲಾಖೆಯ ಸಹಾಯಕ ಆಯುಕ್ತ ಎಸ್. ನಾಗರಾಜು, ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ ಪಾಲ್ಗೊಂಡಿದ್ದರು.

ಭಾಷೆ ಉಳಿದರೆ ನಮ್ಮತನ ಉಳಿಯಲು ಸಾಧ್ಯ

ಕನ್ನಡ ರಾಜ್ಯೋತ್ಸವದಲ್ಲಿ ಬಿಜೆಪಿ ನಗರಾಧ್ಯಕ್ಷ ನಾಗೇಂದ್ರ ಅಭಿಮತ



ಮೈಸೂರು, ನ17(ಎಸ್‌ಪಿಎನ್)– ಮಾತೃಭಾಷೆ ಉಳಿವಿಗೆ ನಾವು–ನೀವು ಎಲ್ಲರೂ ಶ್ರಮಿಸಬೇಕು. ನಮ್ಮ ಭಾಷೆ ಉಳಿದರೆ ನಮ್ಮತನ ಉಳಿಸಿಕೊಳ್ಳಲು ಸಾಧ್ಯ ಎಂದು ಬಿಜೆಪಿ ಮೈಸೂರು ನಗರಾಧ್ಯಕ್ಷ ಎಲ್.ನಾಗೇಂದ್ರ ಪ್ರತಿಪಾದಿಸಿದರು.

ಮೈಸೂರು ಯಾದವಗಿರಿಯ ಚೆಲುವಾಂಬ ಪಾರ್ಕ್‌ನಲ್ಲಿ, ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಚೆಲುವಾಂಬ ಪಾರ್ಕ್ ರಾಜಮನೆತನದವರ ಹೆಸರಿನಲ್ಲಿದೆ. ಈ ಪಾರ್ಕ್ ಐತಿಹಾಸಿಕ ಹಿನ್ನೆಲೆ ಹೊಂದಿದೆ. ಸಂಘದ ಪದಾಧಿಕಾರಿಗಳು ಈ ಪಾರ್ಕ್‌ನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಲವು ವರ್ಷಗಳಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಹಲವು ಗಣ್ಯರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ ಎಂದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ನಾವು ಇಲ್ಲೇ ಹುಟ್ಟಿ ಬೆಳೆದರೂ ಕನ್ನಡ ಉಳಿವಿಗಾಗಿ ಯಾವುದೇ ಕೆಲಸ ಮಾಡುತ್ತಿಲ್ಲ. ಆದರೆ, ಇಟಲಿ ದೇಶದ ತಿಜಿಯಾನ ರೆಪೆಪಿ ಎಂಬ ಮಹಿಳೆ 2008ರಲ್ಲಿ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನಕ್ಕೆ ಆಗಮಿಸಿ, ಇಲ್ಲಿನ ಆಂಗ್ಲ ಪ್ರಾಧ್ಯಾಪಕ ಡಾ.ಕಿಕ್ಕೆರೆ ನಾರಾಯಣರ ಬಳಿ ಆರು ತಿಂಗಳಲ್ಲಿ ಕನ್ನಡ ಕಲಿತುಕೊಂಡರು. ನಂತರ ಮ.ತಿ.ನ ರಚನೆ ಸಣ್ಣಕಥೆಗಳನ್ನು ಇಟಲಿ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದಿಸಿದ ಪ್ರಸಂಗ ವಿವರಿಸಿದರು.

ಮತಿನ ಅವರ ಸಣ್ಣ ಕಥೆಗಳು ಇಂಗ್ಲಿಷ್ ಅನುವಾದಗೊಂಡ ನಂತರ ಪ್ರತಿವರ್ಷ ಲಕ್ಷ ಕೃತಿಗಳು ಇಂದಿಗೂ ಮುದ್ರಣವಾಗುತ್ತಿವೆ ಈ ಕೃತಿಯನ್ನು ಭಾರತದಿಂದ ಬೇರೆ ದೇಶಕ್ಕೆ ವಿಮಾನದಲ್ಲಿ ಪ್ರಯಾಣಿಸುವ ಪ್ರತಿಯೊಬ್ಬ ಪ್ರವಾಸಿಗರು ಕೊಂಡು ಓದುತ್ತಾರೆ. ನಂತರ ಈ ಪುಸ್ತಕವನ್ನು ಮನೆಗೂ ತೆಗೆದುಕೊಂಡು ಹೋಗುತ್ತಾರೆ. ಈ ಕೃತಿ ಈಗ ಸಾಕಷ್ಟು ಬೇಡಿಕೆಯಿದೆ. ಅಲ್ಲದೆ, ಈ ಲೇಖಕಿಯಿಂದ ಕನ್ನಡದ ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ರಚಿತ ವಂಶವೃಕ್ಷ ಸೇರಿದಂತೆ 25 ಕೃತಿಗಳು ತರ್ಜುಮೆ ಆಗಿವೆ ಎಂದರು.

ಸನ್ಮಾನ: ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ನಗರ ಪಾಲಿಕೆ ಮಾಜಿ ಸದಸ್ಯರಾದ ಭಾಗ್ಯಮ್ಮ ಮಾದೇಶ್, ಎಸ್‌ಬಿಎಂ ಪ್ರಸನ್ನ, ಹಿರಿಯ ಪತ್ರಕರ್ತ ಕೆ.ನರಸಿಂಹಮೂರ್ತಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರನ್ನು ಸನ್ಮಾನಿಸಲಾಯಿತು.

ಬಹುಮಾನ ವಿತರಣೆ: ಈ ವೇಳೆ ವಿವಿಧ ಸ್ಪರ್ಧೆಗಳಾದ ಡ್ರಾಯಿಂಗ್ ಸ್ಪರ್ಧೆಯಲ್ಲಿ (ಒಂದರಿಂದ ಐದನೇ ತರಗತಿ) ಎಸ್.ಯಶಸ್‌ಗೌಡ, ವಿದ್ಯಾಪಾಟೀಲ್, ಎ.ಐಸಾನಿ ಹಾಗೂ 6–10ನೇ ತರಗತಿ ವಿದ್ಯಾರ್ಥಿಗಳಾದ ಎಸ್.ದೀಕ್ಷಿತ್, ಕೆ.ಎಸ್. ಹರ್ಷಿಣಿ, ಧ್ರುವಕುಮಾರ ವಿಜೇತರಾಗಿದ್ದಾರೆ. ನಿಂಬೆಹಣ್ಣು ಸ್ಪರ್ಧೆಯಲ್ಲಿ (ವಿದ್ಯಾರ್ಥಿನಿಯರು) ನಿಧಿ ಮೋನಿಷಾ ಹಾಗೂ ವಿದ್ಯಾರ್ಥಿಗಳ ವಿಭಾಗದಿಂದ ದೀಕ್ಷಿತ್, ಯಜತ್, ಅವಿನಾಶ್ ಅವರಿಗೆ ಬಹುಮಾನ ವಿತರಿಸಲಾಯಿತು. ಪಾಸಿಂಗ್ ಬಾಲ್ ಸ್ಪರ್ಧೆಯಲ್ಲಿ ವಿಜಯ, ಸುಕನ್ಯಾ, ಭಾವನ ಬಹುಮಾನ ಪಡೆದಿದ್ದಾರೆ. ಮ್ಯೂಜಿಕಲ್ ಛೇರ್ ಸ್ಪರ್ಧೆಯಲ್ಲಿ ಕುಮುದಿನಿ, ಗೀತಾ, ಸುಜಾತ ಆನಂದ ಅವರು ಬಹುಮಾನ ಪಡೆದರು. ಷಟಲ್ ಬ್ಯಾಡ್ಮಿಂಟನ್‌ನಲ್ಲಿ ಶಿವಸ್ಕಂದ, ಸಿಂಧೂ, ದೀಕ್ಷಿತ್, ಸನ್ನಿ, ಪುನೀತ್, ಸಂದೇಶ್, ಭರತ್, ರಾಮಕೃಷ್ಣ, ಲಾರಾ, ನಂಜುಂಡಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಚೆಲುವಾಂಬ ಪಾರ್ಕ್ ವಾಯುವಿಹಾರಿಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳಾದ ಪಡುವಾರಹಳ್ಳಿ ಬಿ.ಶ್ರೀನಿವಾಸ್, ಪಿಎಫ್ ನಂಜುಂಡಸ್ವಾಮಿ, ವಿಕ್ಟರ್, ಟ್ರಾವಲ್ ಪಾರ್ಕ್ ನಾಗರಾಜು, ಸುರೇಶ್, ಭರತ್, ಬಸವರಾಜು, ಶ್ರೀನಿವಾಸ, ಪ್ರೇಮಾ, ವೆಲ್ಡಿಂಗ್ ಶ್ರೀನಿವಾಸ್, ಶಂಕರ್‌ಸಿಂಗ್, ಮಾಧವರಾವ್ ಸೇರಿದಂತೆ ಇತರಿದ್ದರು. ಇದಕ್ಕೂ ಮುನ್ನ ರಾಮಕೃಷ್ಣ ಗೃಹನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಎಂ.ಸಂಜೀವ ಶೆಟ್ಟಿ ಅವರಿಂದ ಕನ್ನಡ ಬಾವುಟ ಹಾರಿಸಲಾಯಿತು. ಈ ವೇಳೆ ಎಂ.ಎನ್.ಜೈಪ್ರಕಾಶ್, ಡಾ.ಚಿತ್ರ, ಎಂ.ವಿರೂಪಾಕ್ಷಪ್ಪ, ಆರ್.ವೆಂಕಟೇಶ್, ಎಂ.ಎಸ್.ಶ್ರೀಕಾಂತ್ ಶರ್ಮಾ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕಂಗುವಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಂಗುವಾ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಂಗುವಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಮರನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ತ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ತಾರಕೇಶ್ವರ(ಕ)+ ಯಲಾಕುನ್ನಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
ಅಮರನ್ (ತ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	2 ಪ್ರದರ್ಶನಗಳು

ಮುಡಾದಿಂದ ಅಕ್ರಮವಾಗಿ ವಿತರಣೆಯಾಗಿರುವ

ನಿವೇಶನ ವಶಪಡಿಸಿಕೊಂಡು ಅರ್ಹರಿಗೆ ನೀಡಲು ಆಗ್ರಹ


ಮುಡಾ ನಿವೇಶನಕ್ಕೆ ಅರ್ಜಿ ಹಾಕಿ ಹತಾಶರಾಗಿರುವವರೊಂದಿಗೆ ವಿದ್ಯಾವಂತ ನಿರುದ್ಯೋಗಿಗಳ ಸಂಘದ ಕೂಡ್ಲೂರು ಶ್ರೀಧರಮೂರ್ತಿ ಚರ್ಚಿಸಿದರು.

ಮೈಸೂರು, ನ17(ಎಸ್‌ಬಿಡಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ನಿಯಮಬಾಹಿರವಾಗಿ ವಿತರಣೆಯಾಗಿರುವ ಎಲ್ಲಾ ನಿವೇಶನಗಳನ್ನೂ ವಶಪಡಿಸಿಕೊಂಡು ಅವುಗಳನ್ನು ದಶಕಗಳಿಂದ ಅರ್ಜಿ ಹಾಕಿಕೊಂಡು ಕಾದಿರುವ ಅರ್ಹರಿಗೆ ಹಂಚಿಕೆ ಮಾಡಬೇಕು ಎಂದು ಕರ್ನಾಟಕ ವಿದ್ಯಾವಂತ ನಿರುದ್ಯೋಗಿಗಳ ಸಂಘದ ರಾಜ್ಯಾಧ್ಯಕ್ಷ ಕೂಡ್ಲೂರು ಶ್ರೀಧರಮೂರ್ತಿ ಆಗ್ರಹಿಸಿದ್ದಾರೆ.

ಮುಡಾ ನಿವೇಶನಕ್ಕಾಗಿ 1992ರಿಂದಲೂ ಅರ್ಜಿ ಹಾಕಿ, ಕಾದಿರುವ ಹಲವರೊಂದಿಗೆ ನಗರದ ಚಾಮುಂಡಿ ಅತಿಥಿಗೃಹದ ಆವರಣದಲ್ಲಿ ಭಾನುವಾರ ಚರ್ಚೆ ನಡೆಸಿ, ಮುಖ್ಯಮಂತ್ರಿಗಳು 14 ನಿವೇಶನಗಳನ್ನು ಮುಡಾಗೆ ವಾಪಸ್ ನೀಡಿರುವಂತೆ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಮಧ್ಯವರ್ತಿಗಳು ನಿಯಮಬಾಹಿರವಾಗಿ ಪಡೆದಿರುವ ಎಲ್ಲಾ ನಿವೇಶನಗಳನ್ನೂ ವಶಪಡಿಸಿಕೊಳ್ಳಬೇಕು. ಅಕ್ರಮ ಆರೋಪಕ್ಕೆ ಗುರಿಯಾಗಿರುವ ಡಿ.ಬಿ.ನಟೇಶ್ ಹಾಗೂ ಜಿ.ಟಿ.ದಿನೇಶ್‌ಕುಮಾರ್ ಆಯುಕ್ತರಾಗಿದ್ದ ಅವಧಿಯಲ್ಲಿ ಮಂಜೂರು ಮಾಡಿದ ನಿವೇಶನಗಳನ್ನು ವಾಪಸ್ ಪಡೆಯಬೇಕು ಎಂದರು.

ಮಾಜಿ ಸೈನಿಕ ಮಹದೇವಯ್ಯ ಅವರ ಪತ್ನಿ, ಪರಿಶಿಷ್ಟ ಜಾತಿಯ ಡಿ.ನಾಗಮಣಿ ಅವರ ಮನವಿಗೂ ಅಧಿಕಾರಿಗಳು ಸ್ಪಂದಿಸಿಲ್ಲ. ಮಹದೇವಯ್ಯ ಅವರು ನಿಧನರಾದ ಬಳಿಕ ನಾಗಮಣಿ ಅವರು ಪತಿಯ ಅರ್ಜಿ ಆಧಾರದಲ್ಲಿ ನಿವೇಶನ ಕೋರಿದಾಗ ನಿರಾಕರಿಸಿದ್ದಾರೆ. ಅನುಸೂಚಿತ ಜಾತಿ ಹಾಗೂ ಮಾಜಿ ಸೈನಿಕ ಎರಡು ಕಾಲಂಗಳಲ್ಲೂ ಗುರುತು ಹಾಕಿದ್ದಾರೆ ಎಂಬ ನೆಪದಿಂದ ಅವರಿಗೆ ನಿವೇಶನ ನೀಡಿಲ್ಲ. ಇನ್ನು ಸಾರಿಗೆ ಸಂಸ್ಥೆ ನಿವೃತ್ತ ನೌಕರ ಮಹೇಶ್ ಅವರು 1992 ರಿಂದ ಆರು ಬಾರಿ ಅರ್ಜಿ ಸಲ್ಲಿಸಿದ್ದಾರೆ. ನಿವೃತ್ತರಾಗಿ ಮೂರ್ನಾಲ್ಕು ವರ್ಷಗಳಾದರೂ ಅವರಿಗೆ 20x30 ನಿವೇಶನ ನೀಡಿಲ್ಲ. ಹೀಗೆ ಸಾವಿರಾರು ಮಂದಿ ನಿವೇಶನ ಸಿಗದೆ ಹತಾಶರಾಗಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಅಕ್ರಮವಾಗಿ ಪಡೆದಿರುವ ಎಲ್ಲಾ ನಿವೇಶನಗಳನ್ನೂ ಸರ್ಕಾರ ವಶಪಡಿಸಿಕೊಂಡು, ಆರೋಪಿಗಳನ್ನು ಜೈಲಿಗೆ ಹಾಕಬೇಕು. ವಾಪಸ್ ಪಡೆದ ನಿವೇಶನಗಳನ್ನು ಅರ್ಹ ಅರ್ಜಿದಾರರಿಗೆ ಹಂಚಿಕೆ ಮಾಡಬೇಕು. ಇಲ್ಲವೇ ಮುಡಾ ಸಂಸ್ಥೆಯನ್ನೇ ಮುಚ್ಚಬೇಕು. ಈ ನಿಟ್ಟಿನಲ್ಲಿ ನೊಂದ ಅರ್ಜಿದಾರರೊಂದಿಗೆ ಮತ್ತೊಂದು ಸಭೆ ನಡೆಸಿ, ಹೋರಾಟ ತೀವ್ರಗೊಳಿಸಲಾಗುವುದು ಎಂದು ತಿಳಿಸಿದರು.

ವಿದ್ಯಾರ್ಥಿ ದೆಸೆಯಲ್ಲಿ ತಪ್ಪುಗಳನ್ನು ತಿದ್ದುಕೊಳ್ಳುವ ವ್ಯಕ್ತಿ ಜೀವನದಲ್ಲಿ ಎಂದೂ ವೈಫಲ್ಯ ಹೊಂದಲ್ಲ

ತುಮಕೂರು ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಕೋಚಿಂಗ್ ಸೆಂಟರ್‌ನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು,ನ.17(ಪಿಎಂ)– ವಿದ್ಯಾರ್ಥಿ ದೆಸೆಯಲ್ಲಿ ತನ್ನ ತಪ್ಪುಗಳನ್ನು ತಿದ್ದುಕೊಳ್ಳುವ ವ್ಯಕ್ತಿ ಜೀವನದಲ್ಲಿ ಎಂದೂ ವೈಫಲ್ಯ ಹೊಂದಲು ಸಾಧ್ಯವಿಲ್ಲ ಎಂದು ತುಮಕೂರು ರಾಮಕೃಷ್ಣ–ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತೀ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ದಿನೇಶ್ ಕೋಚಿಂಗ್ ಸೆಂಟರ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 27ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದ ಅವರು, ತನ್ನ ತಪ್ಪುಗಳನ್ನು ತಿದ್ದಲು ತಂದೆ–ತಾಯಿ ಮತ್ತು ಶಿಕ್ಷಕರಿಗೆ ಅವಕಾಶ ಮಾಡಿಕೊಡುವ ವ್ಯಕ್ತಿ ಜೀವನದಲ್ಲಿ ವೈಫಲ್ಯ ಹೊಂದಲ್ಲ ಎಂದರು.

ಇಂದು ಬಹುತೇಕ ತರುಣ–ತರುಣಿಯರು ವಾಟ್ಸಪ್, ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣದಲ್ಲೇ ಮುಳುಗಿ ಹೋಗಿದ್ದಾರೆ. ಮೊಬೈಲ್ ನೋಡಿ ನೋಡಿ ಯುವ ಜನರು ಮುಂಕುದಿಣ್ಣೆಯಾಗುತ್ತಿದ್ದಾರೆ ಎಂದು ಮೊನ್ನೆ ಬೆಂಗಳೂರಿನಲ್ಲಿ ಒಬ್ಬರು ಹೇಳುತ್ತಿದ್ದರು. ಅಂತೆಯೇ ಶೋಕೇಸ್‌ನಲ್ಲಿರುವ ಹಣ್ಣುಗಳನ್ನು ನೋಡಿದರೆ ಟೇಸ್ಟ್ ಬಡ್ಸ್ ಆಕ್ಟೀವ್ ಆಗುವುದಿಲ್ಲ. ಅದೇ ರೀತಿಯಲ್ಲಿ ಆನ್‌ಲೈನ್ ಪಾಠಗಳು ಎಷ್ಟೇ ಚೆನ್ನಾಗಿದ್ದರೂ ಶಿಕ್ಷಕರು ಎದುರು ನಿಂತು ಪ್ರೀತಿಯಿಂದ ಮಾತನಾಡಿದಾಗ, ಆಗುವ ಸಂತೋಷ ಅದ್ಭುತ. ಆನ್‌ಲೈನ್‌ನಲ್ಲಿ ಅದು ಸಿಗುವುದಿಲ್ಲ. ಶಿಕ್ಷಕರು ಪಾಠ ಮಾಡುವಾಗ ಗದರಿಸದರೇ ಅದಕ್ಕೂ ಒಂದು ಅರ್ಥವಿದೆ ಎಂದು ನೆರೆದಿದ್ದ ವಿದ್ಯಾರ್ಥಿ ಸಮೂಹಕ್ಕೆ ಸಲಹೆ ನೀಡಿದರು.

ಸಮಗ್ರ ಶಿಕ್ಷಣ ಎನ್ನುವುದು ಒಂದು ವಿಕಸಿತ ಪುಷ್ಪ. ಶಾಲಾ–ಕಾಲೇಜಿನ ಶಿಕ್ಷಣವು ವಿಕಸಿತ ಪುಷ್ಪದ ಒಂದು ದಳ. ಇದು ಪರಿಪೂರ್ಣ ವಿಕಸಿತ ಪುಷ್ಪವಲ್ಲ. ನಾನು ಇವತ್ತಿಗೆ 20 ವರ್ಷಗಳ ಹಿಂದೆ ಅನ್ಯ ದೇಶವೊಂದರಲ್ಲಿ ಪ್ರತಿಭಾವಂತ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಯೊಬ್ಬನನ್ನು ಸನ್ಮಾನಿಸಿದ್ದೆ. ಆತ 11 ಗೋಲ್ಡ್ ಮೆಡಲ್‌ಗಳನ್ನು ಪಡೆದುಕೊಂಡಿದ್ದ. ಈ ಊರಿಗೆ ಬಂದಿದ್ದು ಸಾರ್ಥಕವಾಯಿತು ಎಂದುಕೊಂಡು, ಆತನಿಗೆ ಒಳ್ಳೆಯದಾಗಲಿ ಎಂದು ಅರಸಿದ್ದೆ. 10 ವರ್ಷಗಳ ಹಿಂದೆ ಇಟಲಿಗೆ ಹೋಗಿದ್ದಾಗ, ಪತ್ರಿಕೆ ಓದುತ್ತಿದ್ದೆ. ಲಂಡನ್ ಏರ್‌ಪೋರ್ಟ್‌ನಲ್ಲಿ ಕಾರ್ ಬಾಂಬ್ ಸ್ಫೋಟವಾಗಿ ನೂರಾರು ಮಂದಿ ಸಾವನ್ನಪ್ಪಿದ್ದ ಸುದ್ದಿ ಕಂಡಿತು. ಈ ಸುದ್ದಿ ಓದಿ ಆಘಾತವಾಯಿತು ಎಂದು ಬೇಸರ ವ್ಯಕ್ತಪಡಿಸಿದರು.


ಈ ಕೃತ್ಯದಲ್ಲಿ ಭಾಗಿಯಾಗಿದ್ದ 8 ಮಂದಿ ಅಂತಾರಾಷ್ಟ್ರೀಯ ಭಯೋತ್ಪಾದಕರ ಪೈಕಿ ಒಬ್ಬ ನಾನು ಸನ್ಮಾನ ಮಾಡಿದ್ದ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಯೂ ಆಗಿದ್ದ. ಇದನ್ನು ತಿಳಿದ ನನಗೆ 8 ದಿನ ನಿದ್ದೆ ಬರಲಿಲ್ಲ. ಪ್ರಥಮ ರ್‍ಯಾಂಕ್ ಬಂದಿದ್ದ ವಿದ್ಯಾರ್ಥಿ ಈ ರೀತಿಯ ಕೃತ್ಯದಲ್ಲಿ ಭಾಗಿಯಾಗಲು ಸಾಧ್ಯವೇ ಎಂದು ಚಿಂತಿಸತೊಡಗಿದ್ದೆ. ಹಾಗಾಗಿ ಪರಿಪೂರ್ಣ ವಿಕಸಿತವು ಕೇವಲ ಶೈಕ್ಷಣಿಕ ಸಂಸ್ಥೆಗಳಲ್ಲಿ ದೊರೆಯುವುದಿಲ್ಲ. ಹಾಗಾಗಿಯೇ ನಮ್ಮ ಗುರುಗಳಾದ ಸ್ವಾಮಿ ಪುರುಷೋತ್ತಮಾನಂದರು ತಮ್ಮ 'ಯಶಸ್ವಿನ ರಹಸ್ಯ' ಪುಸ್ತಕದಲ್ಲಿ ವಿವಿಗಳು ಯೋಗ್ಯತಾ ಪತ್ರ ಕೊಡುತ್ತಿವೆ ಹೊರತು ಯೋಗ್ಯರನ್ನಲ್ಲ ಎಂಬಿತ್ಯಾದಿ ಅದ್ಭುತ ವಿಚಾರಗಳನ್ನು ದಾಖಲಿಸಿದ್ದಾರೆ ಎಂದು ವಿವರಿಸಿದರು.

ಇದೇ ವೇಳೆ ದಿನೇಶ್ ಕೋಚಿಂಗ್ ಸೆಂಟರ್‌ನಿಂದ ತರಬೇತಿ ಪಡೆದು ಕಳೆದ ವರ್ಷದ (2023–24) ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ 100ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಈ ಪೈಕಿ ರಾಜ್ಯಕ್ಕೆ ಎರಡನೇ ಸ್ಥಾನ ಗಳಿಸಿದ ಎಂ.ಡಿ. ಸುದೀಕ್ಷಾ (ರಾಜ್ಯ ಪಠ್ಯಕ್ರಮ) ಹಾಗೂ ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಸಂಸ್ಥೆಗೆ ಮೊದಲ ಸ್ಥಾನ ಪಡೆದ ಜಾಹ್ನವ ನೋರು ಅವರಿಗೂ ವಿಶೇಷ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಅಲ್ಲದೇ, ಕೋಚಿಂಗ್ ಸೆಂಟರ್‌ನಿಂದ ನಡೆಸಿದ್ದ ಜಿಲ್ಲಾ ಮಟ್ಟದ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದವರು ಹಾಗೂ ಪ್ರಸಕ್ತ ವರ್ಷದ ಕೋಚಿಂಗ್ ಸೆಂಟರ್‌ನ ವಿದ್ಯಾರ್ಥಿಗಳಿಗೆ ನಡೆಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಣೆ ಮಾಡಲಾಯಿತು.

ಇದಕ್ಕೂ ಮುನ್ನ ಸ್ವಾಮಿ ವೀರೇಶಾನಂದ ಸರಸ್ವತೀ ಅವರ 'ವಿವೇಕಧಾರಾ' ಕೃತಿ ಬಿಡುಗಡೆ ಮಾಡಲಾಯಿತು. ಮೈಸೂರು ವಿವಿ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು, ಕೋಚಿಂಗ್ ಸೆಂಟರ್‌ನ ಮುಖ್ಯಸ್ಥ ಎನ್.ವಿ.ದಿನೇಶ್ ಮತ್ತಿತರರು ಹಾಜರಿದ್ದರು.

ಕಲಾಮಂದಿರ ಆವರಣದ ಕಿಂದರಿ ಜೋಗಿ ಪ್ರತಿಮೆಗೆ ಹೊಸ ರೂಪ



ಮೈಸೂರು, ನ17(ಪಿಎಂ)– ರಂಗಾಯಣ–ಕಲಾಮಂದಿರ ಆವರಣದಲ್ಲಿ ನವೀಕೃತಗೊಂಡ ಕಿಂದರಿ ಜೋಗಿ ಪ್ರತಿಮೆ ಭಾನುವಾರ ಅನಾವರಣಗೊಂಡಿತು.

ಕಳೆದ 30 ವರ್ಷಗಳ ಹಿಂದೆ ಈ ಪ್ರತಿಮೆ ರಂಗಾಯಣ ಮತ್ತು ಕಾವಾ ಸಹಯೋಗದಲ್ಲಿ ನಿರ್ಮಾಣಗೊಂಡಿತ್ತು. ಆಗ ಹಿರಿಯ ಕಲಾವಿದ ದ್ವಾರಕನಾಥ್ ನೇತೃತ್ವದಲ್ಲಿ ಈ ಪ್ರತಿಮೆ ನಿರ್ಮಿಸಲಾಗಿತ್ತು. ಈಗ ಅವರ ಶಿಷ್ಯರೂ ಆದ ಕಾವಾ ವಿದ್ಯಾರ್ಥಿಗಳಾದ ಡಿ.ಪೃಥ್ವಿ, ಇ.ಸ್ನೃದುಲ್ ಹಾಗೂ ಎಸ್.ಮಿನಲ್‌ಕುಮಾರ್ ಸದರಿ ಪ್ರತಿಮೆಗೆ ಮರು ರೂಪ ನೀಡಿದ್ದಾರೆ.

ಈ ಕಾರ್ಯಕ್ಕೆ ಕಾವಾ ವಿದ್ಯಾರ್ಥಿಗಳು ದ್ವಾರಕನಾಥ್ ಅವರದ್ದೇ ಮಾರ್ಗದರ್ಶನ ಸಹ ಪಡೆದಿದ್ದಾರೆ. ಪ್ರತಿಮೆಯು ಅಲ್ಲಲ್ಲಿ ಬಿರುಕು ಬಿಟ್ಟಿತ್ತು. ಇದೀಗ ಅದನ್ನು ದುರಸ್ತಿಗೊಳಿಸಲಾಗಿದೆ. ಜೊತೆಗೆ ಪ್ರತಿಮೆಯ ಕೋಡುಗಳಿಗೆ ಮರು ರೂಪ ನೀಡಲಾಗಿದೆ. ಇದೀಗ ಹೊಸ ಬಣ್ಣಗಳೊಂದಿಗೆ ಪ್ರತಿಮೆ ಕಂಗೊಳಿಸುವಂತಾಗಿದೆ.

ಭಾನುವಾರ ಸಂಜೆ ಮರು ರೂಪ ಪಡೆದ ಪ್ರತಿಮೆ ಅನಾವರಣ ಕಾರ್ಯಕ್ರಮ ನಡೆಯಿತು. ಮೈಸೂರು ರಂಗಾಯನದ ಮಾಜಿ ನಿರ್ದೇಶಕರಾದ ಸಿ.ಬಸವಲಿಂಗಯ್ಯ, ಹೆಚ್.ಜನಾರ್ಧನ್ (ಜನ್ನಿ), ಹಾಲಿ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಟಿ.ಗುರುರಾಜ್, ರಂಗ ಸಮಾಜದ ಸದಸ್ಯ ಸುರೇಶ್ ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಸೇರಿದಂತೆ ರಂಗಾಯಣದ ಕಲಾವಿದರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'ಚೆಕ್‌ಮೇಟ್' 100ನೇ ಪ್ರದರ್ಶನ: ರಂಗಾಯಣದ ರೆಪರ್ಟರಿಯ ಹಿರಿಯ ಕಲಾವಿದರಿಂದ 'ಚೆಕ್‌ಮೇಟ್' ನಾಟಕದ 100ನೇ ಪ್ರದರ್ಶನ ಭೂಮಿಗೀತ ರಂಗಮಂದಿರದಲ್ಲಿ ಭಾನುವಾರ ನಡೆಯಿತು. ವಾರಾಂತ್ಯವಾದ ಕಾರಣ ರಂಗಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ನಾಟಕ ನೋಡಲು ಜಮಾಯಿಸಿದ್ದರು. ಹೀಗಾಗಿ ಇಡೀ ರಂಗಮಂದಿರ ಭರ್ತಿಯಾಗಿತ್ತು. ಹಾಗಾಗಿ ಕೆಲವರು ನಿಂತು ನಾಟಕ ವೀಕ್ಷಿಸಿದರು. ಅಲ್ಲದೆ, ಟಿಕೆಟ್ ದೊರೆಯದೇ ಹಲವರು ನಿರಾಸೆಯಿಂದ ನಿರ್ಗಮಿಸಿದರು.

